ಬಾಕಿ ಎಲ್ಲಾ ನಗಗಳನ್ನು ಇದೇ ಬೇರೆಗೆ ಕಮ್ಮಿ ದರದ ಮಜೂರಿಯಲ್ಲಿ ಅನುಕೂಲದ ಸ್ವತಾರ ಗ್ಯಾರೆಂಟಿ ಮೇಲೆ ತಯಾರಿಸಿ ಕೊಡಲಾಗುವದು. ಹೆಚ್ಚಿನ ವಿವರಕ್ಕಾಗಿ ಈ ಕೆಳಗಿನ ವಿಳಾಸಕ್ಕೆ ಬರೆಕೊಂಡಲ್ಲಿ ವಿವರವಾಗಿ ತಿಳಿಸಲಾಗುವದು.

ವಿಳಾಸ— ಯಸ್. ಯಸ್. ಮೂಳಪ್ಪಶೆಟ್ಟಿ,
ಚಿನ್ನೆ, ಬೆಳ್ಳಿ ವ್ಯಾಪಾರಿ,
ಮಹದೇವಪೇಟೆ,
7–6 ಮಡಿಕೇರಿ.

ಬಾಲಾರ್ಕಮದು.

ನಿಮ್ಮ ಮಕ್ಕಳ ಸೌಂದರ್ಯವನ್ನು ನೋಡಬೇಕಾದರೆ ಆರೋಗ್ಯಭರಿತವಾದ ಬಾಲಾರ್ಕಮಧುವನ್ನು ಕೊಡಿ ಮಕ್ಕಳು ರೋಗ



ಪ್ರಸಿದ್ಧರಾಗಿ ಎಸ್ಟೇ ಕ್ಷೀಣವಾಗಿದ್ದರೂ ಇದರಿಂದ ಬಹು ಬೇಗ ಪುಷ್ಟಿಯೂ, ಬಲವೂ ಉಂಟಾಗುವದು. ದಿನ ದಿನಕ್ಕೆ ಆರೋಗ್ಯವೂ, ತೂಕವೂ ಹೆಚ್ಚುವದು. ಇದು ಮಧುರವಾಗಿದೆ ಚಿಕ್ಕ ಮಕ್ಕಳು ಆನಂದದಿಂದ ಸೇವಿಸುತ್ತಾರೆ ಬೆಲೆ 1 ಕ್ಕೆ ೧೫ ಆಣೆ ಟಿ. ಪಿ. 9 ಆಣೆ.

52–1ತೆ ಯಂ. ವಿ. ಪ್ರಸಾದಿಕ್,
ಔಷಧಾಲಯ, ಶಿವಮೊಗ್ಗಾ.
(ಮೈಸೂರು ಸೀಮೆ)

ವರ್ತಮಾನ ಸಂಗ್ರಹ.

ಒಳದೇಶ.

ಈ ತಾ. 26ರಲ್ಲಿ ಸಾಯಂಕಾಲ ಮಡಿಕೇರಿಗೂ, ಇನ್ನು ಕೆಲವು ಸ್ಥಳಗಳಿಗೂ ಒಂದು ಒಳ್ಳೇ ಮಳೆ ಹೊಡೆಯಿತು.

ಮೂರನಾಡು ಅಸ್ಪತ್ರೆಯು ಬರುವ ಏಪ್ರಿಲ್ ತಾ. 3ರಲ್ಲಿ ಜೀವ್ ಕಮಿಷನರವರಿಂದ ತೆರೆಯಲ್ಪಡುವುದೆಂದು ತಿಳಿಯಬರುತ್ತದೆ.

ಮಡಿಕೇರಿನಾಡು ಮದೆ ಗ್ರಾಮದ ಕಾಳ್ಯದ ನಂಜಪ್ಪನೆಂಬವರು ಈ ತಾ. 26ರಲ್ಲಿ ಬೆಳಿಗ್ಯೆ ಸಿರೂಪದ ಕಾಡಿಗೆ ಸಾದೆ ತಡಿಯಲಿಕ್ಕೆಂದು ಹೋದವರು ಹಾಲೆಮನ್ನು ಮರದಿಂದ ಬಿದ್ದು ಮರಣ ಹೊಂದಿದರೆಂದು ವರ್ತಮಾನ.

ನೆ. ಕೋದಂಡ ಮಾದೈಯ್ಯನವರ ಹರಿಜನ್ನಲ್ಲಿ ಇಟ್ಟಿರುವ ಬಟ್ಟಲಿನ ಸನ್ನ ಮಕ್ಕಳ ಹಾಕಿ ಟೂರ್ನಮೆಂಟು ಈ ತಾ 10ರಲ್ಲಿ ಮಡಿಕೇರಿ ಕ್ರಿಕೆಟ್ ಮೈದಾನದಲ್ಲಿ ಪ್ರಾರಂಭವಾಗಿ ತಾ 25ರಲ್ಲಿ ಮುಗಿಯಿತು. ಅಪ್ಪೆರ, ಆಟದಲ್ಲಿ ಕೊಡಗರ ಬೋರ್ಡಿಂಗ್ ಟೀಮಿನವರು ರಾಜಾಸೀಟ್ ಟೀಮಿನವರನ್ನು ಸೋಲಿಸಿ ಇನಾಮು ಬಟ್ಟಲನ್ನು ಗೆದ್ದರು

ಕೊಡಗು ಎಜ್ಜೆಟ್ಟು ಎಲೋಸಿಯೇಶನ್ ಬೈಸಿಸ್ ಟೂರ್ನಮೆಂಟಿನ ಆಟ್ಟೂರು ಸಿಂಗಲ್ಸ್ ಪಂದ್ಯಾವಳಿಯು ಈ ತಾ. 23ರಲ್ಲಿ ನಡೆದು ಸಿ ಎ ಜೋಸವಾನನು ಪಿ ಆರ್ಯಾರವರನ್ನು ಸೋಲಿಸಿ ಬಟ್ಟಲನ್ನು ಗೆದ್ದರು. 'ಹ್ಯಾಂಡಿಕ್ಯಾಪ್' ಪಂದ್ಯದ ಆಟದಲ್ಲಿ ಮೆ. ಕೊರಿಯಂಡ ಏಯ್ಯಣ್ಣನವರು ಗೆದ್ದರು. ಆಟವಾದನಂತರ ರಂ ಬಾ ಕೇಟಿಳೀರ ಜಿಗಸ್ವನವರು ಡ್ಯುಲ್ಸ್ ಸಿಂಗಲ್ಸ್ ಮತ್ತು ಹ್ಯಾಂಡಿಕ್ಯಾಪ್ ಪಂದ್ಯಾವಳಿಗಳಲ್ಲಿ ಗೆದ್ದವರಿಗೆ ಇನಾಮು ಬಟ್ಟಲುಗಳನ್ನು ಕೊಟ್ಟರು.

ಈ ವರ್ಷ ವಿರಾಜಪೇಟೆಯಲ್ಲಿ ನಡೆಯಲಿಕ್ಕಿರುವ ಭಾರತೀಯ ವಿದ್ಯಾರ್ಥಿಗಳ ಸಂಘದ ವಾರ್ಷಿಕ ಮಹಾಸಭೆಯ ಸ್ವಾಗತ ಕಮಿಟಿಯ ಪ್ರಥಮ ಸಿಟಿಂಗ್ ಈ ತಾ 26ರಲ್ಲಿ ವೀರರಾಜಪೇಟೆ ಪಾಠಿ ಗ್ರಂಥಾಲಯದ ಮೆಹತಿಯಲ್ಲಿ ಮೆ ಪಬ್ಲರ ಜಿಗಜಪ್ಪನವರ ಅಧ್ಯಕ್ಷತೆಯಲ್ಲಿ ನಡೆದು, ಮೆ ಪೂವಂಡ ಗಣಪತಿಯವರು ಸ್ವಾಗತ ಕಮಿಟಿಯ ಅಧ್ಯಕ್ಷರಾಗಿಯೂ, ಮೆ. ಗುತ್ತಾಂಡ ಬೇಮೈಯ್ಯನವರು ಸೆಕ್ರೆಟರಿಯಾಗಿಯೂ, ಮತ್ತು ಮೆ. ಪ್ರೊಸ್ಟಕ್ಟಿರ ಬೈಪ್ಪನವರು ಖಜಾಪಿಯರಾಗಿಯೂ ಆರಿಸಲ್ಪಟ್ಟರು. ಇದರ ಹೆಚ್ಚಿನ ವಿವರವು ಬರುವವಾರ ಪ್ರಕಟಿಸಲಾಗುವುದು.

ತಾ. 23-3-30ರಲ್ಲಿ ಮಡಿಕೇರಿ ಪೊಲೀಸ್ ಹೈ ಸ್ಕೂಲ್ ಹಾಲ್‌ನಲ್ಲಿ ಕಾಟಕೇರಿ, ಇಬ್ನಿವಳವಾಡಿ, ಹೊರಪೊಲೆ, ಹಾಲೇರಿ, ಮಡಿಕ್ಕೇರಿನಾಡು, ಮಕ್ಕಂದೂರು ಮತ್ತು ಕೆದರಳ್ ಗ್ರಾಮಗಳಲ್ಲಿ ನಡೆಯುವ ಮಹಿಷಾಸುರಮರ್ದನ ತಿಂಗಳ ಉತ್ಸವವನ್ನು ನಿರ್ವಹಿಸಲು ಮೆ. ಪಂದ್ಯಂಡ ಬೈಪ್ಪನವರ ಅಧ್ಯಕ್ಷತೆಯಲ್ಲಿ ಸದರಿ ಗ್ರಾಮಸ್ಥರ ಒಂದು ಸಭೆ ಸೇರಿತ್ತು. ಅನೇಕರ ಭಾಷಣಗಳಾದನಂತರ ಎಲ್ಲರೂ ಏಕೋಭಾವದಿಂದ ಮಹಿಷಾಸುರತಿಂಗಳನ್ನು ಬಂಡಿಸಿ ಸರಾವು ಮಂಜೂರು ಮಾಡಿದಲ್ಲದೆ ಈ ಹೀನ ಪದ್ಧತಿಯನ್ನು ನಿಲ್ಲಿಸುವ ಪ್ರಯತ್ನಕ್ಕೆ ಗ್ರಾಮವಾರು ಇಬ್ಬರು ಕಮಿಟಿ ಮೆಂಬರುಗಳು ಆರಿಸಲ್ಪಟ್ಟರು ಇದರ ವಿವರವು ಬರುವ ವಾರ ಪ್ರಕಟಿಸಲಾಗುವುದು

ಬರುವ ಏಪ್ರಿಲ್ ತಾ. 25ರಲ್ಲಿ ನಡೆಯಲಿಕ್ಕಿರುವ ಡಿಸ್ಟ್ರಿಕ್ಟ್ ಬೋರ್ಡಿನ ಜನರಲ್ ಜುನಾಮೆಗೆ ಈ ಕೆಳಗಿನ ಮಹನೀಯರು ಉಮೇದುವಾರರಾಗಿ ನಿಂತಿರುವೆಂದು ತಿಳಿಯುತ್ತೇವೆ ನಾಡಿಗೆ ಒಬ್ಬರಿಂತೆ ಮೊತ್ತ ಜುನಾಮಿನಲ್ಲಪಡೆಯಲಿಕಾಗಿದೆ ತ್ರೀಮಂಗಲ ನಾಡಿನ ಪರವಾಗಿ—ಮೆ. ಗಳಾದ ಅಜ್ಜಮಾಡ ಮಾದಪ್ಪನವರು, ಕೀಯನಂಡ ನಂಜಪ್ಪನವರು ಮತ್ತು ಕಾಡ್ಯಮಾಡ ಏಯ್ಯಮ್ಮನವರು. ಪೊನ್ನಂಪೇಟೆ ನಾಡಿನ ಪರವಾಗಿ ಮೆ. ಜಮ್ಮಡ ಮಾದಪ್ಪನವರು, ಮತ್ತು ನೆ ಪುಟ್ಟಿಮಾಡ ಮಾಯ್ಯಯ್ಯನವರು; ಅಮ್ಮತ್ತಿ ನಾಡಿನ ಪರವಾಗಿ ನೆ. ಗಳಾದ ಬನಂಡ ಕಾರ್ಯಪ್ಪನವರು ಮತ್ತು ಮುಳ್ಳಾಟಿರ ಅಪ್ಪಚ್ಚನವರು, ವೀರಾಜಪೇಟೆ ನಾಡಿನ ಪರವಾಗಿ—ಮೆ ಗಳಾದ ಮುಕ್ಕಾಟಿರ ಕಾವೇರಿಯ್ಯನವರು, ನಾಯಪಂಡ ಬೆಳ್ಯಪ್ಪನವರು ಮತ್ತು ಕೀತಿಯಂಡ ಕುಶಾಲಪ್ಪನವರು ನಾಪೋಕ್ಲು ನಾಡಿನ ಪರವಾಗಿ—ಮೆ. ಗಳಾದ ಬೆಪ್ಪೋಳಂಡ ಮಾಚ್ಚಯ್ಯನವರು, ನಾಪನೆಯಂಡ ಪೊನ್ನಪ್ಪನವರು ಮತ್ತು ಬಿದ್ದಂಡ ಸೆಬಯ್ಯನವರು, ಭಾಗಮಂಡ್ಲ ನಾಡಿನ ಪರವಾಗಿ—ಮೆ. ಪಟ್ಟಮಾಡ ಚಿಣ್ಣಪ್ಪನವರು ಮತ್ತು ಮಡಿಕೇರಿ ನಾಡಿನ ಪರವಾಗಿ—ಮೆ ಗಳಾದ ಪಚ್ಚಿಮೀರ ಸಿ. ಬೆಪ್ಪಯ್ಯನವರು ಮತ್ತ ಸಾಂಡಂಡ ತಿಗಣಪ್ಪನವರು. ಸುಂಟಿಕೊಪ್ಪ ನಾಡಿನ ಪರವಾಗಿ—ಮೆ. ಗಳಾದ ಮನೆಮಂಡಂಡ ಏಯ್ಯಪ್ಪನವರು ಮತ್ತು ಕೊಂಗಿಪ್ಪೀರ ಅಪ್ಪಯ್ಯನವರು. ಶ್ರೀಮಂಗಲ ನಾಡಿನ ಪರವಾಗಿ—ಮೆ. ಗಳಾದ ಮೀನಾ. ಅನ್ನಾ. ಕಾಮ-ಶಿಟ್ಟಿಯವರು ಮತ್ತ ಎ ಕಾಳಯ್ಯನವರು, ಸೋಮವಾರಪೇಟೆ ನಾಡಿನ ಪರವಾಗಿ—ಮೆ. ಚೌಡ್ಲು ಕಾರ್ಯಪ್ಪನವರು ಕರ್ಕಳ್ಳ ಪುಟ್ಟಿಯ್ಯನವರು ಮತ್ತು ಕೆಪ್ಪೆಟ್ಟಿರ ಪೂವಯ್ಯನವರು; ಶನಿವಾರಸಂತೆ ನಾಡಿನ ಪರವಾಗಿ—ಮೆ. ಹೆಮ್ಮನ ಅಚ್ಚುಣ್ಣನವರು ಮತ್ತು ಹುಣ್ಣಿ ಪುಟ್ಟಣ್ಣನವರು. ಇವರಲ್ಲಿ ಎ. ಪಟ್ಟಮಾಡ ಚಿಣ್ಣಪ್ಪನವರು ಏಕಾಂತರಾಗಿಗಳಲ್ಲಿದ್ದರಿಂದ ಓಲ್ಡ್ ಜುನಾಮಿತರಾಗುವರು.

ಏಪ್ರಿಲ್ ತಾ. 25ರಲ್ಲಿ ನಡೆಯಲಿಕ್ಕಿರುವ ಕೌನ್ಸಿಲ್ ಜನರಲ್ ಜುನಾಮೆಗೆ ಈ ಕೆಳಗಿನ ಮಹನೀಯರು ಉಮೇದುವಾರರಾಗಿ ಈ ತಾ. 26ರಲ್ಲಿ ಶಿಫಾರಸ್ಸು ಪತ್ರಗಳನ್ನು ಕೊಟ್ಟಿರುವರೆಂದು ತಿಳಿಯಬರುತ್ತದೆ. ಕೆಗ್ಗಟ್ಟುನಾಡು ತಾಲೋಕಿನ ಜನ್ಮದವರ ಪರವಾಗಿ ಇರುವ ಎರಡು ಮೆಂಬರುತನಗಳಿಗೆ ಮೆ. ಗಳಾದ 1. ಚಿಟ್ಟಿಯಡಿರ ಪೂವ್ವೆಯ್ಯನವರು, 2. ಎ ಕಾಳಯ್ಯನವರು, 3 ಕೊಂಗಂಡ ಗಣಪತಿಯವರು., 4 ಪುಟ್ಟಚೆಟ್ಟಿರ ನಾಣಯ್ಯನವರು ಮತ್ತು 5 ಪುಟ್ಟಚೆಟ್ಟಿರ ನಾಣಯ್ಯನವರು, ಸಾಗಿನವರ ಪರವಾಗಿ ಇರುವ ಒಂದು ಸ್ಥಳಕ್ಕೆ ಮೆ. ಗಿರಿಗೌಡರ ನಂಜಪ್ಪನವರು ಮಾತ್ರ. ಎಡೆನಾಲ್ಕನಾಡು ತಾಲೋಕಿನ ಜನ್ಮದವರ ಪರವಾಗಿ ಇರುವ ಮೂರು ಸ್ಥಳಗಳಿಗೆ ಮೆ. ಗಳಾದ 1. ಅವ್ವಾರಂಡ ಜಂಗಪ್ಪನವರು, 2 ಕೋದಂಡ ಉತ್ತಯ್ಯನವರು, 3. ಪಡಿಕೇರಿಯಂಡ ಸೋಮಯ್ಯನವರು ಮತ್ತು 4 ಬಲ್ಲಚಂಡ ಬೆಪ್ಪಯ್ಯನವರು, ಸಾಗಿನವರ ಪರವಾಗಿ ಇರುವ ಒಂದು ಸೊಬರುತನಕ್ಕೆ ಪೆ ತಿರುನೆಲ್ಲಿಗಡಾ ಏಳ್ಳೆಮನೆಯ ಮೊತ್ತ; ಮೆಡಿಕೇರಿ ತಾಲೋಕಿನ ಜನ್ಮದವರ ಪರವಾಗಿ ಇರುವ ಎರಡು ಸ್ಥಳಗಳಿಗೆ ಮೆ. ಗಳಾದ 1. ಬಿಜಿಟ್ಟಿರ ಸಿ ಸೆಬ್ಬಯ್ಯನವರು, 2. ಬಿದ್ದಂಡ ಯಂ. ಏಮ್ಮು ಪ್ಪನವರು, 3. ಪಾತಂಡಾಡ ಜಂಗಪ್ಪನವರು ಮೊತ್ತ 4 ಪಾಲೇಕಂಡ ಏಮ್ಮುಣ್ಣನವರು, ಸಾಗಿನವರ ಪರವಾಗಿ ಇರುವ ಒಂ ದುಸ್ಥಳಕ್ಕೆ ಮೆ ನಿತ್ಯಾರುಲೆ ನೊಮ್ಮಪ್ಪನವರು ಮಾತ್ರ, ಸುಂಟಿಕೊಪ್ಪ ಜಾಟ್ಟಣ ತಾಲೋಕಿನ ಜನ್ಮದವರ ಪರವಾಗಿ ಇರುವ ಒಂದು ಸ್ಥಳಕ್ಕೆ ಮೆ. ಚಾತ್ತು ಕಾರ್ಯಪ್ಪನವರು ಮಾತ್ರ; ಸಾಗಿನವರ ಪರವಾಗಿ ಇರುವ ಒಂದು ಸ್ಥಳಕ್ಕೆ ಮೆ. ಗಳಾದ 1 ಡಿ ನಂಜರಾಮಣ ಶೆಟ್ಟಿರು ಮತ್ತು 2. ಹೊಸ್ಕ ಚೆಪ್ಪಮೆಲ್ಲಪ್ಪನವರು. ಶನಿವಾರಸಂತೆ ನಾಡಿನ ಪರವಾಗಿ—ಮೆ. ಗಳಾದ 1. ಬಿ ಜಪ್ಪನವರು, ಮೆ ತಿರುನೆಲ್ಲಿಗಡಾ ಏಳ್ಳೆಮನೆಯ ಮತ್ತು ಮೆ. ಚಿಕ್ಕಿ ಪ್ಪ ಕಾಳಪ್ಪನವರು ಎದುರಾಳುಗಳಿಲ್ಲದ್ದರಿಂದ ಓಲ್ಡ್ ತೆಗೆದು ಕೊಳ್ಳಲ್ಪಡಿ ಜುನಾಮಿತರಾಗಿ.ವರು. ಕೌನ್ಸಿಲು ಜುನಾಮಿಗೆ ಒಬಿ ನಿಂತಿರುವರ ನುಘನ ತತ್ವದರ್ಶನಸಂಸ್ಥೆ ನಡೆಯುವವರಾರೂ ಉಮೇದುವಾರರಾಗಿ ನಿಂತಿರುವುದಿಲ್ಲವೆಂದು ತಿಳಿಯುತ್ತೇವೆ

ಈ ದಿನ ಬೆಳ್ಳಿಗೆ ಸುಮಾರು 9 ಗಂಟೆಗೆ ಮಡಿಕೇರಿ—ಮಡಿಕೇರಿ—ವೀರಾಜಪೇಟೆ ರಸ್ತೆಯ 10½ ಮೈಲಿಗಲ್ಲ ಬಳಿ ಆಟೊಗಾಡಿ ಕಾಂತಿಲ್ಲಿ ಆ ಗಡಾಸೀ ದಾಖಲೆ ಒಂದು ಮಹಮ್ಮದೀಯರ ಕೈಚೀ ಕೈತ್ತಿಯೊಂದು ರಸ್ತೆಗೆ ಬಿದ್ದಿತ್ತು ತಕ್ಷಣ ಸಿಕ್ಕಿದೆಯೆಂದು, ಆವನ್ನು ವಶೀಲಿಸಿ ತಗೆದುಕೊಂಡು ಹೋಗಬಹುದೆಂದೂ ಬಾಡಗ ಗ್ರಾಮದ ಮೆ ಕೋಟಿರ ಸುಬ್ಬಯ್ಯನವರು ತಿಳಿಸುತ್ತಾರೆ

ಹಿಂದೂದೇಶ.

ಒಂದು ವಿಭಿನ್ನದಲ್ಲಿ ಮಹಾತ್ಮ ಗಾಂಧಿಯವರಿಗೆ ಒಪ್ಪಿ ಬಾಲಕನು ಕೊಟ್ಟ ಒಂದು ಬಾಳಿಕೆಯನ್ನು ಪರಾಜು ಹಾಕಿರು ಆ ತಾಯಿಯ ತಂಂಡಿಗೆ 200 ರೂ ಬೆಲೆ ಬೊ ರೆಯುತ್ತಂತೆ!

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ವಿಭಿನ್ನಗು ಈ ತಾ. 21ರಲ್ಲಿ ಅಹ್ಮದಾಬಾದಿನಲ್ಲಿ ಕೌಂಗ್ರೆಸ್ಸಿನ ಅಧ್ಯಕ್ಷ ರಾದ ಸುಂತ ಜವಾಹರ್ ಲಾಲ್ ನೆಹರುವರರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಪೂರ್ಣ ಸ್ವಾತಂತ್ರ್ಯವನ್ನು ಸಡೆಯಲು ಕಾಯಿದೆ ಭಂಗವನ್ನು ಕೈಕೊಳ್ಳಬೇಕೆಂದು ವರ್ಕಿಂಗ್ ಕಮಿಟಿಯವರು ಮಾಡಿದ ತೀರ್ಮಾನವನ್ನು ಮನ್ನಿಸಿ ಸ್ವಾಂತೀಕ್ಷ ಕಾಂಗ್ರೆಸ್ ಕಮಿಟಿಗಳೂ ಈ ಕೆಲಸದ ವಿಶಾಖನ್ನು ಕೈಕೊಳ್ಳಬೇಕೆಂಕ ತೀರ್ಮಾನಿಸಿದರು.

ಲಕ್ನೋಗೆ ಸೇರಿದ ಒಲಾಡುಹರು ಡಿಸ್ಟ್ರಿಕ್ಟಿನಿಂದ ಸ್ವಾಯತ್ತಯವಿಧಾಯಕ ಸಭೆಯ ಮೆಂಬರಾಗಿದ್ದ ಕಾಂಗ್ರೆಸ್ ಭಕ್ತರೊಬ್ಬರು ಮೊಂಠಾಡನವನ್ನು ಬಿಟ್ಟುದರ ಮೇಲೆ ಅವರ ಬದಲು ಬೇರೊಬ್ಬರು ಜುನಾಮಿಸಲ್ಪಡುವುದಕ್ಕಾಗಿ ವೀರಸಿಂಗ್ ಮತ್ತು ಹೋತಿಲಾಲ್ ಎಂಬಿಬ್ಬರು ಉಮೇದುವಾರರುಗಳಾಗಿ ನಿಂತಿದ್ದರು ಈ ಜುನಾಮೆಗೆ ಒಟುಗಳು ಬಾಡದಂತೆ ಆ ಡ್ಡಿ ಪಡಿಸಲು ಕಾಂಗ್ರೆಸ್ ಪ್ರಚಾರಕರೂ, ವಿದ್ಯಾರ್ಥಿಗಳೂ ಇನ್ನಿರಂಗೆ ಬೋಧಿಸಿದರಲ್ಲದೆ ಜುನಾಮೆಗೆ ದಿನದ ಜುನಾಮೆಯ ಸ್ಥಳಗಳ ದಾಖಲುಲ್ಲಿ ಜನರು ತಿರುಗಾಡುತ್ತಿ ಅಡ್ಡವಾಗಿ ನು ಆಗಿಕೊಂಡರು. ಅವರ ಪಕ್ಷದಲ್ಲಿ ವಿದ್ಯಾವಂತಿಯರು ಅಡ್ಡ ಅಕಾಗಿ ನಿಂತಿದ್ದರು. ಒಟರುಗಳು ಇವರುಗಳನ್ನು ವಾಟಿಕೊಂಡು ಒಂದೇ ರಾತ್ರಿದ್ದಿತು ಇವರ ಅನೇಕರು ಹಾಗೆ ಮಾಡಲಿಷ್ಟ ವಡಲಿಲ್ಲವಾಗಿ 20,000 ಒಟರುಗಳು ಬಂದೇಕಾಗಿದ್ದರಲ್ಲಿ 21 ಒಟರುಗಳು ಸೂತ್ರ ಬಂದಿದ್ದು ಅನರಲ್ಲರೂ ವೀರಶಿಂಗನಿಗೇ ಒಟು ಕೂಟ್ಟಿದ್ದರಿಂದ ಆತನು ಉತ್ತೀರ್ಣರಾದರು. ಅವರ ಪ್ರತ್ಯರ್ಥಿಗೆ ಬಂದು ಒಟೂ ಬಿದ್ದಿಲ್ಲವಂತೆ!

ಮಹಾತ್ಮಗಾಂಧಿಯವರು ತಮ್ಮ ಶಾಂತ ಸೈನಿಕರೊಡನೆ ಉಪ್ಪು ಮಾಡಲು ಹೊರಟಿರ ವಿಷಯ ಯಾತ್ರೆಯಲ್ಲಿ ಮುಂದುವರಿಯುತ್ತಿರುವರು. ಅವರು ಹಾದು ಹೋಗುವ ಗ್ರಾಮಗಳಲ್ಲೆಲ್ಲಾ ಜನರು ಜಯಕಾಹಾರಿಂದ ಅವರನ್ನು ಸತ್ಕರಿಸುತ್ತಿರುವರು ಹಲವರು ಕಾಯಿದೆ ಭಂಗನನ್ನು ಕೈಕೊಳ್ಳಲು ಸ್ವಯಂ ಸೇವಕರಾಗಿ ಮುಂದು ಬುತ್ತಿರುವರು. ಸುಹಾತ್ಮರಿಗೆ ಗ್ರಾಮವಾಸಿಗಳು ಧನ ಸಹಾಯವನ್ನೂ ಮಾ ಡುತ್ತಿರುವರು. ಗ್ರಾಮಾ ಪಟೇಲರುಗಳ ರಾಜೀನಾಮೆಯ ಸಂಖ್ಯೆಯು ದಿನೇ ದಿನೇ ವಿಸ್ತಾರ ಇದೆ. ಸುಹಾತ್ಮರ ಸೈ ನಿಕರಲ್ಲಿ ಒಬ್ಬನಿಗೆ ಸಿಮಾಬೂ, ಜೀರ 18 ಜನರಿಗೆ ಸ್ವಲ್ಪ ಅಸ್ವ ಸ್ಥವೂ ಇನಿತ್ತು. ಅವರಲ್ಲಿ ಹೆಚ್ಚಿನವರಿಗೆ ಈಗ ಆರಾಮಾಗಿದೆ. ಮಹತ್ಮರು ಉಪ್ಪು ಮಾಡುವ ಜಲಲಪುರಕ್ಕೆ ತಲಪಲು ಇ ನ್ನೂ ಕೆಲವು ದಿವಸಗಳು ಬೇಕಾಗುವವು ಜಲಲಪುರವನ್ನು ಸರ್ಕಾರದವರು ವಿಶೇಷ ಪೊಲೀಸು ಬಂದೋಬಸ್ತು ಮಾಡಿ ತ್ತಿರುವರು ನಮ್ಮೆದುರ ಕರೆಯಲ್ಲಿ ಮಹಾತ್ಮರ ದಾಳಿಗೆ ಆ ಡ್ಡಿಯಾಗಿ ಸೈನಿಕರನ್ನು ನಿಲ್ಲಿಸುವರೆಂದು ಸುದ್ದಿ ಇದೆ. ಮಹಾತ್ಮರ ಪತ್ನಿಯಾದ ಕಸ್ತೂರಿಬಾಯಿ ಗಾಂಧಿಯವರು ಸ್ವೀ ಸ್ವಯಂಸೇವಕರೊಂದಿಗೆ ಉತ್ತ್ಯ ನಡಲು ಹೊರಹುವರೆಂದು ವರ್ತಮಾನವಿದೆ ಏನಾಗಲಿ ಅಂದ್ಯ, ಸುಪಾತಾತ್ಮ್ಯ, ಸಂಯುಕ್ತ ಪ್ರಾಂತ್ಯ, ಪಂಜಾಬ್ ಪ್ರಾಂತ್ಯ ವ್ಯಾಪ್ತಿಯ, ಕರ್ನಾಟಕ, ತಮಿಳುನಾಡು ಮುಂತಾದ ಸ್ಥಾಂತ್ಯಗಳಲ್ಲಿ ಸತ್ಯಾಗ್ರಹ ಪವನ್ನು ಸ್ವಾರಂಭಿಸಲು ಸಿದ್ಧತೆಗಳು ಆಗುತ್ತಿವೆ. ಎಲ್ಲಾ ಕಡೆಗಳಲ್ಲಿಯೂ ಮಹಾತ್ಮರ ಹುಕುಮನ್ನು ತಾಯುತ್ತಿರುವರು.

ಸೆಂಟ್ರಲ್ ಬ್ಯಾಂಕು ವಿಭಿಂಗು.

ಈ ಬ್ಯಾಂಕಿನ ವಿಭಿಂಗು ತಾ 23ರಲ್ಲಿ ನಡೆಯಿತು. ಬಾಯಿಂ ಅಧ್ಯಕ್ಷರಾದ ರಾ. ಬಾ. ಕೆ. ಅಪ್ಪಯ್ಯನವರು ಹಾ ಜರಿಲ್ಲದ್ದರಿಂದ ರಾ. ಬಾ ಪಿ ದೇವೈಯ್ಯನವರು ಅಸ್ಥಿಕ್ಷರ ನಿಗಡಿಸಿ. 9 ಡೈರೆಕ್ಟರುಗಳು ಹಾಜರಿದ್ದರು.

1. ಕಳೆದ ವಿಭಿಂಗನ ಪ್ರೊಸೀಂಗ್ಸ್‌ನ್ನು ಓದಿ ಒಪ್ಪಲಾಯಿತ.

2. ಕಳೆದ ಫೈನರಿ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಸುಜಾರು ಮಾಡಲಾಯಿತು.

3 ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು ವೀರಾಜಪೇಟೆ ಬಾಸ್ ಸೊಸೈಟಿಗೆ ರೂ. 300, ಸೋಮವಾರಪೇಟೆ ಸೆಲ್ಫ್‌ಎಡ್ಡಿಗೆ ರೂ 2000, ಕೆಸುಡಾಡುನಾಡು ಸೊಸೈಟಿಗೆ ರೂ 1000, ನಾಪೋಕ್ಲು ಸೊಸೈಟಿಗೆ ರೂ. 100, ವೈಲಾತ್ತೂರ ಸೊಸೈಟಿಗೆ ರೂ 400, ಅಜ್ಜಮಾಡ ಕುಂಞಿಂಟ ಸೊಸೈಟಿಗೆ ರೂ. 200, ಕುಂದಳ್ಳಿ ಕೃಷ್ಣಿ ಸೊಸೈಟಿ ರೂ 200, ಮುಳ್ಳುಸೋಗೆ ಸೊಸೈಟಿಗೆ ರೂ. 400, ವಿರಾಜಪೇಟೆ ಸೊಸೈಟಿಗೆ ರೂ. 500, ಕೋಕೇಂ ಸೊಸೈಟಿಗೆ ರೂ 1000.

4. ಕೋಟ್ಟೆರು, ಜೆಬಳೆಂಡ, ಬಿಳಿಗೇರಿ ಬೈರಂಡ ದೇವನಾಗಿ ಬಿ, ಹೊದವಾಡ ಮತ್ತು ಹಾಗಲ್ಲು ಸೆಲ್ಫ್‌ಎಡ್ಡಿಗಳಿಗೆ ಕಾರಣಾಂತರಗಳಿಂದ ಸಾಲ ಮಂಜೂರಾಗಿಲ್ಲ.

5 ಬ್ಯಾಂಕಿನ ಕಳೆನ ಜನರಲ್ ವಿಭಿಂಗನ್ನು ತಿಂಡಿ ತೀರ್ಥ ನಿಯಮಗಳಿಗೆ ಈ ಮೊದಲೆ ತಿರ್ಮಾನವಾದ ಪ್ರಕಾರ ಪೆಟ್ಟಿಗೆ ವರ್ತಮಾನದಿಂದ ಪ್ರಕಟಿಸಿದ ಪ್ರ—1—) ಆಗೆ ಸನ್ನ ಸುಂಜಸ ರಿಷ್ಕಾಡುವುದೆಂಕ ಪೈಸಲಾಯಿತು

6. ಪೊನ್ನಂಪೇಟೆ ಯೂನಿಯನ್‌ನವರು ಈ ವರ್ಷ ಭತ್ತ ಕ್ಕೆ ಧಾರಣೆ ಇಲ್ಲಾದ್ದರಿಂದ ಸದರಿ ಯೂನಿಯನ್‌ಗೆ ಸೇರಿದ ಎಲ್ಲಾ ಸೊಸೈಟಿಗಳಿಂದ ಸೆಂಟ್ರಲ್ ಬ್ಯಾಂಕಿಗೆ ಸಾರ್ತ ತಾ. 31 ರೊಳಗೆ ಪಾವತಿ ಮಾಡಬೇಕಾದ ಸಾಲದ ಹಣಕ್ಕೆ ಏಪ್ರಿಲ್ ಆಕ್ಟೋಬರ್ ವರೆಗೆ ವಾಯಿದೆ ಕೊಡಬೇಕಾಗಿ ಬ್ಯಾಂಕ್ಕಿಂದ ಅರ್ಜಿ ಮಂಜೂರಾಕ್ಕಿಲ್ಲವಲ್ಲಿ.

7 ಜೆ.ಅವರು, ಹುದಿಕೇರಿ, ಕೆಸಿಕ್ಕೈ, ಕಡೆದಂಡಾ ಮತ್ತು ಟ್ರೇಜರ್ಸ್ ಕೋಪರೇಟಿವ್ ಸ್ಟೋರ್ಸ್ ಸೊಸೈಟಿಗಳು ತಮ್ಮ ಕಾರ್ಪಸ ಹಣವನ್ನು ಪಾವತಿ ಮಾಡುವ ವಾಯಿದೆಗಿಂತ ಬಹಳ ಕ್ಕಿಂತ ಅಡಿಗಳಿಗೆ ವಾಯಿದೆ ಕೊಡಲು ಆಗುವುದಿಲ್ಲವಾಗಿ ತೀರ್ಮಾನವಾಯಿತು.

8. ಬ್ಯಾಂಕಿನ ಅಫೀಸು, ಗುದಾಮ್ಸರ ವೆಗೈರೆಗಳ ಬಡ ಆಸಾಮಿ ವಿಷಯ ಇದ್ದ ಕಾಗದುಗಳು ಇನ್ನೊಂದು ವಿಭಿಂಗಿಗೆ ಮುಂದುವರಿಡಲಾಯಿತು.

ಪಿ ದೇವೈಯ್ಯ,
(ಅಧ್ಯಕ್ಷರು).

ಶ್ರೀಮಂಗಲನಾಡು ಓಟರುಗಳಲ್ಲಿ ವಿನಂತಿ.

ದೇಶ ಸೇವೆ ಮಾಡಬೇಕೆಂಬ ಅಭಿಲಾಷೆಯು ಸನ್ನಲ್ಲಿ ಅಂಕುರಿಸಿ ವೃದ್ಧಿಸುತ್ತಾ ಬಂದದ್ದರಿಂದ ಬರುವ ಏಪ್ರಿಲ್ ತಾ೨೫ನೇ ಶನಿವಾರ ಜರಗುವ ಡಿಸ್ಟ್ರಿಕ್ಟ್ ಬೋರ್ಡು ಜುನಾಮೆಗೆ ಈ ನಾಡಿನ ಪರ ನಾ ನೊಬ್ಬ ಉಮೇದ್ವಾರನಾಗಿರುತ್ತೇನೆ. ಇದನ್ನು ತ ರುಗಳಲ್ಲಿ ಈ ಮೊದಲೆ ಪತ್ರ ಪತ್ರಿಕ ಮೂಲಕವೂ ಸ್ವತಃ ಕಾಡೂ ಪ್ರಸ್ತಾಪಿಸಿಕೊಂಡಿರ್ತ್ತೀನೆ. ನಾ ದ್ಯವಾದ ಮಟ್ಟಿಗೆ ಜನಾಧಿಪತ್ಯವೃದ್ಧಿಯನ್ನು ಕುರಿತು ಸ ಕಾರವರಲ್ಲಿ ಹೋರಾಡಲು ಬದ್ಧ ಕಾರಣನಾಗಿರು ತ್ತೇನೆ ತಮ್ಮಗೆ ಹಣ್ಣಾಗಿರುವ ಸಾತ್ಮಕಾಧಿಪತ್ಯ ಓ ನ್ನು ಮೊಲ್ಲಂಡ ಕಾಲೇಕ ೨೬—1—೩೦ರಲ್ಲಿ ನ ಸರುಪಮೋಡಿಸಿ ನನ್ನ ಮೇಲಿನ ತತ್ವಕ್ಕೆ ಕೆಂಚಿ ತ ಎಚೆಕೆಡಬೇಕಾಗಿ ತಮಗಳಲ್ಲಿ ವಿನಯದಿಂದ ವಿ ಜ್ಞಾಪಿಸಿಕೊಳ್ಳುತ್ತೇನೆ.

ಹುದಿಕೇರಿ, ತಮ್ಮ ಕೃಪಾಭಿಲಾಷಿ,
೨೬—೩—೩೦ ಕಂಡಿಯಮಾಡ ನಂಜಪ್ಪ.

2—1

ಸಪ್ತಸ್ವರ ಸಮಾಚಾರ.

ಚಾಕ್ಟಿದಾರರು. ಪಡುವ ಅಭ್ಯಾಸಾಂಗಕ್ಕೆ ಪತ್ರಿಕಾ ಕಂಠರು ಜನಾಪ್ತರಿದ್ದಲ್ಲಿ. ಸಂ.]

ಅಮ್ಮತ್ತಿ ಶಾಲೆಯ ವಾರ್ಷಿಕೋತ್ಸವ.

ಶಾ. 8–3–30ರಲ್ಲು ಅಮ್ಮತ್ತಿ ಎ. ವಿ. ಸ್ಕೂಲಿನ ದ್ವಿತೀಯ ವಾರ್ಷಿಕೋತ್ಸವವು ಮೆ. ಪುಟ್ಟಿಮಾಡ ನಾಣಯ್ಯ ಬಿ ಎ. ಬಿ. ಯಲ್. ಸರ ಅಧ್ಯಕ್ಷತೆಯಲ್ಲು ಜರಗಿತು.

ಸುಮಾರು ಮುನ್ನೂರು ಮಹನೀಯರೂ, ಮಹಿಳೆಯರೂ ನೆರೆದಿದ್ದರು. ಮೆ. ಯಂ. ಸಿ. ಅಪ್ಪಚ್ಚನವರೂ, ಶಾಲಾ ಸೂಪರ್‌ವೈಜರ್ ಮೆ. ಯನ್. ಸಿ. ಚಿಣ್ಣಪ್ಪನವರೂ ಸ್ಪೋರ್ಟ್ಸ್‌ನಲ್ಲಿ ಕುಂಬಾ ತೊಂದರೆ ತೆಗೆದುಕೊಂಡು ಶಾಲಾ ಉಪಾಧ್ಯಾಯರುಗಳಿಗೆ ಸಹಾಯವನ್ನು ಕೊಟ್ಟರು.

ಈ ಶಾಲಾ ವಂದ್ಯದಾಟವು ಸುಮಾರು 12 ಗಂಟೆಗೆ ಆರಂಭವಾಯಿತು. ನಂತರ ಸುಮಾರು ಮೂರು ಗಂಟೆಗೆ ಎಲ್ಲಾ ಜನರು ಶಾಲೆಯ ಹಾಲಿನಲ್ಲಿ ನೆರೆದು, ಅಧ್ಯಕ್ಷರ ಮುಖಾಂತರ ಗೆದ್ದವರಿಗೆ ಇನಾಮುಗಳನ್ನು ಹಂಚಲಾಯಿತು.

ತರುವಾಯ ಈ ಶಾಲಾ ವರದಿಯನ್ನು ಇಲ್ಲಿನ ಉಪಾಧ್ಯಾಯರಾದ ಮೆ. ಬಿ. ಯಂ. ಜಿಮ್ಮಯ್ಯನವರು ಓದಿ ಹೇಳಿದರು. ಆ ಮೇಲೆ ಮೆ. ಯನ್. ಯಸ್. ದೇವಯ್ಯನವರು ಮತ್ತು ಮೆ. ಐ. ಪಿ. ಕಾರ್ಯಪ್ಪನವರು ವಿದ್ಯೆಯ ವಿಷಯ ಉಪನ್ಯಾಸವನ್ನು ಮಾಡಿದರು. ನಂತರ ಮೆ ಯನ್. ಸಿ. ಚಿಣ್ಣಪ್ಪನವರು ಮಕ್ಕಳ ಬೆಳವಣಿಗೆಯ, ಮಕ್ಕಳ ವಿಷಯ ಪೋಷಕರು ತೆಗೆದುಕೊಳ್ಳಬೇಕಾದ ಎಚ್ಚರಿಕೆಯನ್ನೂ, ಅವರ ವಿದ್ಯಾಭಿವೃದ್ಧಿಗೋಸ್ಕರ ಮಾಡಬೇಕ್ಕಾ ಕರ್ತವ್ಯವನ್ನೂ ಮತ್ತು ಕುಡುಕತನದ ಗುಣಾವಗುಣವನ್ನೂ ತಕ್ಕ ಉದಾಹರಣೆಗಳಿಂದ ವಿವರಿಸಿ ಚಲೋದಾದ ಒಂದು ಪುಟ್ಟ ಉಪನ್ಯಾಸವನ್ನು ಮಾಡಿದರು.

ಇದಾದ ಮೇಲೆ ಮಕ್ಕಳ 'ಇರ್ವನ್' ಸಂಘದ ವರದಿಯನ್ನು ನೆಕ್ರೆಟರಿ ಮೆ. ಕೆ. ಎ. ಪೂಣಚ್ಚಯ್ಯನವರು ಹಿಡಿದರು. ಇದರಲ್ಲಿ ಆ ಎಳೇ ಬಾಲಕರು ಚರ್ಚಿಸಿರುವ ಆನೇಕವಿಷಯಗಳನ್ನು ನಾವು ಅವರ ವರದಿಯಲ್ಲಿ ಕೇಳಿ ಅತ್ಯಂತ ಸಂತೋಷ ಪಟ್ಟೆವು.

ತರುವಾಯ ಅಧ್ಯಕ್ಷರು ಶಾಲಾಭಿವೃದ್ಧಿಯ ವಿಷಯ ಮಕ್ಕಳ ತಂದೆಗಳಿಗೂ ಉಪಾಧ್ಯಾಯರುಗಳಿಗೂ ಇರತಕ್ಕ ಸ್ನೇಹ ಪರಿ ಮತ್ತು ವಾರ್ಷಿಕೋತ್ಸವದ ಪ್ರಯೋಜನವನ್ನು ಕುರಿತು ಸಾರ್ವರಸ್ಯವಾದ ಭಾಷಣವನ್ನಿತ್ತರು. ಇದಾದ ಮೇಲೆ ವಿದ್ಯಾರ್ಥಿಗಳು ಎಳೇ ಮಕ್ಕಳು ನಾಟಕ ಅಭಿನಯಿಸಿದರು. ಇಷ್ಟು ಚಿಕ್ಕ ಮಕ್ಕಳು ಮೂಡಿದಂಥ ವಿಕ್ರಮ ವಿಜಯ ನಾಟಕವು ಬಹು ಆನಂದಕರವಾಗಿತ್ತೆಂಬುದನ್ನು ಬಿತ್ತಿ ಹೇಳಬೇಕಾಗಿದೆ. ಇವರುಗೂ ಮತ್ತು ಇವರ ಉಪಾಧ್ಯಾಯರುಗಳಿಗೂ ಹೆಚ್ಚಿನ ಸಹಾಯವನ್ನು ಕೊಟ್ಟಲ್ಲು ಇದಕ್ಕಿಂತಲೂ ಹೆಚ್ಚಾದ ಅಭಿವೃದ್ಧಿಯನ್ನು ತೋರಿಸಲು ಏನೊಂದೂ ಅಡ್ಡಿ ಇಲ್ಲವೆಂಬುದು ನಮಗೆಲ್ಲಾ ಕಂಡು ಬಂತು.

ಕಡೆಗೆ ನಾಟಕದಲ್ಲಿ ಜೆನ್ನಾಗಿ ನಟನೆಯನ್ನು ಮಾಡಿದವರಿಗೂ, ನವೀನವಾಗಿ ಪದವನ್ನು ಹೇಳಿದವರಿಗೂ, ಹಾಸ್ಯಗಾರರಿಗೂ, ಶಾಲೆಯಲ್ಲಿ ಹೆಚ್ಚಿನ ಅಭಿವೃದ್ಧಿಯನ್ನು ತೋರಿಸಿದವರಿಗೂ ಇನಾಮುಗಳನ್ನು ತಂಜಿದರು. ಇದಾದನಂತರ ಅಧ್ಯಕ್ಷರಿಗೆ ವಂದನೆಯನ್ನು ಆರ್ಪಿಸಿ ಮಂಗಳಂ ಹಾಡಿ ಮುಕ್ತಾಯಗೊಳಿಸಿದರು.

ಈ ಚಿಕ್ಕ ಪ್ರೈಮರಿ ಶಾಲೆಯಲ್ಲಿ ಎಳೇ ಮಕ್ಕಳಿಗೆ ಈ ಬೀತಿಯಾದ ತರಬೇತನ್ನು ಅತೀ ಶ್ರಮದಿಂದ ಆಭ್ಯಾಸಿಸಿದ ಉಪಾಧ್ಯಾಯರುಗಳಿಗೆ ನಮ್ಮ ವಂದನೆಯನ್ನು ಸೂಚಿಸಬೇಕಾಗಿದೆ. ಅದೂ ಅಲ್ಲದೆ ಆವರೆಲ್ಲರೂ ಇನ್ನು ಮುಂದಕ್ಕೂ ಹೆಚ್ಚಾದ ಪ್ರೋತ್ಸಾಹವನ್ನು ತೆಗೆದುಕೊಂಡು ಇದರ ಇಮ್ಮಡಿ ಯಷ್ಟು ಅಭಿವೃದ್ಧಿಗೊಳ್ಳಲು ಆ ಭಗವಂತನು ಅನುಗ್ರಹಿಸಲೆಂದು ನಾವೆಲ್ಲರೂ ಆನವರತವೂ ವಾಞ್ಛಿಸುತ್ತೇವೆ.

ನಟ್ಟುಪ್ಪ. ಯಂ. ಉತ್ತಯ್ಯ.

ನಿರ್ಭಯತ್ವವೂ ಸ್ವಹೃದ್ಯ ನಿರ್ವಾಹಣವೂ ಅಥವಾ ಯುವಕರ ಕರ್ತವ್ಯ.

ಇಂದಿನ ಭಾರತವು ಸ್ವತಂತ್ರೇಚ್ಛೆಗಳ ಖಂಡು ಕೇಂದ್ರವಾಗಿರುವುದಲ್ಲವೇ! ಸರ್ವರೂ 'ಸ್ವತಂತ್ರ,' "ಸ್ವತಂತ್ರ" ನೆಂದು ಕೂಗಾಡುತ್ತಿರುವರು.

ಸ್ವತಂತ್ರದ ಇಚ್ಛೆಯು ಎಲ್ಲಾ ಜೀವಿಗಳಿಗೂ ಉಂಟಾಗ ತಕ್ಕದ್ದೂ, ಉಂಟಾಗಬೇಕಾದದ್ದೂ ಆಗಿದೆ. ಆದರೆ ಸ್ವತಂತ್ರವನ್ನು ಅನುಭವಿಸುತ್ತಾ ಹೋದ ಹಾಗೆಲ್ಲಾ ಆಹಂಕಾರವು ಮನುಷ್ಯನನ್ನು ಮತ್ತೊಂದು ಕಡೆಯಿಂದ ಕೆಳಗೆ ಎಳೆದು ಹಾಕುತ್ತಾದೆಂಬುದನ್ನು ಅನೇಕರು ತಿಳಿದಿರುವುದಿಲ್ಲ. ಆಹಂಕಾರವು (ಹೆಚ್ಚಲು ಕಾರಣ—ಅನವಶ್ಯಸು ತೆನ್ನೆ ನಿಜಶ್ವವನ್ನು ಸ್ವೀಕರಿಸಿದ್ದು ಹಾಗೆಯೇ ಇನಸಮೂಸದಲ್ಲಿ ಆಧ್ಯಾತ್ಮಿಕ ವಿಷಯ ಸಾಮಾನ್ಯ ಜ್ಞಾನವಿದ್ದರೂ ಬೆಳೆಯಬೇಕಾದ ಒಂದು ಬಾಲಯನ್ನು ತೆರೆದಿಡಬೇಕು. ಸ್ವತಂತ್ರಗಳಾಗುವುದರ ಜೊತೆಯಲ್ಲಿ ಅತಂಕಾರವೂ ಬೆಳೆಯುತ್ತಿರುವುದಾದರೆ ಎಲ್ಲಿಯೂ ಸಮಧಾನವನ್ನು ಸಾಽಸಲು ನಿರ್ವಾಹವಿಲ್ಲದೆ ತೊಂದರೆಗಳನ್ನು ಹೆಚ್ಚಿಸಿಕೊಂಡಂತಾಗುವುದು.

ಬಲ್ಯಕಾಲಗಳು ನಿಸ್ಸಾರವಾದ ಕಾರ್ಯಗಳಲ್ಲಿಯೂ ಸಹ ಶ್ರದ್ಧೆಯನ್ನಿಡುತ್ತಾದೆ. ಆದರೆ ಸಾಮಾನ್ಯ ಜನರು ನಿಸ್ಸಾರವಾದುದೆಂದು ಬೇಕಾ ತಿಳಿದುಬಿಡುತ್ತಾರೆ. ಆದರೆ ಫಲವನ್ನು ಮುಕ್ತಾಯಿಂದು ನಿರ್ದಾರದಲ್ಲಿ ಪರಿಪೂರ್ಣವಾಗಿ ಅನುಭವಿಸಬೇಕಾಗಿ ಬರುವುದು. ಹೌದು! ಅಂಥಾ ದುಷ್ಟಲವನ್ನು ಈಗ ಭಾರತ ಭೂಮಿಯು ಅನುಭವಿಸುತ್ತಿದೆಯಲ್ಲವೇ?

ಈಗ ಭಾರತೀಯರು ನಿಯಮಗಳೆಂಬ ಮುಳ್ಳು ಬೇಲಿಗಳಲ್ಲಿ ನಿಲುಕಿ ಕೊಂದರೆ ಪಡುತ್ತಿರುವ ಕಾರಣಗಳು ಅದಿಯಲ್ಲಿ ಎಷ್ಟೋ ನಿಸ್ಸಾರವಾದವುಗಳಾಗಿದ್ದವು. ಆಗ ಅವುಗಳು ನಮ್ಮ ಜೀವತೆಗೆಗೂ ಕೂಡ ನಿರ್ಲಕ್ಷ್ಯವಾದವುಗಳೆಂದು ತೋಚಿದವು. ಈಗ ಪೂರ್ತನಾಶವಾಗುವುದಕ್ಕೂ ಸಹ ಸ್ವಾತಂತ್ರ್ಯವಿಲ್ಲದೆ ಒದುಕಿದ್ದರೂ ಪೆಣಸಮಾನ ಪರಗಣಿಸಲ್ಪಡುತ್ತಿರುವೆವು. ಇದರ ಯತಾರ್ಥ ವಿಚಾರವೇ ಈಗ ಭಾರತ ಸಭೋ ನುಂಡಲವನ್ನಾ ವರಿಸಿರುವ ಸ್ವಾತಂತ್ರ್ಯ ಧ್ವನಿ!

ಇನ್ನಾದರೂ ನಾವು ನಿಸ್ಸಾರವಾದ ಕಾರ್ಯಗಳಲ್ಲೂ ಸಹ ನಾಶಮ್ಮು ಅಲೋಚನಾ ಪರರಾಗಿ ತಮ್ಮ ಸ್ವಂತ ಕೆಲಸಗಳನ್ನು ಕಾಲ ಕಾಲಕ್ಕೆ ನಿರ್ವಹಿಸಲು ಬೇಕಾದಷ್ಟು ಬಲವನ್ನು ಸಂಪಾದಿಸದೆ, ಅಲ್ಲೂ ಇಲ್ಲೂ ಸಂಘವಸೃತ್ತಿರುವ ಆಶ್ಚರ್ಯಗಳಲ್ಲಿ ಆಹ್ಲಾದಿಸಿಕೊಂಡು ಅನ್ನಕ್ಕೂ ಗತಿ ಇಲ್ಲದೆ ಆಸ್ಥರ ಶಿಕ್ಷೆಗೆ ಒಳಪಟ್ಟುಕೊಂಡು ಕಾಲಯೂಪನೆ ಮಾಡಬೆವಾದರೆ ಶ್ರೀಘ್ರದಲ್ಲಿ ಸ್ವಾತಂತ್ರ್ಯ ವಿಚಾರ ಚಿಂತನೆಗಳನ್ನೂ ಸಹ ನಿರ್ಯಮ ಮಿತ್ಯರಿಂದ ಬೆದರಿಸುವರೋ ಎಂಬುದಾಗಿ ಚಿನ್ನಾಗಿ ಆಲೋಚಿಸಬೇಕಾದ ಸಮಯ ಬಂದಿರುವುದು.

ಪುರಾಣ ಪುಣ್ಯ ಪುರುಷರ ಮತ್ತು ವಿಶೇಷರ ನಾವನ ಚರಿತ್ರೆಗಳೂ, ಪರಿಶುದ್ಧವಾದ ಕಾರ್ಯಗಳೂ ತುಂಬಿ ತುಳುಕಾಡುತ್ತಿದ್ದ ಈ ಪುಣ್ಯ ಭೂಮಿಯಲ್ಲಿ ಆ ಚಂದಾರ್ಯತ್ವ ನೆಲೆ ನಿಲ್ಲಲಶಕ್ತ ವೀರ್ಯ, ಶೌರ್ಯ, ಪರಾಕ್ರಮಗಳೊಡಗೂಡಿದ ಪುರುಷ ಕೇಸರಿಗಳಂತಂತಶರಿಲ್ಪಟ್ಟಿದ್ದ ಈ ಪುಣ್ಯ ಭೂಮಿಯಲ್ಲಿ ಹುಟ್ಟಿದೊಂದು ಸ್ವಾತಂತ್ರ್ಯವಿಲ್ಲದಿರುವುದೆಯೊ, ತಿನ್ನುವುದಕ್ಕೂ, ತೊಟ್ಟು ಕೊಳ್ಳುವುದಕ್ಕೂ ಬಗೆ ಇಲ್ಲದಿರುವ ಜೀವಿಸಬೇಕಾಗಿ ಒಂದಿರತಕ್ಕಂಥಾ ಈ ದುರವಸ್ಥೆಯನ್ನು ಚಿಂತಿಸಿ ಪ್ರತಿಯೊಬ್ಬ ಯುವಕ ಯುವತಿಯ ಕಣ್ಣುಗಳಿಂದ ನೀರು ಬಾರದಿರದು! ಯಾರ ರಕ್ತ ಕುದಿಯದಿರದು!! ಯಾರ ಅಲಸ್ಯವು ತಾನೇ ಹೋಗದಿರದು!!!

ಆಹಾ! ಕಷ್ಟ!! ಪರಾಶ್ರಯದ ಮತ್ತು ದಾರ್ಢ್ಯಾಲ್ಪದ ಫಲವು ಎಷ್ಟೋ ಅಸಹನೀಯವಾಗಿ ಪರಿಣಮಿಸಿರುವುದು. ಈ ಆಪತ್ತಿನಲ್ಲಿ ಮುಂಬಿಳಿದು ಮುಂಬಾಗಿ ಹೋದ ಜೀವರಕ್ಷತ್ವವನ್ನು ಧುಮುಕಿ ಹೆಗೆಯಲು ನಿರ್ಭೀತರಾಗಿರಬೇಕು. ಕಾಲ ದೇಶಾವಸ್ಥೆಗಳನ್ನಾಲೋಚಿಸಿ ಸ್ವದುದ್ದಿಯಿಂದಲೂ, ಸ್ಥೈರ್ಯದಿಂದಲೂ ತನ್ನ ಕೃತ್ಯಗಳನ್ನು ಸಂಯಮಿಗಿ ನಡೆಸುತ್ತಾ ಹೋದರೆ ಪರತ್ರ ಜಯಕ್ಕೆ ಅವಕಾಶವಿರುವುದು. ದಾರಿಯಲ್ಲಂಠಾಗತಕ್ಕ ತೊಂದರೆಗಳಿಗೆ ಬೆದರಿ ಯಾವುದಕ್ಕೂ ಮುಂದಿಳಿಯದೆ ಇಹ ಲೋಕದ ಯೋಕ್ಯತೆಯ ಉದ್ದೇಶವನ್ನು ಹಾಳು ಮಾಡುವುದು ಧೈರ್ಯ ಭರತ ಮೂರ್ತಿಯ ಹೃದಯವನ್ನು ಸಂತೋಷ ಪಡಿಸಬೇಕಾದ ಯುವಕ ಯುವತಿಯರ ಕರ್ತವ್ಯವಲ್ಲ.

ಸದ್ವಿಚಾರಗಳನ್ನು ಬೆಳಸಿ ಸದುದ್ದೇಶಗಳನ್ನು ಲಕ್ಷಿಸಿ ನಿರ್ಭಯ ಮನಸ್ಕರಾಗಿ ಜೀವಯಾತ್ರೆಯನ್ನು ಸುರುಮಾಡುವಿರಾದರೆ ಯಾವ ತಾಲಾಕ್ಕೂ ಆಸ್ಪತ್ತಿಗೆ ಬೀಳಲಾರಿರಿ. ಒಟ್ಟು ಸಲ್ಲಿರತಕ್ಕಂಥಾ ವಿಚಾರಗಳನ್ನು "ಭಯ" ವೆಂಬ ಮಹಾ ವ್ಯಾಧಿಯು ಪೂರ್ತಿಯಾಗಿ ಹಾಳು ಮಾಡುವುದು. ಭಯವನ್ನು ಪೂರ್ತಿಯಾಗಿ ತ್ಯಜಿಸಿರಿ!

ಹೃದಯ ಕಮಲವು ನಿರ್ಭಾಽಯಿಂದ ವಿಕಸಿತವಾಗಲಿ. ಗಾಢವಾಗಿ ಆಲೋಚಿಸಿ ನಡೆಯಿರಿ. ಪ್ರತಿಯೊಂದರಲ್ಲಿಯೂ ಭಗುವಡಕಕ್ಕಂಧನಿಗೆ ಎಲ್ಲಿಯಗಿ ನ್ಥಾನವಿಲ್ಲ. ಜಯಕ್ಕೆ ಅವಕಾಶವೂ ಇಲ್ಲ. ಭಯವು ಗೌರವುಳ್ಳ ಕಾರ್ಯಗಳಲ್ಲಿಯೂ ಸಹ ಚಿಂತಿಸುದಕ್ಕೆ ಬಿಡದೆ ಆತಿ ನಿಶ್ಚೇಷ್ಟವಾದ ನಲೆಗೆ ಕೆಡುಹಿ ಕಷ್ಟವನ್ನು ಕೊಡುವುದು. ಆದುದರಿಂದ ಭಯವಿಲ್ಲದೆ ಧೈರ್ಯದಿಂದ ಮುಂದುವರಿಯಿರಿ! ಶಕ್ತಿಯಿಂದ ಪ್ರವರ್ತಿಸಿರಿ!!

ದೌರ್ಭಲ್ಯವನ್ನು ಕಿತ್ತುಬಿಸಾಡಿ, ನಿರ್ಭಯ ಮನಸ್ಕಾರರಾಗಿ ಮುಂದಿಳಿದು ಅನವರತಕ್ಕೂ, ಅನಾತ್ಮಕಂಶ್ಯ, ದಾರಿದ್ರ್ಯತ್ವ ಗಳಿಂದುಬ್ಬಗಳನ್ನು ನೀಕರಿಂದಟ್ಟಿ ಸುಖೋಛ್ಹಸವೂ, ಸಮೃದ್ಧಾಸ ಕರವೂ ಆನ ಒಂದು ಕಾಲದಲ್ಲಿ ಜೀವವನ್ನು ನುಬುವಿಂದ ಅನುಭವಿಸುತ್ತಾ ವಿಜಯ ಸ್ಕಂಧವನ್ನು ನೆಟ್ಟು ಸಂಕೃಷ್ಟತಾಗಲಿಕ್ಕೆ ನನಗೆ ಜಗದೀಶ್ವರನು ಕಟಾಕ್ಷಿಸಲಿ!

"ದೇತೀಯ."

ದೇಶ ಸೇವೆಯ ಶಾಖ.

(ಕಳೆದ ವಾರದಿಂದ ಮುಂದುವರಿದಮ್ಮು)

ರಾಜಕೀಯ ಸುಧಾರಣೆಗಳು ಇಡೀ ದೇಶದ ಹಕ್ಕಾಗಿದೆ ಅವುಗಳನ್ನು ಇಡೀ ದೇಶವು ಒಂದೇ ಸ್ವರದಿಂದ ಕೇಳಬೇಕಲ್ಲವೇ? ಕೂಡಗು ದೇಶದ ಜನರ ಮುಂದೆ ಬುದ್ಧಿಯನ್ನು ನೋಡಿ ಕೊಡಗನ್ನು ಇಂಡಿಯಾ ದೇಶದ ಬೇರೆ ವ್ಯಾಂತ್ಯಗಳ ಗಿಂತ ಇನ್ನೂತ್ತಾಯ ಪರ್ವದ ಹಿಂದೆ ಬಿಟ್ಟಿರುವರು. ಕಿಡು ನಮ್ಮ ದೇಶಕ್ಕೆ ಹೆಚ್ಚಿನ ಅಪಮಾನವಲ್ಲವೇ? ಈಗ ದೇತೀಯರಿಗೆ ಸಿಕ್ಕಿರುವ ಗಜಿಬಿಜಿ ಕುಮ್ಯೋಗಗಳ ಜೊತೆಗೆ ದೇಶಿಯರೇ ಒಂದೆಡೆ ಮಂತ್ರಿಗಳಾಗಿಯೂ, ದೇತಾಮಸೇ ಕೌನ್ಸಿಲ್ ಪ್ರೆಸಿಡೆಂಟರಾಗಿಯೂ ಇದ್ದಿದ್ದರೆ ನಮಗೆಷ್ಟು ಗೌರವವು ಕಿತ್ತು. ಅವುಗಳನ್ನು ಕೇಳಿವುದರಲ್ಲಿ ನಾವೇ ನಮ್ಮ ನಮ್ಮೊಳಗೆ ಜಗಳವಾಡಬಹುದೇ? ಇದೇ ಕೋಸುಂಬರಿ ಸಂಗಡಗಳಿಗೆ ಉಪಯೋಗಗಳು!

ದೇಶಾಭ್ಯುದಯಕ್ಕೆ ಸಹಾಯಕವಾದ ದೈವಿಕ, ಆರ್ಥಿಕ, ಸಾಮಾಜಿಕ (Religious, economic & social) ವಿಷಯಗಳ ಪ್ರಗತಿಗೆ ಪ್ರತ್ಯೇಕ ಜನಾಂಗಗಳ ಪ್ರತ್ಯೇಕ ಸಭೆಗಳಿರುವುದು ಉತ್ತಮ. ಆದರೆ ಇಂಥಾ ಸಭೆಗಳಿಗೆ ಯಾವಾಗ ರಾಜಕೀಯ ವಿಷಯಗಳನ್ನು ಸಹ ಸೇರಿಸಿಕೊಂಡರೋ ಆಗ ಆ ಜನಾಂಗಗಳ ಮತ್ತು ದೇಶದ ಮುಂದುವರಿಗೆಗೆ ಅಟಂಕವೆಂದು ಪುನಃ ಹೇಳಕತ್ತ ಅನಕ್ಯವಿಲ್ಲ. ಈ ಸಂದರ್ಭದಲ್ಲಿ ಕೊ. ಸ ಭೆ ಮತ್ತು ಗೌ. ಸಭೆಗಳು ಮಾಡುವ ಕೆಲಸಗಳನ್ನು ಜ. ಸಂಘಕ್ಕೆ ಕೂಡಲು ಅಸಾಧ್ಯ. ಆದರೆ ಈ ಸಭೆಗಳು ಆವರ ಹೆಸರಿನ ಧರ್ಮದಲ್ಲಿ ಕಂಡಿತವಾಗಿಯೂ, ಮುಖ್ಯವಾಗಿಯೂ ಮಾಡಬೇಕಾದ ಕೆಲಸಗಳನ್ನು ಮಾಡದೆ ಬಿಟ್ಟಿವೆ. ತಮ್ಮ ತಮ್ಮ ಜನಾಂಗಗಳ ಜನರ ಸುಬವನ್ನು ಕೊಂಡ ಮಟ್ಟಿಗಾದರೂ ಹೆಚ್ಚಿಸಲು ಈ ಸಭೆಗಳು ಎಷ್ಟರ ಮಟ್ಟಿಗೆ ಪ್ರಯತ್ನಿಸಿವೆ? ಆ ಜನಾಂಗಗಳು ಯಾತಕ್ಕೋಸ್ಕರ ದಿನೇ ದಿನೇ ಹೆಚ್ಚಿಚ್ಚಾಗಿ ದಾರಿದ್ರ್ಯಾವಸ್ಥೆಗೆ ಹೋಗುತ್ತಿವೆ ಎಂಬುದನ್ನು ಪರೀಕ್ಷಿಸಿ ಕೊಂಡ ನುಟ್ಟಿಗಾದರೂ ಆದರ ನಿವಾರಣೆಗೆ ಕೆಲಸ ಮಾಡಿದೆಯೇ? ಇದರ ಬದಿಂದಾ ಆ ಜನಾಂಗದವರಿಗೆ ಹೆಚ್ಚು ಉದ್ಯೋಗಗಳನ್ನು ಕೊಡಿಸಿದಾಡು, ನಮ್ಮ ಜನಾಂಗದವರಿಗೆ ಶೇಕಡ ಇಷ್ಟಾ ಷ್ಟು ಹುದ್ದೆಗಳನ್ನು ಕೊಡಬೇಕು ಎಂದು ಕೂಗುತ್ತಿರುವೆವು. ಇವುಗಳಿಂದ ಪ್ರಯೋಜನವೇನು? ಪ್ರಯೋಜನವು ಯಾರಿಗೆ? ಈಚೆಕಡೆ ಹೋರಾಟದಿಂದ ಆಯೋಯ ಜನಾಂಗದಲ್ಲಿಯ ಬಡವನ ಸ್ಥಿತಿಯು ಯಾವ ರೀತಿಯಲ್ಲಾದರೂ ಉತ್ತಮವಾಗುತ್ತಿದೆಯೇ? ಈ ತರದ ಹೋರಾಟದಿಂದ ಕೆಲವು ಮುಖ್ಯಸ್ಥರು ಜನಾಂಗಗಳ ಹೆಸರಿನಲ್ಲಿ ತಮ್ಮ ಸ್ವಂತ ಮುಂದುವರಿಗೆಯ ದಾರಿ ನೋಡುವರು.

ಕೊಡವ ಸಭೆಯವರು ಜನಿಂಗಾರರ ಸಂಘಕ್ಕೆ ಸೇರ ಕೂಡಬೆಂದು ಇವರದೊಂದು ರರಾವು ಜ. ಸಂಘದವರ ಕಿಂಚಿತ ತರದ ಹೃದಯದಿಂದಲೇ ಈ ತರಾವನ್ನು ತಂದವರೆಂದು ನನ್ನ ಊಹನೆ. ದೇಶದಲ್ಲಿಯ ಜನರಿಗೆ ವಿಶ್ವಾಸವಿರುವ ಈ ಸಂಘವು ಒಡನೇ ಈ ತರಾವನ್ನು ರದ್ದು ಮಾಡಬೇಕಾಗಿ ನನ್ನ ಕೋರಿಕೆ. ಕೊಡವ ಸಭೆಯವರು ರಾಜಕಾರ್ಯ ಹೋರಾಟದಲ್ಲಿ ಜ. ಸಂಘ್ಯು ಸೇರುವುದರಲ್ಲಿ ಹಾನಿ ಏನಿದೆ? ಜನಿಂಗಾರರ ಸಂಘವು ತಪ್ಪು ದಾರಿಯಲ್ಲಿ ನಡಿಯುತ್ತಿದ್ದರೆ ಕೊಡವ ಸಭೆಯವರಿಗೆ ಅದಕ್ಕೆ ಸರಿ ದಾರಿಯನ್ನು ತೋರಿಸಬ ಹುದಲ್ಲವೇ?

ಕೊಡವ ಸಭೆಯು ಸಾಮಾಜಿಕ ವಿಷಯಗಳನ್ನೇ ನಿರ್ವಹಿಸುವ ಸಭೆಯಾಗಿರಲಿ. ಅದಕ್ಕೆ ಕೊಡವರೆಲ್ಲರೂ ಸೇರಲಿ. ಆಲ್ಲಿಂದ ಕೊಡವ ಸಭೆಯ ಸಾವಾಜಿಕ ಸುಬಗಳಿಗೆ ಹೋರಾಡಿದರೆ ಕೊಡವ ಸಭೆಯು ಮುಂದಾಳುಗಳು ಹುಟ್ಟು ತಲೆಯಾಂತರ ಜನರ ಪ್ರೀತಿಗೆ ಪಾತ್ರರಾಗುವರು. ಹೀಗೆಂದೇ ಗಾಡ ಜನಾಂಗದವರೂ, ಜ. ಸಂಘವೂ ರಾಜಕೀಯ ವಿಷಯಗಳನ್ನೇ ಗಮನಿಸಿ, ಸಾಮಾಜಿಕ ಸಭೆಯವರೆಲ್ಲರೂ ಒಬ್ಬಸ್ಸನಿನಿಂದ ಅದಕ್ಕೆ ಸೇರಿದರೆ ಒಂದು ಕಡೆ ಸಾಮಾಜಿಕ ಐಕ್ಯಮತ್ಯವೂ ಮತ್ತೊಂದು ಕಡೆ ರಾಜಕೀಯ ಐಕ್ಯಮತ್ಯವೂ ಕುಂದಿಕವಿಲ್ಲದೆ ಬೆಳೆಯುವುದು ಇದನ್ನರಿತು ಎಲ್ಲಾ ಪಂಗಡದವರೂ ಒಂದು ಒಪ್ಪಂದಕ್ಕೆ ಬಂದರೆ ಮುಂದೆ ದೇತಕ್ಕೆ ನೆ ಭವಿಸುವ ಕೆಡುಕುಗಳು ನಿವಾರಿಸಲ್ಪಡುವವು. ಹೀಗೆ ನೂಡಡೆ ಆಗಿರುವಂತೆ ವೈಷಮ್ಯ ನಲಗದಲ್ಲಿಯೇ ಕೇಶಾಹುವಿದ್ದರೆ, ಅವರಿಂದ ಲಭಿಸುವ ಅಸಹಕಾರಕ್ಕೂ, ಹಾನಿಗೂ ಆಮೇಲೆ ಜವಾಬ್ದಾರರಾಗುವರಲ್ಲವೆ ಹುಟ್ಟು ತಲೆಯಾಂತರದ ಜನರ ಶಾಪಕ್ಕೆ ಒಳಗಾಗಿ ವರು.

"Deep malice makes too deep incision
Forget, forgive, conclude and be agreed."

ಕೂಡಗು ದೇಶದಲ್ಲಿ ಕೊಡವರೇ ಮುಖ್ಯ ಜನಾಂಗವರು ಆದರೆ ಇತರ ಜನಾಂಗವರೂ ನೆಲೆಗೊಂಡಿರುವ ದೇಶವಾಗಿದೆ. ಕೂಡಗು ದೇಶವೆಂಬ ಕೂಟಿಯಲ್ಲಿ ಕೊಡವ ಜನರು ಮುಖ್ಯ ಗೋಡೆಯಂತೆಯೂ ಇತರ ಜನಾಂಗದವರು ಬೇರೆ ಗೋಡೆಯಂತೆಯೂ ಇರುವರು. ಮುಖ್ಯ ಗೋಡೆಯೇ ಸಾಕಾದು ಇತರ ಗೋಡೆಗಳನ್ನು ಕೆಡವಿದರೆ ಕೋಟೆಯು ಸುರಕ್ಷಿತವಾಗುವಂತಾರನು. ಮುಖ್ಯಗೋಡೆಯು ಅವಶ್ಯವಿಲ್ಲವೆಂದು ಅದನ್ನು ನೆಲಸಮ ಮಾಡಲು ಪ್ರಯತ್ನಿಸಿದರೆ ಎಲ್ಲಾ ಗೋಡೆಗಳೂ ಸೇರಿ ಕೋಟೆಯು ಸುರಕ್ಷಿತವಾಗುವಂತಾರನು. ಮುಖ್ಯಗೋಡೆಯು ಅವಶ್ಯವಿಲ್ಲವೆಂದು ಅದನ್ನು ನೆಲಸಮ ಮಾಡಲು ಪ್ರಯತ್ನಿಸಿದರೆ ಎಲ್ಲಾ ಗೋಡೆಗಳೂ ಸೇರಿ ಕೋಟೆಯು ಸುರಕ್ಷಿತವಾಗುವಂತಾರನು. ಮೊನ್ನೆ ತಾನೇ ಬಿ. ಬಿ. ಮುನಿಸಾಮಿ ನಾಯುಡುಗಾರು ಮಡಿಕೇರಿಯಲ್ಲಿ ಮಾಡಿದ ಭಾಷಣದಲ್ಲಿ ಕೊಡಗಿನಲ್ಲಿ ಒ ಬ್ಬ ಮನುಷ್ಯನಿಂದ ಸಂಪೂರ್ಣವಾಗಿ ಬೊಹುದಮ್ಮೆಯು ಆಯಿತು ಎಂಬ ವಾಗಿ ಹೇಳುವಾಗ ದೇತೀಯ ಎಲ್ಲಾ ಜನಾಂಗದವರು ಒಮ್ಮೆ ನಸ್ಸಿನಿಂದ ನಂತೋಷ ಪಟ್ಟುರಬೇಕು. ಆವರ ಬಡಲು 20 ಮೆ ಬಿಷಮ್ಮೆಗಳಿಂದ. ಪೇಕಿಸ್ತಾನ ನಾಚಕೆಯಿಂದ ಎಲ್ಲರೂ ತಲೆ ಬಗ್ಗಿಸುತ್ತಿರಲು ನೀವೇ ನೀವೇ ಈ ಚಿಕ್ಕ ದೇಶವಾದ ಕೊಡಗಿನಲ್ಲಿ ಅಚಿಕ್ಕಾರಿ ಇಲಾಖೆಯ ಉತ್ತಮ್ಮಿಮನ್ನು ನೋಡಿ ನಾ ಚಿಕೆ ಪಡದೆ ಇರುವ ದೇತೀಯನು ಯಾರು?

ಇದೆಲ್ಲವನ್ನೂ ಅರಿತು ದೇಶ ಸೇವೆಯಲ್ಲಿ ಪೆಸರ್ಕ್ಷವಿದೆಯೆಂಬುದನ್ನು ತಿಳಿದ ಮಹನೀಯರು ಪ್ರತ್ಯೇಕ ಸಂಘ ಬದವರನ್ನು ವಿಶ್ವಮತ್ಯದಿಂದಿವಲು ದೋಧಿಸಿ ದೇತದಲ್ಲಿ ಐಕ್ಯ ಟ್ಟು ತರಲು ಯತ್ನಿಸುವರಾಗಿ ನಂಬುತ್ತೇನೆ.

ಈ ಎಲ್ಲಾ ಪಂಗಡದವರು ಪವಿತ್ರ ದೇತ ಸೇವೆಯ ನೆ ದಲ್ಲಿ ಇನ್ನೂ ಅಗಿದುನಂತಿ ಬಹಾ ಸುಂದರೀಯವಾದ

ಯಾ ಯಾವುದೊಂದು ಸಮುದಾಯವಿಲ್ಲದ ಮತ್ತು ಎಲ್ಲಾ ಪಂಗಡಗಳ ಜನರಿಗೂ ಸ್ವೀಕೃತ್ಯಕ್ಕೆ ಅನ್ವಯವಾದ ಕೊಡುವ ಮತ್ತೊಂದು ಪಂಗಡವು ತಲೆಯೆತ್ತುವುದೋ ಎಂಬುದನ್ನು ಎದುರು ನೋಡುತ್ತಿರುವೆನು

'Ah! when shall all men's good
Be each man's rule, and universal Peace
Lie like a shaft of light across the land

ಕೆ ಯಂ ಪೂನೆಯ್ಯ

ಸಣ್ಣ ಹುಡುಗರ ಸಲುವಾಗಿ

ಡೋಂಗರೆ

ಇವರ

ಬೂಲಾಮೃತ.

ವನ್ನು

ಕೊಡುವುದರಿಂದ

ಸಶಕ್ತರೂ, ಪುಷ್ಟರೂ ಮತ್ತು

ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪೆನಿ,

52–20 ಗಿರಿಗಾಂವ, ಮುಂಬಯಿ.

High Bonus! Cheap Premium!! Reliable Payment!!!

THE

GREAT EASTERN LIEE ASSURANCE COMPANY LTD.

(Incorporated in Straits Settlement)

LONDON OFFICE
27, Old Jewing, London E C

REGISTERED HEAD OFFICE
Winchister House Singapur S S

BRANCH OFFICE
Dady House, 50–52, Churchgate Street, Fort Bombay.

Authorised Capital
$ 250 000

Paid up Capital
$ 142 010

Funds Exceed
Rs 1 40 00 000

Amount Assured Exceeds
Rs 5 00 00 000

Claims Paid Exceed
Rs 70 00 000

Bonus given last time is as high as Rs 30 to 36 per 1000 per year
Required able and energetic young men or retired officials to take up our agency in every village and town all over Coorg on handsome pay or liberal commission

ಕೊಡಗಿನ ಎಲ್ಲಾ ಗ್ರಾಮಗಳಲ್ಲಿಯೂ ಪಟ್ಟಣಗಳಲ್ಲಿಯೂ ನಮ್ಮ ಏಜೆಂಟರಾಗಲು ಗಟ್ಟಿಗರಾದ ಯುವಕರು ಇಲ್ಲವೆ ರಿಟಯರ್ಡಾದ ಉದ್ಯೋಗಸ್ಥರು ಬೇಕಾಗಿದ್ದಾರೆ ಒಳ್ಳೇ ಸಂಬಳ ಯೂ ಹೆಚ್ಚು ಕಮಿಷನು ಕೊಡುವಾಗುವುದು ಹೆಚ್ಚಿನ ಮಾಹಿತಿಗೆ ಕೆಳಗಿನವರನ್ನು ಬಿದ್ದು ನೋಡಿ ಒಹುದು

Apply for further particulars and Prospectus in person, to –

Messers G. R. Wallia & Co.,
Chief Agents, G. E. L. A. & Co., Ltd.
C/o C P C & Co, Ltd office
MERCARA

4–1



ಕಾರ್ಡ್ ಒರೆದರೆ ಅಗಿನ
ಕ್ಯಾಟಲಾಗು ಮೂಸಿಯೂಗಿ
ಕಳುಹಿಸಲ್ಪಡುವುದು

ಕೋವಿಗಳು, ಕತ್ತಿಗಳು, ಬಚ್ಚಿಗಳು, ತೋಟಿಗಳು, ಕೇಪ್ಸುಗಳು, ಮದ್ದು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ಬೆಲೆಯಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24–6 210 Abdul Rehman Street, BOMBAY.

ಎಂ. ಎಸ್. ಶಿವಪ್ಪಯ್ಯನವರ್ಕ್.

ಹಂಚಿ ಕೆಲ್ಸನಿಯಂ ಪ್ಯಾಕಾರಿಗಳು, ಮೈಸೂರು.

14 ಕ್ಯಾರೆಟ್ ಬಂಗಾರದ ನಿಬ್ಬು ಹಂಕದ ಪಾತ್ರೆಯಂತೆ ಬಂಬೆ ಬೆಲೆಗೂ ಅದ ಪೌಂಟನ್‌ಪೆನ್‌ಗಳು.

ವರ್ಲ್ಡ್ಸ್ ಮೋಡರ್ ಪೌಂಟನ್‌ಪೆನ್ 1ಕ್ಕೆ	ರೂ 3	0 0
" " ಎಗ್ ಬ್ಯಾರೆಲ್ ಪೆನ್ 1ಕ್ಕೆ	3	3 0
" " ಸೆಫ್ಟಿ ಕ್ಯಾಪ್ ಪೆನ್ 1ಕ್ಕೆ	3	8 0
" " ಎಗ್ ಬ್ಯಾರೆಲ್ ಸೆಫ್ಟಿ ಕ್ಯಾಪ್ ಮೋಡರ್ ಕಲರ್ ಪೌಂಟನ್‌ಪೆನ್ 1ಕ್ಕೆ	3	14 0
" " ಸೂಪರ್ ಕಲರ್ ಸೆಫ್ಟಿ ಕ್ಯಾಪ್ ಪೌಂಟನ್‌ಪೆನ್ 1ಕ್ಕೆ	4	2 0
" " ಸೆಲ್ಫ್ ಫಿಲ್ಲಿಂಗ್ ಮೂಡರ್ ಆಥವ ಬ್ರಿವೆನ್ ಕಲರ್ ಪೌಂಟನ್‌ಪೆನ್ 1ಕ್ಕೆ	5	8 0
ಬಿಗ್ ಸ್ಟಾಟ್ ಪೌಂಟನ್‌ಪೆನ್ 1ಕ್ಕೆ	10	8 0
ಪಾಕ್ಕರ್ ಪೆನ್ 1ಕ್ಕೆ	14	6 0 & 20 10 0
ಬ್ಲಾಕ್‌ಬರ್ಡ್ ಪೌಂಟನ್‌ಪೆನ್ 1ಕ್ಕೆ	3	8 0, & 3 12 0
ಸ್ವಾನ್ ಪೌಂಟನ್ ಪೆನ್ 1ಕ್ಕೆ	6	4 0 & 6 12 0
ವಾಟರ್‌ಮನ್ ಪೌಂಟನ್ ಪೆನ್ 1ಕ್ಕೆ	8	2 0, & 8 10 0

ಪೆನ್ಸಿಲ್‌ಗಳು.

ಸ್ಟ್ಯಾಂಡ್ ಕರುವ ಸೆಲ್ಫ್ ಪೆಂಪೀನ್ಸ್ 1ಕ್ಕೆ	3	6 0
ಜರ್ಮನ್ ಮೇಡ್ ಸಣ್ಣ ಪೆಂಪೀನ್ಸ್ 1ಕ್ಕೆ	2	2 0
ಲಿಗಲಿಯೂ ಅಂತರು ಪೆಂಪೀನ್ಸ 1ಕ್ಕೆ	6	9 0, & 6 15 0
ಲಿಗಲಿಯೂ ಸಣ್ಣಸೈಜಿನ ಅಂತರು ಪೆಂಪೀನ್ಸ್ 1ಕ್ಕೆ	1	2 0
ಲಿಗಲಿಯೂ ಅಂತರು ಸಣ್ಣ ಪೆಂಪೀನ್ಸ್ ರೀಡಿಯು ಪೆಲಿನದು 1ಕ್ಕೆ	8	10 0
ಬಿಗ್‌ಪೆನ್ ಅಂತರು ಪೆಂಪೀನ್ಸ್ 1ಕ್ಕೆ	9	6 0
ಎಗ್‌ದೆನ್ ಅಬಕರು ಸ್ಟ್ಯಾಂಡ್ ಇರತಕ್ಕ ಪಾತ್ರೆ ಯೂಡ ಪೆಂಪೀನ್ಸ್ 1ಕ್ಕೆ	13	4 0
ಪಾತ್ರೆಯೂ ಒಂದೊಬನ್ನೂ ಅದ ಪಾತಟಿ ವಾಚ್ 1ಕ್ಕೆ	5	10 0
ಡಿಜೋ ನಮೂನೆಯಲ್ಲಿ ಎಬ್ಬ ಹಾರ್ಡ್ ಕಂಪೆನಿಯ ಪಾತಟಿ ವಾಚ್ 1ಕ್ಕೆ	12	4 0
ನಿಕ್ಕಲ್ ಕೇಸ್ ಸಿಲಿಂಡರ್ ಮುಮೆಂಟ್ ಸಂಚಾರಣ ತರಹ ರಿಸ್ಟ್ ವಾಚ್ 1ಕ್ಕೆ	5	4 0, 7 8 0, 10 0 0 & 12 8 0

ಹಾರೊಗ್ರಫಿಯಂಗಳು.

ಪಾತ್ರೆಯೂ, ಒಂದೋಬನ್ನೂ, ಸಸ್ಪರ ಉಳ್ಳದ್ದೂ, ಅನೇಕ ತರಾಲದ ನೆರೆಗೆ ಬರತಕ್ಕದ್ದೂ ಅದ ಎವ್ವ ಪಾಕ್ಟ್ ಪಡದು ತಿಲ್ಲ್, ಸಿಂಗರ್ ಬೌಂಡ್ ಹಾಗೂ ಫ್ಲಾಟ್‌ಗ್ರೋನಿಯಂ 1ಕ್ಕೆ ರೂ ೨೦ 8 0.

ಕಂಪಾಕ್ಟ್ ಪ್ಲೋಬ್ ಎಂಗರ್ ರೀಡ್ಸು ಹಾಗೂ ಹಾರ್ಡ್ ಹಾರೊಗ್ರಫಿಯಂ 1ಕ್ಕೆ ರೂ 40 0 0

ನಮ್ಮಲ್ಲಿ ೨೨/–ರೂ ಕ್ರಯದ ಶಾಗತಾಯಿತು 50)/–ರಿಂದ ಗಣ ವರೆಗೆ ಆಕ್ ನಮೂನೆ ಹಾರೊಗ್ರಫಿಯಂಗಳು ಜೊತ್ತಿಗೆ ಸ್ವಾಕಿರುತ್ತವೆ ಆಪೇಕ್ಷಿಸುವವರಿಗೆ ಅವು ಇಷ್ಟವಪ್ಪಿ ಪ್ರಯಾಣದಲ್ಲಿ ಉಳ್ಳಮವಾದದ್ದನ್ನು ಪೂರ್ತಿಯಾಗಿ ರವಾನಿಸಲಾಗುತ್ತೆ ಆರ್ಡರ್ ಕೊಡುವವರು ೨/–ರೂ ಅಡ್ವಾನ್ಸು ರವಾನಿಸಬೇಕಾದದ್ದು ಅವಶ್ಯಕ

ಫೋಟೋಗಳು ೨/–ರೂ ಬಾಗಾಯಿತು 130/ರೂಗಳ ವರೆಗೆ ಸ್ವೀಕೃತಿ ಫೋಟೋಗಳಿಗೆ ಗತ್ತುಂಧಸಲ್ಪಟ್ಟ ವಿಷಯ ಪದಾರ್ಥಗಳೂ ಮೆಚ್ಚಿ ಸ್ವೀಕರಿತ್ತವೆ

ಗ್ರಾಹಕರಿಗೆ ತಿಳಿಸುವ ವಿಷಯ.–ನಂ. ಎಸ್ ಶಿವಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

52–45

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೂ ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ.
ಶೇರ್ ಬಂಡವಾಳ	50,000
ಸಂಗ್ರಹವಾದ ಶೇರ್ ಮೊಲಗು	21,310
ಒಟ್ಟು ಒಮ್ಮೂಲದ ರೇವಕಾತಿ	2,16,271

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಶೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ಕೊಡೆಯುತ್ತೆ. ಕಡಿಮೆ ವಾಯಿದೆಯ ರೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ಕೊಡೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಟೂ ಪರೇಟಿವ್ ರಿವಿಸ್ಯಾರವರು ಲೆಕ್ಕ ಆಡಮೊಯಿಸಿಕ ಮೂಲುಕ್ಕಾರೆ.

ಪೈಸಿಂಟರು, ಪೈಜರ್
ಕೋದಂಡ ಅಯ್ಯನವರು, ಮನೆಯಪಂಡ ಬೆಳ್ಯಪ್ಪ
ರಾವ್ ಬಹದ್ದೂರ್. ನವರು.

ಸೆಕ್ರೆಟರಿ.
ಪಿ. ಯನ್. ವೆಂಕಯ್ಯನವರು, ಬಿ.ಎ., ಬಿ.ಎಲ್.

ಕಾರ್ತೀಕು 1—2—1930.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಜಾಹೀರಾತನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಆ ದರ್ನ್ನು ಏಜೆಂಟರುಗಳಿಗಾಗಿ ನೇಮಿಸಿ ಆವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಇಳಿಸಿ ಸಬ ಏಜೆಂಟರುಗಳಿಗೆ ಏಜೆಂಟ್ ಜಂಗಡದ ಕುಟ್ಟಪ್ಪನವರ ಒವಾಜ್ಞಾರಿಕೆ ಮೇರೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಜಂಟಾ ದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತನ್ನ ಚಂದಾವನ್ನು ವಾಪತಿ ಮೂಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೂಡಗಿನ ಎಲ್ಲಾ ಭಾಗಕ್ಕೂ—ಮೆ. ಜಂಗಡದ ಕುಟ್ಟಪ್ಪನವರು.
ಮರನಾಡು—ಮೆ. ಕೇಕೆರ ಅಯ್ಯಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು, (ಖಾದಿಭಂಡಾರ.)
ನಾಪೋಕ್ಲು—ಎಮ್. ಆರ್. ವೆಂಕಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುದ್ದಯ್ಯಯ್ಯನವರು,
ಮತ್ತು, ಆರಮನಾಮಾಡ ಪಿ ಕಾರ್ಯಪ್ಪನವರು,
ಪುದಿಕೇರಿ & ತಿತಿಮತ್ತಿ—ಮೆ ಜಿ. ಸೂದಮ್ಮಯ್ಯನವರು,
ಸುಂಟಿಕೊಪ್ಪ—ಮೆ ಅಪ್ಪಚಟ್ಟೋಕಂಡ ಮೊಣ್ಣಯ್ಯನವರು,

ಸೂಚನೆ.—ಪ್ರಿಂಟರು ಆದ ರಶೀತಿ ಹೊಂದಿಕೊಳ್ಳದೆ ಯೂ ರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮೂರಾಟಕ್ಕೆ ಸಿದ್ಧವಾಗಿದೆ.

ಸಹಕಾರ ಸಂಘಗಳ ಸ್ಥಿತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅವಿತ ಒವಾಜ್ಞಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರರವರ ಆಜ್ಞೆಸಿಗೆ ಕಳುಹಿಸಿಬಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲ ವಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ಶಯೂನಿಸಲ್ಪಟ್ಟಪಾಟಾ ಫಾರಮಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ನಿರಾಜಪೇಟೆ ಬಜ್ಜರ್ ಸ್ಟೋರಿ ನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್,
"ಕೊಡಗು" ಮಡಿಕೇರಿ.

12 bore) Victor Cartridges Rs 10/- Per 100

Mahomedally-Noorbhoy.
ARMS & AMMUNITION MART.
321 Abdul Rehman Street.
BOMBAY. 3.

1-2-27

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ
ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ
ಇಂಡಿಯದಲ್ಲಿ ಯೋಜಿಸಲ್ಪಟ್ಟದ್ದು 1874ರಲ್ಲಿ

ಅಭಿವೃದ್ಧಿ.

ಹೊಸ ವಿಮೆಗಳು.			ಪ್ರೀಮಿಯಂ ಆದಾಯ.		
1925.	296	ಲಕ್ಷ ರೂಪಾಯಿ.	1925.	93	ಲಕ್ಷ ರೂಪಾಯಿ
1926.	391	,, ,,	1926.	106	,, ,,
1927	468	,, ,,	1927.	122	,,
1928.	585	,, ,,	1928.	140	,,

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1921ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ.
1924ರಲ್ಲಿ ,, ,, ,, 22½ ,,
1927ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 25 ರೂ.

ಆದಕಾರಣದಿಂದ ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಹೆಚ್ಚಿನ ಪಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿಗೆ ಒಂದರೆ ನಿಮಗೆ ಆದಿಂದ ಲಾಭ ಉಂಟಾಗುವುದು. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು—

ಓರಿಯಂಟಲ್ ಬಿಲ್ಡಿಂಗ್ಸ್, ಯಂ. ವಿ. ಮುತ್ತುಕೃಷ್ಣ ನಾಯಿಡು,
ಸಾತ್ ಪೇರೇಡ್, ಬೆಂಗಳೂರು. 52—12 ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.

ಮಕ್ಕಳನ್ನು ಹಡೆಯಬೇಕು, ನುತ್ತು ಮಕ್ಕಳು ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಲು ಬಾಲಗ್ರಹ ದೋಷನಿವಾರಕನೆಂಬ ಮಂತ್ರ ಯಂತ್ರದ ತಾಯಿತ.

ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ, ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ, ಪ್ರತಿ ತಿಂಗಳೂ ಸರಿಯಾಗಿ ಮುಟ್ಟಾಗುವ ಸಮಯದೊಳಗೆ ಕೈಕಾಲು ಹರಿಯುವಿಕೆ, ಮಸ್ತಕ ಬೇಳುವಿಕೆ, ಹೊಟ್ಟೆ ಶೂಲೆ, ಬೆಳುಪು—ಕೆಂಪು ಹೋಗಿ ಗರ್ಭ ಪಶನವಾಗುವಿಕೆ ವಾಂತಿ, ಸರ್ವಕಾಲ ಪಿತಾಬಾಧೆಯಿಂದ ನರಳುವಿಕೆ, ದಿನ ಸುಂದಿದೆ ಹಡಿಯೋದೂ ದರೆ ಹಲವುದುಬಿಲ್ ಇವೇ ಮೊದಲಾದವುಗಳು ಸಂತಾನ ಭಂಗಕ್ಕೆ ಕಾರಣಗಳು. ಚಿಕ್ಕ ಮಕ್ಕಳಿಗೆ ೧೫ ವರ್ಷದ ವರೆಗೆ ಬಾಲಾರಿಷ್ಟ ದೋಷದಿಂದ ಆಕಸ್ಮಾತ್ ಸಂದುರೋಗ, ಮುಟ್ಟುದೋಷ, ಕಾಮಿಲೆ, ಗೃಹಪೀಡೆ, ಕೃಷ್ಟಿದೋಷ, ಮುಟಿಕೆಬ್ಯಾಸಿ, ನೀರಸ ಅಳೋಣ ಹೊಟ್ಟೆಯೊಳಗಿಂದ ಏಳೋಣ, ಭಯದಿಂದ ಜ್ವರಪಿಡ್ತೆ, ಕ್ಷೀಣ ಹೊಂದುವಿಕೆ ಮೊದಲಾದವುಗಳಿಂದ ಕಾಡುತ್ತಿರುವನು. ಗರ್ಭರಕ್ಷಾಕರ ವಿಧಿಯಲ್ಲಿ ಸೂರ್ಯ ರಕ್ಷಾಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ. ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗ್ರಹಣ ಕಾಲದಲ್ಲಿ ಸಾಧು ಸತ್ಪುರುಷರ ಸಹಾಯದಿಂದ ಮಂತ್ರವ ಯಂತ್ರವನ್ನು ತಯಾರಿಸಿ ಬಲ್ಲಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿರುತ್ತದೆ ಇದನ್ನು ತರಿಸಿ ಧರಿಸಿದರೆ ಹೆಣ್ಣು ಮಕ್ಕಳಿಗಾಗುವ ಸಂತಾನ ಭಂಗವೂ, ಚಿಕ್ಕ ಮಕ್ಕಳಿಗೆ ಬರುವ ಬಾಲಗ್ರಹವೂ ಯಿವತ್ತಾ ಪರಿಹಾರವಾಗುತ್ತದೆ ಹೆಣ್ಣು ಮಕ್ಕಳಿಗೆ ಸಂತಾನ ದೆಸೆಯಿಂದ ಕ ರಕ್ಷಾಪಾಯ. ಚಿಕ್ಕಮಕ್ಕಳಿಗೆ ೧೫ ವರ್ಷ ತಿಂ—೦ ಪೋ. ಪಿ. ಬೇರೆ ಶ್ರೀತಲ್ ವಾ ಜಾಗ್ರೆತೆ ಗುಡ ಕೊಡುವ ತಾಯಿತಕ್ಕೆ ಪೋ ಪಿ ಸೇರಿ ೫ ರೂ. ಆಗಕ್ಕೆ ವಿ ಕಾರಗಳನ್ನು ಸ್ಪಷ್ಟ ಬರೆಯಿರಿ. ಈತಾಯಿತ ಧರಿಸಿತಕ್ಕಂಡು ಗುಜಾಪಿಲ್ಲೆಂದವಿಗೆ 100 ರೂ. ಬಹುಮಾನ ಒಂದು ಸಲ ತರಿಸಿ ಅನುಭವ ತಕೆಯಿರಿ

ಸ್ಥಳ ಸಂಕೋಚ ನುಮಲಕ ಮಾದರಿಗಾಗಿ ಬಹುಮಾನ ಪತ್ರಿಕೆ ಒಂದೇ ಕೊಟ್ಟಿದೆ.

ನನ್ನ ಹೆಂಡತಿಯ ಪ್ರತ್ಯಕ್ಷತೆಯನ್ನು ತಾವೂಂಕಿರ ವೈದ್ಯ ಡಾಕ್ಟರರಿಗೂ ತೋರಿಸಲು ಗುಣಾಯಿಂದಿರಿಸಲು ತನ್ನ ಆಸ್ಪತ್ರೆಗಳಿಗಾಗಿ ತಾಯಿತ ವನ್ನು ನನ್ನ ಹೆಂಡತಿಯು ಈವಾಗ್ಗೆ ೨ ನಾಕಗಳ ವರೆಗೆ ಧರಿಸಿದ ಮಾತ್ರಕ್ಕೆ ಮೈಯಿಂಳಗಿನ ಯಿವತ್ತೂ ಕಾಯಿಲೆಗಳು ನಾಪವಾಗಿ ಪೂರ್ಣ ಆರೋಗ್ಯ ಸ್ಥಿತಿಯಲ್ಲಿರುತ್ತಾಳೆಂಬುವುದನ್ನು ತಿಳಿಸಲು ಅತಿ ಸಂತೋಷವೆನಿಸುತ್ತೆ. ತಮ್ಮು ಸಿ. ಕೆ. ರಾಮ್‌ನಾಹೇಬ, ಸುದಾಮ ಹೌಸ್,
ಪ್ರಲ್ಹಾದ ಎಸ್ಟೇಟ್, ಮುಂಬೈ.

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ.
52—36 ಮು. ಪೋ. ಆಥಣಿ, ಜಿ. ಬೆಳಗಾಂವ.

೫೭ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿ ಸಲ್ಪಟ್ಟ ಔಷಧಗಳು.

೧. ಧಾತುವುಷ್ಟಿ ಲೇಹ.

ಧಾತು ಸತ್ವವಾಗುವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ಸ್ಖಲನವಾಗುವಿಕೆ, ಜ್ಞಾಪಕ ಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲ ಬದ್ಧತೆ, ಕೈಕಾಲು ಬಣ್ಣುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.—ಕೃಯ ಡಬ್ಬಿ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ. 7—0—0.

೨. ಅಶೋಕಾರಿಷ್ಟ ಮತ್ತು ಮೂತ್ರೆ.

ಹುಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮೆಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮೂತ್ರೆಗಳು ಸಾವಿರಾರು ಹೆಂಗಸರಿಗೆ ಆರೋಗ್ಯವನ್ನು ಪಡಿಸಿ, ಪುನೋಭಿಲಾಷೆಯನ್ನು ಪೂರಯಿಸಿರುವವು.
ಕೃಯ 1 ಬಾಟ್ಲಿ ದೊಡ್ಡ 1 ಡಬ್ಬಿ ವಾತ್ಕೆ ರೂ. 2 ಅ. 4,
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಅ. 4.

೩. ಮಲೇರಿಯಾ ನಿವಾರಣೆ.

ದಿನ ನಿಟ್ಟು ಬರುವ ಜ್ವರ, ಮಲೆ ಜ್ವರ, ೨ ಯೂ 3 ದಿವಸಕ್ಕೊಂದು. ಸಾಲ ಒರುವ ಜ್ವರ, ನಡುಗಿ ಬರುವ ಜ್ವರ. ಜ್ವರ ಗಡ್ಡೆಯಿಂದ ಕುರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟು ಮಾಡುತ್ತದೆ. ಬಾಸ್ಟ್ರಿ 1ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಮೇಹ ಕುಠಾರ. ಇದು ಮೂತ್ರಸ್ರಾವದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗಲಿಕ್ಕೆ ಕೀವನ್ನೂ, ಸ್ರಾವನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

೫. ಇಛ್ಛಾ ಭೇದಿ ಗುಟಿಕೆ. ಆಯುಸವನ್ನು ಉಂಟುಮಾಡುವ ಸುಖ ವೀರೇಚಕ ಬಾಟ್ಲಿ 1ಕ್ಕೆ 0—12—0 ಆಣೆ 3 ಬಾಟ್ಲಿಗಳಿಗೆ 2—2—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಿಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಲವಾಗು ತಿಳಿಸಿ ನೋಡಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್,
12—11 ರಥಬೀದಿ, ಮಂಗಳೂರು, ಪ. ಕನ್ನಡ.

ಭಂಗಾರದ ಉಂಗುರಗಳು.
ಕ್ರಯ 12 ಆಣೆ ಮಾತ್ರ.



ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್‌ಗೋಲ್ಡ್ ಭಂಗಾರದಿಂದ ಕಟ್ಟಿದೆ. ಇದರ ಬಣ್ಣವನ್ನ ತೆಗೆದಂತೆ ಎಲಕಾಟ್ರಿಕ್ ಪವರಿನಿಂದ ಸೆನಲಾ ಭಂಗಾರದ ಒಣ್ಣ ಕೊಟ್ಟಿದೆ. ಇವು ನಾಚಾ ವಜ್ರದ ಉಂಗುರಗಳಿಗೆ ಸರಿಸಮಾನವಾಗಿವೆ. 1ಕ್ಕೆ 12 ಆಣೆ, 3 ಉಂಗುರಗಳಿಗೆ ಒಂದು ಟೇಬಲ್ ಟೈಂಪೀಸನ್ನೂ, 3 ಉಂಗುರಗಳಿಗೆ ಒಂದು ಭಂಗಾರದ ಪಾಕೆಟ್ ವಾಚನ್ನೂ, 12 ಉಂಗುರಗಳಿಗೆ ಒಂದು ಬಂಗಾರದ ಕೈಯಲ್ಲಿ ಕಟ್ಟುವ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುತ್ತೇವೆ.

ವಿಳಾಸ.—ಸಿಟಿ ಮಾರ್ಟ್,
52—36 168 ಪೈನಾಪಜಾರ್, ಮದ್ರಾಸ್.

Printed & published by P. I. Bellappa, at "Kodagu" Press, Mercara for "Kodagu" Ltd.

Regd. No. M. 1550.

"KODAGU" OFFICE, MERCARA.

If not delivered please return to

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಯುಕ್ತತಾಃ॥ ಇತ್ಯಮುತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ॥

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಏ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯ | ಮಡಿಕೇರಿ, ಸನ್ ೧೯೩೦ನೇ ಇಸವಿ ಏಪ್ರಿಲ್ ತಾರೀಕು ೪ ನೇ ಶುಕ್ರವಾರ. | ಸಂಚಿಕೆ ೪೨

Telephone :— 3145.

By Appointment to H. E The Governor of Madras.

Telegrams :— "PRECIOUS".

Guarantee of Satisfaction throughout in every order large or small.

PROMPTEST EXECUTION — CATALOGUE ON APPLICATION — HIGH CLASS WORKMANSHIP

GOLD SMITH — SILVER SMITH

V. Subramania Iyer & Co's

JEWELLER.

POST BOX—425 TRIPLICANE MADRAS.

Excellent Quality Chaste Designs Moderate Prices.

Brooch.

Ice Tumbler.

"Green Hills"
VIRARAJENDRAPET.
7th Decr., 26.

Sir,

.....I am glad to note that the Jewels have a good finish.....

(Sd.) Mrs. A. B. CHENGAPPA.

SUNTICOPPA,
Nellore Estate.
7th April, 28

Dear Sir,

I received the parcel and I am very glad to see the workmanship. I must say it is excellent. I appreciate your workmanship and skilful handling. They were praised by one and all of my friends.

(Sd.) Miss K. SUBBIAH.

MERCARA,
20th May, 27.

Dear Sir,

.....I am quite satisfied with the Jewels you sent on the 16th instant.

(Sd.) Mrs. K. S. CARIAPPA.

52—28 ***Illustrated Catalogue Free on Application.***

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

"ಬೇರೆರ" ಹುಳದ ದೆಸೆಯಿಂದ್ಕೆತ್ತುತೆಗೆದ ತಾಫಗಿಡಗಳ ಸಂಪೈಯುಧಾತುಗುಣದ (Mineral) ಗೊಬ್ಬರಹಾಕಿದ ಸಗಳಿಗಿಂತಲೂ ಸಾರಾಜನಕ (Nitrogenous) ಗೊಬ್ಬರ ಹಾಕಿದ ಸ್ಥಳಗಳಲ್ಲಿ ಕಡಿಮೆಯೆಂದು ಸಿದ್ಧಾಪುರ ಪರೀಕ್ಷಾ ಕ್ಷೇತ್ರ (Experiment station) ದಲ್ಲಿ ಕಂಡು ಬಂದಿದೆ. ಆದುದರಿಂದ ರೊಬಸ್ಟ ಪಾರ್ಟ್—ಹೋಲ್ ಬೋಳರಿಗೆ ಸಾರಜನಕ ಬ್ಬರವು ಪ್ರಯೋಜನಕರವಾಗುವದೆಂದು ತೋರುತ್ತದೆ' (ಪಿ. ಜಿ. ಮನ್ಸೋಲ್ಯಾಸಿನಿ, ಸಬ್ಜಂಟಿಫಿಕ್ ಆಫೀಸರ್, ಯುವಾಕ ಕಾಫಿ ಎಕ್ಸ್‌ಪರ್ಟ್‌ಮೆಂಟ್.)

ಹೆಚ್ಚಿನ ಮಾಹಿತಿ, ವಿವಿಧ ಬೆಳೆಗಳ ವಿಷಯ ಧರ್ಮಾರ್ಥವಾಗಿ ಹುಟುವ ಪತ್ರಿಕೆಗಳು ನೈಟ್ರೇಟಿಗಳಿಗೆ ಈ ಕೆಳಗಿನ ವಿಳಾಸದಾರರಿಗೆ ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ,
ಇಂಡಿಯನ್ ಡಿಲಿಗೇಶನ್,
24—21 ಪೋ. ಬಾ. ನಂ. 469, ಕಲ್ಕತ್ತಾ.

(2) ಮಿಸ್ಟರ್ ಯಂ. ಯಂ. ಬೈಪ್ಪ,
ಚಿಲಿಯನ್ ನೈಟ್ರೇಟ್ ಕಮಿಟಿ,
ಮಡಿಕೇರಿ.

ಕಟ್ಟುಕಷಾಯ ಮತ್ತು ಸ್ಪೆಶ್ಯರ್ ಪೌಡ್ರ್:—ಇದು ಇಂಜಕ್ಷನ್ ಮತ್ತು ಕ್ವಿನಾನು ಸೇವಿಸದೆಯೂ ಗುಣವಾಗಲಿರುವ ಮತ್ತು ಶೀತ, ವಿಪರೀತವಾದ ಜ್ವರ, 3—4 ದಿವಸಕ್ಕೊಮ್ಮೆ ಸಾಧಾರಣವಾದ ಜ್ವರ, ಹಳೆಯ ಜ್ವರ ಮತ್ತು ಜ್ವರಗಳಿಂದ ಬರುವ ದೌರ್ಬಲ್ಯಗಳಿಗೆ ಎಷ್ಟೂ ಕೆಲಸ ಮಾಡುತ್ತದೆ. ಸೀಸೆ ಒಂದಕ್ಕೆ ರೂ 1—8—0; 3ಕ್ಕೆ ರೂ. 4—0—0, 6ಕ್ಕೆ ರೂ 7—8—0, 12ಕ್ಕೆ ರೂ 14.

ಮಲೆ ಜ್ವರಕ್ಕೆ ಕಟ್ಟು ಕಷಾಯ

ಚಿಂದನಾಸವ:—ಇದು ಪ್ರಮೇಹ ಮತ್ತು ಕೃಷ್ಣ ಮತ್ತು ಪಿಷ್ಟಸಹಿತ ಹೋಗುವುದು, ಮೂತ್ರಕೋಶದ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮತ್ತು ಹೊಯ್ಯುವಾಗ ಉರಿಯುವುದು, ಮೂತ್ರ ನಾಳದಿಂದ ನೀರು ಬರುವುದು, ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಕ್ಕೆ ಸಾಧ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರ ನಾಳದಲ್ಲಿ ಬಿಳುಪಾದ ಸೋರುವ ಇವುಗಳಿಗೆ ಪರಮ ಔಷಧಿ ಬೆಲೆ ಬಾಟ್ಲಿ 1, 3, 6ಕ್ಕೆ ರೂ. 1—4—0 3—8—0 6—12—0

ರೋಮನಾಸಿನಿ:—ಈ ಹುಡಿಯನ್ನು ತಿಂದಲ್ಲಿ ತಲೆ ಮೈಯಲ್ಲಿ ರೋಮವಿರುವ ಭಾಗಕ್ಕೆ ನಚ್ಚಲು ರೋಮವು ಉದುರಿ ಬರುವ ಪಕ್ಷ 1ಕ್ಕೆ 6 ಆಣೆ, 3ಕ್ಕೆ ಬ್ಬಿಗೆ ರೂ. 1, 1 ಡಜನಿಗೆ 5—8—0,

ಮನೋಲ್ಯಾಸಿನಿ ಪೌಡರ್:—ಕನಸೋನ, ಕಲಿತುರುಗುವುದು, ಕಲಿತರಿ, ಕಜ್ಜುರಿ, ಸಿವಿಯಿಂದ ಕೀವು ಸೋರುವುದು ಕಿವುದು ತಲ್ಲು ನೋವು, ಅಪಸ್ಮಾರ ಸನ್ನೆ ಬಾರದಿರುವುದು ನೆನಪು ಶಕ್ತಿ ಕುಂದಿಹೋಗುವುದು ಇವುಗಳೆಲ್ಲ ಖಂಡಿತವಾಗಿ ಹೋಗುವುದು. ಉ ಮತ್ತ ಕೊಡಲನ್ನು ಖಂಡಿತ ಗಟ್ಟಿಯಾಗಿರುವ ಕೊಡಲನ್ನು ಬೆಳಿಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಆರೋಗ್ಯಕ್ಕೆ ಹಡ್ಡಾಗು ತದೆ ಮತ್ತು ಕಡಿಮೆ ಕೂದಲು ಉಳ್ಳವರ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ. 1, 3 ಸೀಸೆಗೆ 2—10—0 ಆ ದೊಡ್ಡ ಸೀಸೆಗೆ ರೂ. 2, 3 ಸೀಸೆಗೆ 5—8—0

ಸಮ್ಮ ಕೆಲಸಾಗು ತಾನೆ ನೋಡಿರಿ.

ನಿವಾಸ—ಮನೋಲ್ಯಾಸಿನಿ ಕಂಪೆನಿ,
52—3 9. ಮಂಗಳೂರು.

ಬಾಲಾರ್ಕಮದು.

ನಮ್ಮ ಮಕ್ಕಳ ಸೌಂದರ್ಯವನ್ನು ಸೋಮಸೌಖಾರಿ ಅಭ್ಯುತ ಗುಣಳ್ಳ ಬಾಲಾರ್ಕಮಧುವನ್ನು ಕೊಡಿಸಿ ಮಕ್ಕಳು ರೋಗ

ಳಿಂದಾಗಿ ನೈಸ್ ಕ್ಲೈಮಾಗಿದ್ದರೂ ಎಂದು ಬದು ಮೇಗ ಪ್ಪು ಯುವ, ಬಲ್ಯಾ ಬರುವದು. ವಿನ ವಿನಕ್ಕೆ ಆರೋಗ್ಯವೂ, ತೂಕವೂ ಹೆ ಸ್ಪವನು. ಇದು ಮಜುರವಾಗಿದೆ ಚಿಕ್ಕ ಮಕ್ಕಳು ಆನಂದಿಂದ ಸೇವಿಸುತ್ತಾರೆ ಸೀಸೆ 1 ಕ್ಕೆ 12 ಆಣೆ ಟಿ ಪಿ. 9 ಆಣೆ

52—19 ಯಂ. ವಿ. ಪ್ರಸಾದಿಕ್ಕೆ
ಔಷಧಾಲಯ,
ಶಿವಮೊಗ್ಗಾ,
(ಮೈಸೂರು ಸಂಸ್ಥಾನ)

ಕೊಡಗು.

ಸರ ೧೯೩೦ನೇ ಇಸವಿ
ಏಪ್ರಿಲ್ ತಾ. ೪ನೇ ಶುಕ್ರವಾರ.

ಪಿಂದೂ ಸ್ಥಾನದ ಪರಿಸ್ಥಿತಿ.

ಇಂಗ್ಲಿಷ್ ಪತ್ರಿಕೆಯ ಅಭಿಪ್ರಾಯ.

ಹಿಂದೂಸ್ಥಾನದ ಸ್ವಾತಂತ್ರ್ಯದ ಹೋರಾಟವು ದಿನೇ ದಿನೇ ಒಲದಲ್ಲಿಯೂ, ವಿಸ್ತಾರದಲ್ಲಿಯೂ ವೃದ್ಧಿ ಹೊಂದುತ್ತಲಿದೆ. ಒಂದು ಜನಾಂಗದ ಪರಾಧೀನತೆಯು ಹೆಚ್ಚಿನ ಜನರ ಮನಸ್ಸಿಗೆ ತಟ್ಟಿದ ನಂತರ ಅದರಿಂದ ತಪ್ಪಿಸಿಕೊಳ್ಳಲು ಅವರಲ್ಲಿ ಹುಟ್ಟುವಂಥ ಉತ್ಸಾಹವನ್ನು ತಡೆಗಟ್ಟುವುದು ಯಾರಿಂದಲೂ ಸಾಧ್ಯವಿಲ್ಲ. ನಾವು ನೊದಲು ಹುಲುವು ಸಾರಿ ಒರೆದಂತೆ ಹಿಂದೂಸ್ಥಾನದವರ ಧ್ಯೇಯವು ಸಂಪೂರ್ಣ ಸ್ವರಾಜ್ಯವೋ, ಅಥವಾ ಸಾಮಂತ ಸ್ವರಾಜ್ಯವೋ ಎಂಬ ವಿಷಯದಲ್ಲಿ ಜರ್ಚಿಸಬೇಕಾದ ಅವಶ್ಯವಿಲ್ಲ. ನಿಜವಾದ ಸಾಮಂತ ಸ್ವರಾಜ್ಯ ಸಿಕ್ಕಿದರೆ ಮಹಾತ್ಮ ಗಾಂಧಿಯನೂ ಕಾಡ ತೃಪ್ತರಾಗುವರು ಎಂದು ಅವರ ಬರ್ಮಾ[illegible]ಗಿಗಳಂದಲೂ, ಹೇಳಿಕೆಗಳಿಂದಲೂ ತಿಳಿಯಬರುತ್ತದೆ. ಈಗ ಬೆಳೆಯುತ್ತಿರುವ ಜಳವಳವು ಮಹಾತ್ಮ ಗಾಂಧಿಯವರ ಮುಂದಾಳುತನದಲ್ಲಿಯೇ ನಡೆಯುತ್ತಿರುವದರಿಂದ ಮಹಾತ್ಮ ಗಾಂಧಿಯವರ ಕೋರಿಕೆಯು ನೆರವೇರಿಸಲ್ಪಟ್ಟರೆ ಹಿಂದೂಸ್ಥಾನದಲ್ಲಿ ಶಾಂತಿಕೆ ಉಂಟಾಗುವುದು.

ಮಹಾತ್ಮ ಗಾಂಧಿಯವರ ಉಪ್ಪಿನ ಖಂನೆಯನ್ನು ಭಂಗದ ಜಳವಳವು ಎಷ್ಟರ ಮಟ್ಟಿಗೆ ಬೆಳೆಯುತ್ತಿದೆ ಎಂಬುದನ್ನು, ರಾಜಕೀಯ ಜಳವಳದಲ್ಲಿ ಹಿಂದುಳದ ದಕ್ಷಿಣ ಹಿಂದೂಸ್ಥಾನವೆಂದರೆ ತಮಿಳುದೇಶ, ಮಲೆಯಾಳ ಮತ್ತು ಕನ್ನಾಡಕದಲ್ಲೂ ಸಹ ಖಾದಿಯನು ಭಂಗದ ತಯಾರಿಯು ತುರಿತದಿಂದಲೂ, ಉತ್ಸಾಹದಿಂದಲೂ ನಡೆಯುತ್ತಿರುವುದರಿಂದ ತಿಳಿಕೊಳ್ಳಬಹುದು. ಖಾದಿಯನ್ನು ಭಂಗದ ಒಸಕ್ಕೆ ಮಹಾತ್ಮ ಗಾಂಧಿಯವರು ತಮ್ಮ ಶಾಂತಿ ಸೈನಿಕರೊಡನೆ ಸುರಮತಿ ಆಶ್ರಮದಿಂದ ಹೊರಡುವ ಮುಂಚೆ ಇಂಗ್ಲೆಂಡಿನ ಲಿಬರಲ್ ಪಾರ್ಟಿಯ "ಮ್ಯಾಂಚೆಸ್ಟರ್ ಗಾರ್ಡಿಯನ್" ಪತ್ರಿಕೆಯು ಬಹಳ ಸ್ಪಷ್ಟ ರೂಪದಿಂದ ಜಳವಳದ ಮಹತ್ವವನ್ನು ಒಪ್ಪಿಕೊಂಡಿದೆ.

ನದರಿ ಪತ್ರಿಕೆಯಲ್ಲಿ ತಾ. 10—3—'30ರಲ್ಲಿ ಬರೆದ ಲೇಖನದಲ್ಲಿ ಹಿಂದೂಸ್ಥಾನದಲ್ಲಿ ಧರ್ಮ ಸಂಕಟದ ಬಿಕ್ಕಟ್ಟು ಬಂದೊದಗಿದೆಯೆಂತೆ ಎರಡು—ಮೂರು ಕಡೆಪದಲ್ಲಿ ವಿವರಿಸಲ್ಪಟ್ಟಿದೆ. 'ಬ್ರಿಟಿಷ್ ಮಂತ್ರಿ ಮಂಡಲಿಯು ಹಿಂದೂಸ್ಥಾನದ ಜನರ ತೃಪ್ತಿಗೆ ಬೇಕಾಗುವಾಷ್ಟನ್ನು ದೀವಾನಗಿಯ ದಿನ ವೈಸರಾಯರ ಮೂಲಕ ಪೇಳಿಸಿದ್ದಾರೆ, ಅದಕ್ಕಿಂತ ಹೆಚ್ಚು ಈಗ ಪ್ರಳಲು ಸಾಧ್ಯವಿಲ್ಲ. ಬೇರೆ ದಾರಿ ತೋರದೆ ತಾನು ಈ ಜಳವಳವನ್ನು ಕೈಕೊಂಡಿದ್ದೇನೆಂತಲೂ, ತನ್ನ ಜಳವಳದಿಂದ ಅಲ್ಲಲ್ಲಿ ಪುಂಡುಗಳಾದರೂ ತಾನು ಜಳವಳವನ್ನು ನಿಲ್ಲಿಸುವುದಿಲ್ಲವೆಂತಲೂ ಗಾಂಧಿಯವರು ಹೇಳಿರುವುದರಿಂದ ಅವರ ಸಂಗಡ ವಾದಿಸಿ ಪ್ರಯೋಜನವಿಲ್ಲ. .....ಗಾಂಧಿಯವರನ್ನು ಸೆರೆ ಹಿಡಿದು ಅವರು ಆ ಮೂಲಕ ಸ್ವರಾಜ್ಯದ ಹೋರಾಟಕ್ಕೆ ಒತ್ತಾಸೆಗೂ ಅವಕಾಶ ಕೊಟ್ಟು ಜನರಲ್ಲಿ ಅಶ್ಲೀಲತೆಯನ್ನು ಹೆಚ್ಚಿಸುವಂತೆಯೂ ಇನ್ನೊಂದು ಅಧಿಕಾರ್ಯವೂ ಇದೆ. ಸ್ಥಿತಿಯು ಈ ತರಹದ ಬಿಕ್ಕಟ್ಟಿನಲ್ಲಿರುವುದರಿಂದ ವೈಸರಾಯ ರಾದ ಲಾರ್ಡ್ ಇರ್ವಿನ್‌ರವರು ಮಾಡುವ ಕೆಲಸಗಳಿಗೆ ಬ್ರಿಟಿಷ್ ಜನತಾಂಗದ ಬೆಂಬಲವಿದೆಯೆಂಬ ನಾವು ಧೃಢವಾಗಿ ಹೇಳುತ್ತೇವೆ. ..... 1921ರಲ್ಲಿ, ಅಸಹಕಾರ ಜಳವಳವನ್ನು ನಿಲ್ಲಿಸಲಿಕ್ಕೆ ಸರ್ಕಾರದವರು ಆಗ ಸರಿಸಿದ ಕ್ರಮವೇ ಈಗಲೂ ಒಯವಾಡಿದರೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ರಾಷ್ಟ್ರೀಯ ಸ್ವದ ಭಾವವು ಜನರಲ್ಲಿ ಜಾಗೃತವಾಗಿ ಹುಟ್ಟಿದ ನಂತರ ಅದರ ಸಂಬಂಧದ ಜಳವಳವನ್ನು ನಿಲ್ಲಿಸಲು ಪರಕೀಯ ಸರ್ಕಾರವು ಅನುಸರಿಸುವ ನ್ಯಾಯವಾದ ಕ್ರಮಗಳೆಂದು ನೆಪ ಅಸಾಮಾ.ಕಗಳಾಗಬಹುದು. ಸರ್ಕಾರವು ವಿಶೇಷ ಸಂವಿಧಾನವನ್ನು ತೋರಿಸಿದರೆ ಬ್ಯಾಂತಯನ್ನು ಬೇಡಬೇಕೆಂಬ ಜಳವಳಕ್ಕೆ ಒಕ್ಕಾಸಯಗಾ ಬಹುದು. ರಾಜ ತಂತ್ರ ಪಟುಗಳಿಗೆ ದಿಕ್ಕು ತೋರುವುದಿಲ್ಲ. ಮನುಷ್ಯ ಜೀವ್ಯದವರ ಮುಂದಾಲೋಚನೆಯು ಮೊಜ್ಜಾಗಿದೆ. ಮನುಷ್ಯರು ಮಾಡುವ ಕೆಲಸದಿಂದ ತಪ್ಪುಗಳಾಗುವ ಸಂಭವವೂ ಇದೆ. ಆದುದರಿಂದ ಲಾರ್ಡ್ ಇರ್ವಿನ್‌ರವರು ಅನುಸರಿಸುವ ಕಾರ್ಯಕ್ರಮದಿಂದ ತಕ್ಷಣಕ್ಕೆ ಎಲ್ಲರಿಗೂ ಸೃಷ್ಟಿಯೋಗವಿದ್ದರೂ ಅವರ ಶಕ್ತಿಯನ್ನು ನಂಬಿ, ವೈಸರಾಯರಿಗೆ ಸ್ವಾತಂತ್ರ್ಯವನ್ನು ಕೊಡಬೇಕೆಂತ ಅಗಲು ಸೂಚಿಸುತ್ತಾ[illegible]'

ಈ ಪತ್ರಿಕೆಯ ಒಟ್ಟಿನವಾದವನ್ನೇ ಬ್ರಿಟಿಷ್ ಮಂತ್ರಿ ಮಂಡಲಿಯೂ, ಬ್ರಿಟಿಷ್ ಮುಖಂಡರೂ ಅನುಸರಿಸುವಂತೆ ಕಂಡುಬರುತ್ತದೆ. ವೈಸರಾಯರ ದೀವಾನಗಿಯ ಖಾಹೀರ್‌ನಾಮೆಯನ್ನು ಲಿಬರಲ್ ಸಂಸ್ಥು ಕನ್‌ಸರ್ವೇಟಿವ್ ಮುಖಂಡರು ಬಹಳ ಕಂಡಿನವಾಗಿ ವಿರೋಧಿಸಿದರು. ಆದರೆ ಈಗ ಮಹಾತ್ಮ ಗಾಂಧಿಯವರನ್ನು ಇವ್ವರ ವರೆಗೂ ದಸ್ತಗಿರಿ ಮಾಡದೆ ಇದ್ದರೂ ಬ್ರಿಟನ್ನಿನಲ್ಲಿ ಹೆಚ್ಚಿನ ಕೂಗಾಟ ಕೇಳಬರುವುದಿಲ್ಲ. ರಾಜಕೀಯ ಜಳವಳಗಾರರ ಮೇಲೆ ಅಲ್ಲಲ್ಲಿ ದಬ್ಬಾಳಿಕೆ ನಡಿಸುತ್ತಿದ್ದರೂ ಮಹಾತ್ಮ ಗಾಂಧಿಯವರನ್ನು ಈ ವರೆಗೆ ಸೆರೆಹಿಡಿಯದೆ ಇರುವ ತತ್ವಕ್ಕೆ ಹಿಂದೂಸ್ಥಾನದ ಎಲ್ಲಾ ತರಹದ ಅಭಿಪ್ರಾಯದ ಜನರ ಬೆಂಬಲವು ಇದೆ. ವೈಸರಾಯರೂ, ಸ್ಪೇಟ್ ಸೆಕ್ರೆಟರಿಯವರೂ ಕೆಲವು ಸದಯದ ಹಿಂದೆ ಪ್ರಕಟಿಸಿರುವ ಮೇರೆ ಹಿಂಸೆಯನ್ನು ನಡೆಸುವವರನ್ನೂ, ಹಿಂಸೆಗೆ ಉತ್ತೇಜನ ಕೊಡುವವರನ್ನೂ ಪೂರ್ತಿ ರಾಜಕೀಯ ತಪ್ಪಿತಸ್ಥರಾಗಿ ಎಣಿಸಿದರೆ ಹಿಂದೂಸ್ಥಾನದ ಅಕ್ಕಿಪಡಿಕೆ ಇರಲಾರದು.

'ಹಿಂದೂಸ್ಥಾನದಲ್ಲಿ ಏನಾದರೂ ಅತ್ಯಾಚಾರಗಳು ನಡೆದರೆ ಮನುಷ್ಯ ಮಾತ್ರದವರ ಕಾರ್ಯದಿಂದ ಆಯತಪ್ಪಿತ ಹೇಳಿಕ್ಕೆ ಆಗುವುದಿಲ್ಲ. ಹಿಂದೂಸ್ಥಾನದಲ್ಲಿ ಜನರಿಗೂ, ಆಳುತ್ತಿರುವ ಜನಾಂಗಕ್ಕೂ ಇರುವ ಅಸಾಧಾರಣ ಸಂಬಂಧದ ಕಾರಣವಾಗಿರುತ್ತದೆ. ಒಂದು ನೇಶವನ್ನು ಇನ್ನೊಂದ ದೇಶವು ಆಳುವಂಥಾದ್ದು ಯಾರೂ ಒಸ್ಪತಕ್ಕ ರೀತಿಯಲ್ಲ. ಆದರೆ ಈ ಜನಾಂಗಗಳ ಮಧ್ಯೆ ಇರುವ ಸಂಬಂಧವನ್ನು ವ್ಯತ್ಯಾಸ ಮಾಡುವ ಕೆಲಸವು ಒಂದೆರಡು ವರ್ಷಗಳಲ್ಲಿ ಆಗುವಂಥಾದ್ದಲ್ಲ. ಆದರೆ ಈ ಸಂಬಂಧವನ್ನು ನೆಲಪಡಿಸಿ ಇಂಡಿಯಾದವರಿಗೆ ಬ್ರಿಟಿಷರೊಂದಿಗೆ ಪಸಿಪಮಾನತ್ವ ಕೊಡುತ್ತೇನೆಂಬದನ್ನು ಕಾರ್ಯತಃ ತೋರಿಸುವ ಮುಂಚೆ ಹಿಂದೂಸ್ಥಾನದಲ್ಲಿ ಪುಂಡಾದರೆ ಆಶ್ಚರ್ಯವಿಲ್ಲ. ಇಂಡಿಯಾದ ಸಂಬಂಧವನ್ನು ಸರಿಪಡಿಸಿಕೊಳ್ಳಬೇಕೆಂತ ಬ್ರಿಟಿಷ್ನಿಗ ಹೆಚ್ಚು ಜನರು ಒಪ್ಪುತಕ್ಕರೆ. ಆದರೆ ಆರ್ಥಿಕ ದೃಷ್ಟಿಯಿಲ್ಲದವರು ಹಿಂದೂಸ್ಥಾನಕ್ಕೆ ಬೇಗನೆ ಹೆಚ್ಚಿನ ಸ್ವರಾಜ್ಯ ಕೊಡಬೇಕೆಂದರೆ ಜಳವಳ ಎಬ್ಬಿಸುತ್ತಿದ್ದಾರೆ. ಇಂಥಾ ಜಳವಳದಿಂದ ಹಿಂದೀಯರಲ್ಲಿ ಸಿಟ್ಟೂ, ಗಾಭರಿಯೂ ಹುಟ್ಟುವುದು ಸ್ವಾಭಾವಿಕವಾದರೂ ಸ್ವಲ್ಪ ಹೆಚ್ಚಾಗಿದೆ "

ಈ ರೀತಿಯಲ್ಲಿ ಹಿಂದೂಸ್ಥಾನದಲ್ಲಿ ಹುಟ್ಟಿರುವ ಅಕ್ಕಪ್ಪಿಯು ಸ್ವಭಾವಿಕವೆಂದು ಬ್ರಿಟಿಷರು ಒಪ್ಪಿಕೊಂಡರೆ ಹಿಂದೀಯರಿಗೆ ಎಷ್ಟೋ ಉತ್ಸೇಜನ ಸಿಕ್ಕುತ್ತದೆ. ಹಿಂದೀಯರು ಇಂಥಾ ಉತ್ಸೇಜನದಿಂದ ತಟಸ್ಥರಾಗದೆ.ಮಹಾತ್ಮ ಗಾಂಧಿಯವರ ಬೋಧನೆಯಂತೆ ಸ್ವದೇಶೀ ಮುಂತಾದ ಕಾರ್ಯ ಕ್ರಮಗಳನ್ನು ಅನುಸರಿಸಿದರೆ ಬ್ರಿಟನ್ನಿನ ಆರ್ಥಿಕ ದೃಷ್ಟಿಯುಳ್ಳವರೂ ಬಗ್ಗುತ್ತಾರಾಲ್ಲದೆ, ಬ್ರಿಟಿಷ್ ಜನತಾಂಗದವರು ಇಂಡಿಯಾಕ್ಕೆ ಶೀಘ್ರದಲ್ಲಿಯೇ ಸ್ವರಾಜ್ಯ ಕೊಡಬೇಕೆಂಬುದನ್ನು ಒಪ್ಪಬೇಕಾಗುತ್ತದೆ.

ಬಾಲ ವಿವಾಹ ನಿಬರ್ಂಧದ ಕುರಿತ (1929ನೆಯ ಇಸವಿಯ 19ನೇ ನಂಬರು) ಆಕ್ಟ್.

ಇದರ ಮೂಲಕವಾಗಿ ಸಮಸ್ತ ಜನರಿಗೆ ತಿಳಿಯಪಡಿಸುವುದೇನಂದರೆ ಬಾಲ ವಿವಾಹ ನಿಷ್ಪರಂಧದ ಕುರಿತ ಆಕ್ಟು 1930ನೇ ಇಸವಿ ಏಪ್ರಿಲ್ ೧ನೇ ತಾರೀಕಿನಲ್ಲಿ ಜಾರಿಯಲ್ಲಿ ಬರುವುದು. ಇಂಡಿಯದೊಳಗೆ ಬಾಲ ವಿವಾಹಗಳು ನೆರವೇರಿಸಲ್ಪಡುವುದನ್ನು ತಡೆಸುವುದೇ ಸದರಿ ಆಕ್ಟಿನ ಉದ್ದೇಶವಾಗಿದೆ ಮತ್ತು ಆ ಆಕ್ಟು ಯಾವತ್ತು ಬ್ರಿಟಿಷ್ ಇಂಡಿಯದೊಳಗಿನ ಸಮಸ್ತ ತರಗತಿಗಳ ಜನರಿಗೆ ಲಗತ್ತಾಗುತ್ತದೆ. 18 ವರ್ಷ ಪ್ರಾಯದೊಳಗಿನ ಹುಡುಗಿಯರ ಮತ್ತು 14 ವರ್ಷ ವ್ಯಾಯದೊಳಗಿನ ಹುಡುಗಿಯರ ವಿವಾಹವು ಆ ಆಕ್ಟಿನ್ನಲ್ಲಿ ನಿಷೇಧಿಸೋಕ್ತವಾಗಿದೆ. ದಂಡನೆಯ ಸಂಬಂಧವಾದ ಸದರಿ ಆಕ್ಟಿನ ನಿಬಂಧನೆಗಳು ಜನರ ಲಕ್ಷ್ಯಕ್ಕೆ ವಿಶೇಷವಾಗಿ ತರೋಣವಾಗುತ್ತಿವೆ. ಅವುಗಳಲ್ಲಿ ಈ ಕೆಳಗಿನಂತೆ ನಿಬಂಧಿಸಲ್ಪಟ್ಟಿದೆ.—

(a) 18 ವರ್ಷ ವ್ಯಾಯಕ್ಕೆ ಮೇಲ್ಪಟ್ಟು 21 ವರ್ಷ ವ್ಯಾಯದೊಳಗಿನ ವ್ಯಾಯಸ್ಥರಾದ ಗಂಡಸರು ಬಾಲ ವಿವಾಹ ಮಾಡಿಕೊಂಡ ಪಕ್ಷದಲ್ಲಿ ಅವರು 1,000 ರೂಪಾಯಿಯ ವರೆಗಿನ ಜುಲುಮಾನೆಯಂತೆ ಶಿಕ್ಷೆಸಲ್ಪಡಲು ಗುರಿಯಗತಕ್ಕದ್ದು.

(b) 21 ವರ್ಷ ವ್ಯಾಯ ನೀರಿದ ವ್ಯಾಯಸ್ಥರಾದ ಗಂಡಸರು ಬಾಲ ವಿವಾಹ ಮಾಡಿಕೊಂಡ ಪಕ್ಷದಲ್ಲಿ ಅವರು ಒಂದು ತಿಂಗಳ ವರೆಗಿನ ಬರೆ ಕೈದಿನಿಂದ ಅಥವಾ 1,000 ರೂಪಾಯಿಯ ವರೆಗಿನ ಜುಲುಮಾನೆಯಿಂದ ಅಥವಾ ಇವೆರಡರಿಂದಲೂ ಶಿಕ್ಷೆಸಲ್ಪಡಲು ಗುರಿಯಗತಕ್ಕದ್ದು.

(c) ಬಾಲ ವಿವಾಹಗಳನ್ನು ಮಾಡಿದ, ನಡಿಸಿದ ಯಾ ನಿರ್ದೇಶಿಸಿದ ಜನರು ಒಂದು ತಿಂಗಳ ವರೆಗಿನ ಬರೆ ಕೈದಿನಿಂದ ಅಥವಾ 1000 ರೂಪಾಯಿಯ ವರೆಗಿನ ಜುಲುಮಾನೆಯಿಂದ ಅಥವಾ ಇವೆರಡರಿಂದಲೂ ಶಿಕ್ಷೆಸಲ್ಪಡಲು ಗುರಿಯಾಗತಕ್ಕದ್ದು.

(d) ಬಾಲ ವಿವಾಹಗಳು ಕೂಡಿ ಬರುವಂತೆ ಮಾಡಿದ ಅಥವಾ ಅವು ಜರಗುವುದಕ್ಕೆ ಬಿಡುಗಡೆ ಕೊಡುವ ಅಥವಾ ಅವನ್ನು ತಡೆಸಲು ಅಶ್ರದ್ಧಾಪೂರ್ವಕವಾಗಿ ಕಷ್ಟುವ ಅನ್ಯಾಯಸ್ಥರ ಹೆತ್ತವರಾಗಲೀ ಸಂರಕ್ಷಕರಾಗಲೀ ಇಂದು ತಿಂಗಳ ವರೆಗಿನ ಬರೆ ಕೈದಿನಿಂದ ಅಥವಾ 1000 ರೂಪಾಯಿಯ ವರೆಗಿನ ಜುಲುಮಾನೆಯಿಂದ ಅಥವಾ ಇವೆರಡರಿಂದಲೂ ಶಿಕ್ಷೆಸಲ್ಪಡಲು ಗುರಿಯೊಗತಕ್ಕದ್ದು.

ಜಮಿನ್ದಾರರ ಸಂಘದ ಸ್ವಾಗತ ಕಮಿಟಿ ಮಿಟಿಂಗು.

ಈ ವರ್ಷ ವೀರಾಜಪೇಟೆಯಲ್ಲಿ ನಡೆಯಲಿಕ್ಕಿರುವ ವಾರ್ಷಿಕ ಮಹಾ ಸಭೆಯ ಸ್ವಾಗತ ವ್ಯವಸ್ಥಾಡುಗಳನ್ನು ಮಾಡುವ ಉದ್ದಿಶ್ಯಕ್ಕೆ ಈ ಮೊದಲೇ ಪಡೆನಾಲ್ಕುನಾಡು, ಬೆಳ್ಳುನಾಡು ಮತ್ತು ಅಮ್ಮತ್ತಿನಾಡುಗಳ ಗ್ರಾಮಗಳಲ್ಲಿ ವಿಂಬಿಂಗು ನಡಿಸಿ ನೇಮಿಸಿದ್ದ ಕಮಿಟಿ ಮೆಂಬರುಗಳ ಪ್ರಥಮ ವಿಂಬಿಂಗು ತಾ 26—3—'30ರಲ್ಲಿ ವೀರಾಜಪೇಟೆ ಖಾದಿ ಭಂಡಾರದ ಮಹಡಿಯಲ್ಲಿ ನಡೆಯಿತು. ಸುಮಾರು 50 ಕಮಿಟಿ ಮೆಂಬರುಗಳು ಹಾಜರಿದ್ದರು. ಮೆ. ಪಟ್ಟಡ ಚಿಂಗಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

1. ಸ್ವಾಗತ ಕಮಿಟಿಯ ಅಧ್ಯಕ್ಷರಾಗಿ ಯೂರನ್ನು ಆರಿಸೇಕೆಂದು ದೀರ್ಘ ಚರ್ಚೆನಡೆದ ನಂತರ ಮೆ. ಎ. ಪಿ. ಕಾರ್ಯಪ್ಪನವರು ಸೂಚಿಸಿದ ಮೇರೆ ಮೆ. ಪುಲಿಯಂಡ ಗಣಪತಿಯವರು ಸ್ವಾಗತ ಕಮಿಟಿ ಅಧ್ಯಕ್ಷರಾಗಿ ಏಕೋಧನಿಲ್ಲದೆ ಆರಿಸಲ್ಪಟ್ಟರು.

2. ಮೆ. ಗುಡ್ಡಂಡ ಥೀಮ್ಮಯ್ಯನವರು ಸೆಕ್ರೆಟರಿಯೂ ಗಿಯೂ, ಮೆ. ಪೊನ್ನಕಚ್ಚಿರ ದೆಬ್ಬಯ್ಯನವರು ಖಜಾನ್ಸಿ ಯೂಗಿಯೂ ಚುನಾಯಿಸಲ್ಪಟ್ಟರು

3 ಈ ಕೆಳಗಿನ ವಿಷಯೀಯರು ಜಾಯಿಂಟ್ ಸೆಕ್ರೆಟರುಗಳಾಗಿ ನೇಮಿಸಲ್ಪಟ್ಟರು:—ತಿಮ್ಮಯ್ಯನವರಿಗೆ—ಮೆ. ನೆಲ್ಲಮಕ್ಕಡ ದೇವಯ್ಯನವರು ಮತ್ತು ಮೆ. ಐಂಡಿ ಮಾದಪ್ಪನವರು, ಬೆಳ್ಳುನಾಡಿಗೆ—ಮೆ. ಮುಕ್ಕಾಟಿರ ಕರುಂಬಯ್ಯನವರು ಮತ್ತು ಮೆ. ಮಂಡೇಪಂಡ ತಿಮ್ಮಯ್ಯನವರು, ಎಡೆನಾಲ್ಕುನಾಡಿಗೆ—ಮೆ. ಗಳಾದಿ ಮೊಣಪ್ಪಿರ ಮುಕ್ಕಣ್ಣನವರೆ., ಚಾರಿಮಂಡ ತಿವೈಯ್ಯನವರು, ಪುಳಿಯಂಡ ಪೂವಯ್ಯನವರು ಮತ್ತು ಪಟ್ಟಡ ಚಿಂಗಪ್ಪನವರು

4. ಹಾಜರಿದ್ದ ಮೆ. ಬಿದ್ದಂಡ ಪೋಪ್ಪಯ್ಯನವರು ಸ್ವಾಗತ ಖರ್ಚಿಗೆ 25 ರೂ. ಕೊಡುತ್ತೇನೆಂದು ವಾಗ್ದಾನ ಮಾಡಿದನ್ನು ಸಭೆಯು ಮಂದನಾಪೂರ್ವಕ ಅಂಗೀಕರಿಸಿತು.

5, ಸಂಘದ ಜನರಶ್ ನಿಬಿಂಗನ್ನು ಏಪ್ರಿಲ್ ತಾ. 25ರ ಮೇಲೆ ನೇ ತಾ. 5ರೊಳಗೆ ನಡಿಸಿ ವದು ಉತ್ತಮವೆಂದು ತೀರ್ಮಾನವಾಯಿತ .

6. ಸ್ವಾಗತ ಕಮಿಟಿಯ ವಿಂಬಿಂಗು ಮಹಾ ಸಭೆ ಆಗುವ ವರೆಗೆ ಪ್ರತೀ ಬುಧವಾರ ಮಧ್ಯಾಹ್ನ 2 ಗಂಟೆಗೆ ವೀರಾಜಪೇಟೆ ಖಾದಿ ಭಂಡಾರದ ಮಹಡಿಯಲ್ಲಿ ನಡಿಯಬೇಕೆಂತ ನಿಶ್ಚಿಸಲಾಯಿತು.

7. ಈ ಮೊದಲು ಕಮಿಟಿ ಮೆಂಬರುಗಳನ್ನು ನೇಮಿಸದೆ ಇದ್ದ ವೀರಾಜಪೇಟೆ ಪಟ್ಟಣಕ್ಕೂ, ಬೇಟೋಳೆನಾಡಿಗೂ ಕಮಿಟಿ ಮೆಂಬರ ಗಳು ಆರಿಸಲ್ಪಟ್ಟರು.

ಪಿ. ಚಿಂಗಪ್ಪ.
(ಅಧ್ಯಕ್ಷರು)

ಭಗವದ್ಗೀತಾ ಪ್ರವಚನ.

೯.

ತಾ. ೨೨—3—'30ರಲ್ಲು ನಿತ್ಯಾನಂದಶ್ರೀ ಶ್ರೀಮತ್ ಓತ್ಲೆಮ ಆತ್ಮಾರಾಮಶಾಸ್ತ್ರಿಗಳವರು ನೀಡಿದ ಭಾಷಣದ ಸಾರಾಂಶ.

ಸನ್ಯಾಸ, ತ್ಯಾಗ ಇವುಗಳ ವಿವರವನ್ನು ಹಿಂತೆಯೇ ವಿವರಿಸಿದೆ. ತ್ಯಾಗವು ಮೂರು ಪ್ರಕಾರವಾಗಿರುವುದು.

ಶ್ಲೋ. ಯಜ್ಞದಾನ ತಪಃಕರ್ಮ ನ ತ್ಯಾಜ್ಯಂ ಕಾರ್ಯಮೇವತತ್, ಯಜ್ಞೋದಾನಂ ತಪಶ್ಚೈವ ಪಾವನಾನಿಮನೀಷಿಣಾಮ್ ॥ ೫—೧೮ ॥

ಯಜ್ಞ, ದಾನ ಮತ್ತು ತಪಸ್ಸು ಈ ಕರ್ಮಗಳು ಬಿಡತಕ್ಕವುಗಳಲ್ಲ. ಇವುಗಳು ಪಂಡಿತರಿಗೂ ಪವಿತ್ರವಾದವುಗಳೇ. ಇವು ಕರ್ಮಜ್ಞಾನವನ್ನು ತರುವಂಥಾ ಕರ್ಮಗಳೂ ಆಗಿರುವುದರಿಂದ ಕರ್ಮವನ್ನು ಆಚರಿಸಿದರೆ ಅವಕ್ಕೆ ಅತ್ಯನು ಪಾಧ್ಯನಾಗುವನು. ಆದ್ದರಿಂದ ಅವುಗಳ ಆಶಿಯನ್ನು, ಫಲವನ್ನೂ ತೊರೆದು ಆಚರಿಸಬೇಕಾದುದು ಉತ್ತಮ ಮತವು

ನಿತ್ಯವಾಗಿ ನೂಡತಕ್ಕ ಕರ್ಮವನ್ನು ಬಿಡುವುದು ಏಹಿತ ವಲ್ಲ. ಯಾವನು ಕರ್ಮವು ದುಃಖಮಯವಾದುದೆಂದೂ, ಶರೀರಕ್ಕೆ ಕಷ್ಟವೆಂದೂ ತಿಳಿಯುವನೋ ಅವನು ತಾಬರೆ ಗುಣವುಳ್ಳನಾಗುವುದರಿಂದ ಅವನಿಗೆ ತ್ಯಾಗದ ಫಲವು ದೊರೆಯ ಬಾರದು.

ಎಲ್ಲಾ ಕರ್ಮಗಳಿಗೆ ಮುಂದಿನ ಐದು ಸಂಗತಿಗಳು ಕಾರಣಗಳು. ಅಧಿಷ್ಠಾನವೂ ಕರ್ತನೂ ಬೇರೆ ಬೇರೆ ವಿಧವಾದ ಕಾರಣವೂ, ನಾನಾವಿಧಾಶ್ಚಾರವಾದ ಚೇಷ್ಟೆಯೂ, ಇಲ್ಲಿ ಐನನೇಯವಾದ ದೈವವು ಮನುಷ್ಯನು ತೀರ್ಥ, ವಾಕ್ಯ, ಮನಸ್ಸು ಇವುಗಳಿಂದ ಯಾವ ಕರ್ಮವನ್ನು ಮಾಡುವನೋ ಅದು ಸರಿ ಇರುವುದಕ್ಕೂ ಇಲ್ಲದಿರುವುದಕ್ಕೂ ಕೆಲವು ಕಾರಣಗಳುಂಟು. ಹೀಗಿರಲು ದುರ್ಬುದ್ಧಿಯಿಂದ ಎಲ್ಲದಕ್ಕೂ ತಾನೇ ಕಾರಣ ಭೂತನೆಂದು ಯಾವನು ತಿಳಿಯುವನೋ ಅವನು ಮೆತಿ ಹೀನನೆನ್ನಿಸಿಕೊಳ್ಳುವನು.

ಕುದ್ರ ಜೀವಾತ್ಮನು ಅಯುಳಾವರಹಿತನು. ಪದ್ಮಪತ್ರವು ಕೆಸರಿನಲ್ಲಿ ಮುಳುಗಿದ್ದರೂ ನಿಷ್ಕಳಂಕವಾಗಿರುವಂತೆ ಜ್ಞಾನಿಯು ಕರ್ಮ ಬಂಧನದಲ್ಲಿದ್ದರೂ ನಿರ್ಲೇಪನಾಗಿರುವನು. ಅಂಥಾ ಕರ್ಮಾಚರಣೆಯಿಂದ ಅವನಲ್ಲಿ ಅಕರ್ತೃತ್ವಬುದ್ಧಿ

ಯುದಕ್ಕು ನಿಜವಾದ ಸೇವ್ಯಾಸಿಯೆನ್ನಿಸಿಕೊಳ್ಳುವನು. ಆಗ ಅವನಿಗೆ ಭೋಕ್ಯತ್ವೆ ಸ್ಥಿತಿ ವ್ಯಾಪ್ತಿಯಾಗದು. ಜ್ಞಾನೋದಯದ ಪರ್ಯಂತರ ಕರ್ಮವು ತಪ್ಪುವುದಿಲ್ಲ. ವಿಜ್ಞಾನಿನ ಮೆಂದರೆ ಆನುಭವಾತ್ಮಕ ಜ್ಞಾನವು. ಜ್ಞಾನದ ಅನುಭವದಿಂದ ಕರ್ಮಸಂಬಂಧವು ತಪ್ಪುವುದು. ಅವನು ಕರ್ಮಬಂಧ ಮುಕ್ತನಾಗಿ ಎಲ್ಲೆಲ್ಲಿಯೂ ಆತ್ಮದರ್ಶನ, ಸ್ವಾನಂದ, ನಿತ್ಯ ನುಭವವನ್ನು ಪಡೆಯುವನು.

ಜೀವನ್ಮುಕ್ತನು ಆಗ ಕರ್ಮಗಳಿಗೆ ಬಾಧ್ಯನಾಗುವುದಿಲ್ಲ. ಅವನ ನುಕೃತ ದುಷ್ಕೃತಗಳು ಎಂತಾದರೂ ಶಕ್ತುಗಳಿಗೆ ಗೂ ವ್ಯಾಪಿಸುತ್ತವೆ.

ಶ್ಲೋ. ಯಸ್ಯನಾಹಂ ಕೃತೋಭಾವೋ ಬುದ್ಧಿರ್ಯಸ್ಯ ನಲಿಪ್ಯತೇ | ಹತ್ವಾಪಿಸ ಇಮೌಲ್ ಲೋಕಾನ್ ನಹಂತಿನ ನಿಬದ್ಧ್ಯತೇ ॥ ೧೭—೧೮—॥

ಯಾವನಿಗೆ ತಾನು ಮಾಡುವೆನೆಂಬ ಸ್ವತಂತ್ರ, ಭಾವನೆಯಿಲ್ಲವೋ ಮತ್ತು ಯಾವನ ಬುದ್ಧಿಯು ಲೇಪನನ್ನು ಹೊಂದದೋ ಅವನು ಈ ಲೋಕಗಳನ್ನು ಕೊಂದರೂ ತಿಳ್ಲುವುದಿಲ್ಲ, ಮತ್ತು ಬಂಧಿಸಲ್ಪಡುವುದಿಲ್ಲ. ಆದರೆ ವೈನಿಷ್ಯನು ವಿಷಯೇಂದ್ರಯಗಳಿಗೆ ಕಟ್ಟುಬಿದ್ದು ಕೆಡುತ್ತಾನೆ ಆದ್ದರಿಂದ ಸ್ವಧರ್ಮ ನಿರತನಾಗಿ ಅನ್ಯ ಧರ್ಮವನ್ನು ದೂಷಿಸದೆ ತನ್ನ ತನ್ನ ಕರ್ಮೋಚರಣೆಯನ್ನು ಕ್ರಮವಾಗಿ ನಡೆಯಿಸಿ ಅದರ ಫಲ ತ್ಯಾಗದಿಂದ ಲೋಕೋದ್ಧಾರಕ್ಕೆ ಸಹಾಯಕನಾಗತಕ್ಕದು ಎಲ್ಲರ ಕರ್ತವ್ಯವು.

ಈ ವಿಷಯ ಪರಿತ್ಯಾಗಕ್ಕೋತ್ಸ್ಯರವೇ ಭಕ್ತನು ವಿಕಾಂತ ವಾಸವನ್ನು ಬಯಸುವನು. ಶಾಂತವೂ ಇಂದ್ರಿಯನಿಗ್ರಹವೂ, ತಪಸ್ಸೂ, ಶುಚಿಯೂ, ತಾಳ್ಮೆಯೂ, ಜ್ಞಾನವೂ ಬ್ರಾಹ್ಮಣ ಸ್ವಭಾವದ ಹುಟ್ಟುಗುಣವು ಪರಾಕ್ರಮವೂ, ತೇಜಸ್ಸೂ, ಧೈರ್ಯವೂ, ಸಾಮರ್ಥ್ಯವೂ, ಯುದ್ಧೋತ್ಸಾಹವೂ, ದಾನವೂ ದೇವಭಕ್ತಿಯೂ, ಕ್ಷತ್ರಿಯ ಸ್ವಭಾವವು. ವೈವ ಸಾಯವೂ, ಗೋಸಂರಕ್ಷಣೆಯೂ, ವ್ಯಾಪಾರರೂಪ ವೈಶ್ಯನ ಕರ್ತವ್ಯವು ಮತ್ತು ಸೇವೆಯು ಕೂದ್ರನ ಜಾಜರಣೆಯು. ತನ್ನ ತನ್ನ ಕರ್ಮದಲ್ಲಿ ಅನಿಕ್ಕೆಯುಳ್ಳ ಮನುಷ್ಯನು ಪೋಕ್ಷ ಗಾಮಿಯಾಗುವನು.

ಶ್ಲೋ. ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ | ಸ್ವಭಾವನಿಯತಂ ಕರ್ಮ ಕುರ್ವನಾಪ್ನೋತಿ ತಿಲ್ಬಿಷಮ್ ॥ ೪೭—೧೮—॥

ಗುಣನಿಲ್ಲದ ಸ್ವಧರ್ಮವು ಗುಣವುಳ್ಳ ಅನ್ಯಧರ್ಮಕ್ಕಿಂತ ಶ್ರೇಷ್ಠವು. ಸ್ವಭಾವದಿಂದ ನಿಶ್ಚಯವಾದ ಕರ್ಮವನ್ನು ಮಾಡಿದವನು ಪಾಪವನ್ನು ಹೊಂದನು

ಶ್ಲೋ. ಆಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಂ | ವಿಮುಚ್ಯ ನಿರ್ಮಮಃ ಶಾಂತೋ ಬ್ರಹ್ಮ ಭೂಯಾಯ ಕಲ್ಪತೇ ॥ ೫೩—೧೮—॥

ಅಹಂಕಾರ, ಬಲ, ದರ್ಪ, ಕಾಮ, ಕ್ರೋಧ, ಸಂಪಾದನಾ ಬುದ್ಧಿ ಇವಗಳನ್ನು ತ್ಯಜಿಸಿ ನಿಸ್ಪೃಹಿಯಾಗಿಲ್ಲದೆ ಶಾಂತನಾದವನು ಬ್ರಹ್ಮನನ್ನು ಪಡೆಯುತ್ತಾನೆ.

ಎಲ್ಲಾ ಕರ್ಮಗಳನ್ನೂ ಎಲ್ಲಾ ಕಾಲಗಳಲ್ಲಿಯೂ ಮಾಡುವವನಾಗಿ ತನ್ನನ್ನೇ ಶಕ್ತಿಯಾಗಿಸಿಕೊಂಡಿರುವವನನ್ನು ಭಗವಂತನು ಸಾಶಾಶ್ವತವಾದ ಶಾಶ್ವತ ಪದವಿಯನ್ನು ಕೊಟ್ಟು ಕಾಪಾಡುವನು. ಆದ್ದರಿಂದ ಮನಃಪೂರ್ವಕವಾಗಿ ಎಲ್ಲಾ ಕರ್ಮಗಳನ್ನೂ ಭಗವಂತನಲ್ಲರಿಸಿ ಜ್ಞಾನಯೋಗದಿಂದ ಅವನಲ್ಲಿಯೇ ಚಿತ್ತವುಳ್ಳವನಾಗಬೇಕು.

ಭಗವಂತನು ಅರ್ಜುನನನ್ನು ಕುರಿತು—

ಶ್ಲೋ. ಮನ್ಮನಾಭವ ಮದ್ಭಕ್ತೋ ಮದ್ಯಾಜೀಮಾಂ ನಮಸ್ಕುರು | ಮಾಮೇ ವೈಷ್ಯಸಿ ಸತ್ಯಂತೇ ಪ್ರತಿಜಾನೇ ಪ್ರಿಯೋಸಿಮೇ ॥ ೬೫—೧೮—॥

"ನನ್ನಲ್ಲಿ ಮನಸ್ಸುಳ್ಳವನೂ, ನನ್ನ ಭಕ್ತನೂ, ನನ್ನನ್ನು ಆರಾಧಿಸುವವನೂ ಆಗು. ನನ್ನ ನಮಸ್ಕಾರವನ್ನು ಮಾಡು, ಸತ್ಯವಾಗಿ ನನ್ನನ್ನೇ ಹೊಂದುವೆ ಸತ್ಯವಾದ ವಚನವನ್ನು ನಿನಗೆ ಕೊಡುತ್ತೇನೆ ನೀನು ನನಗೆ ಪ್ರಿಯನಾಗಿರುತ್ತೀ."

ಶ್ಲೋ॥ ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ | ಅಹಂತ್ವಾಂ ಸರ್ವ ಪಾಪೇಭ್ಯೋ ಮೋಕ್ಷ ಯಿಷ್ಯಾಮಿ ಮಾಶುಚಃ ॥೬೬—೧೮॥

"ಎಲ್ಲಾ ಧರ್ಮಗಳನ್ನು ಬಿಟ್ಟು ಒಬ್ಬನಾದ ನನ್ನನ್ನು ಆಶ್ರಯವಾಗಿ ಹೊಂದು. ನಾನು ನಿನ್ನನ್ನು ಎಲ್ಲಾ ಪಾಪಗಳ ದೆಸೆಯಿಂದ ಬಿಡಿಸುವೆನು."

ಇದೆಂದು ಭಗವಂತನ ದೊಡ್ಡ ಆಜ್ಞೆಯು ನುಪಿಕೆ. ಯಾವನು ಈ ಪರಮ ರಹಸ್ಯವನ್ನು ತಿಳಿದು ಅಭ್ಯಾಸ ಮಾಡುವನೋ ಅವನು ಅತಿಶಯವಾದ ಪರಮಾತ್ಮನನ್ನೇ ಹೊಂದುವನು ಸಂಶಯವಿಲ್ಲ.

ಈ ಮಾತುಗಳಿಂದ ಸಂತೋಷ ಚಿತ್ತವುಳ್ಳವನಾಗಿ ಅರ್ಜುನನು—

ಶ್ಲೋ. ನಷ್ಟೋ ಮೋಹಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ | ಸ್ಥಿತೋಸ್ಮಿಗತ ಸಂದೇಹಃ ಕರಿಷ್ಯೇವಚನಂ ತವ ॥ ೭೩—೧೮॥

"ಎಲ್ಲೆ ಅಚ್ಯುತನೇ—ನಿನ್ನ ಅನುಗ್ರಹದಿಂದ ನನ್ನಲ್ಲಿದ್ದ ಮೋಹವು ನಷ್ಟವಾಯಿತು. ನಾನು ಜ್ಞಾನವನ್ನು ಪಡೆದೆನು. ಸಂಶಯಗಳು ತೊಲಗಿದುವು. ಇನ್ನು ನಿನ್ನ ವಚನವನ್ನು ಪಾಲಿಸುತ್ತೇನೆ." ಎಂದು ಅರ್ಜುನನು ಮುಂದೆ ಯುದ್ಧ ಸನ್ನದ್ಧನಾದನು.

ಶ್ರೀವ್ಯಾಸ ಶಾಸ್ತ್ರಗಳವರು ಪುನಃ ಗೀತೋಕ್ತಿ ವಿಚಾರವನ್ನೂ ವಿಮರ್ಶನ ಗೀತಾತಾಮಹಿಮೆಯನ್ನೂ ವಿವರವಾಗಿ ವಿಕರಗೊಳಿಸಿದರು. ಭಗವಂತನು ಅರ್ಜುನನಿಗೆ ಕರ್ತವ್ಯಾಕರ್ತವ್ಯದ ವಿಚಾರ, ಕರ್ಮ, ಭಕ್ತಿ, ಜ್ಞಾನ ಇವೇ ಮುಂತಾದ ವಿಷಯಗಳನ್ನು ಬೋಧಿಸಿದ ಕ್ರಮವನ್ನು ವಿಕವಾಗಿ ವಿವರಿಸಿ ಹೇಳಿದರು. ಅಲ್ಲದೆ—

ಶ್ಲೋ. ತತ್ರಾಶ್ಚರ್ಯ್ಯಂ ಮುಹುರ್ಯಸ್ಯ ತೋಲಹರ್ಷೆ ಜಿತಾತ್ಮ ಕತ್ರೂನ್ | ಭುಂಜ್ಞನವಶ್ಚಾಜ್ಞಂ ಸಮೃದ್ಧಂ | ಮುಯೈವೈತೇನಿ ಹತಾಃ ಪೂರ್ವಮೇವ ನಿಮಿತ್ತ ಮಾತ್ರಂ ಭವಸೆನ್ಯಸಾಚಿನ್ ॥ ೩೩—೧೧—॥

"ಅರ್ಜುನಾ, ನೀನು ಎದ್ದು ನಿಂತಿರು, ಕೀರ್ತಿಯನ್ನು ಸಂಪಾದಿಸು, ಶತ್ರುಗಳನ್ನು ಜಯಿಸು ಸಾಂಪ್ರದ ರಾಜ್ಯವನ್ನು ಲಿ ನುಭವಿಸು, ಇವರೆಲ್ಲರೂ ಪೂರ್ವದೇ ನನ್ನಿಂದ ಕೊಲ್ಲಲ್ಪಟ್ಟಿದ್ದಾರೆ, ಎಲೈ ಅರ್ಜುನಸೇನೆ, ನೀನು ನಿಮಿತ್ತ ಮಾತ್ರನಾಗು" ಇದೇ ಭಗವಂತನ ಗೀತೆಯ ಪರಮ ಪವಿತ್ರವಾದ ಸಂದೇಶವು. ಬಾಬಾಜಿಯವರು ಪಂಡಿತರೀಯರಲು ಹೇಳಿದ್ದಂತೆ ಈ ಗೀತಾಸ್ವರೂಪವಚನ ಕಾರ್ಯವನ್ನು ಮುಗಿಸಿ ಮುಗಳೆವನ್ನು ಸೂಡಿದರು.

ಒಂದು ಮಾತು.

ಶ್ರೀವ್ಯಾಸ ಆತ್ಮಾರಾಮಶಾಸ್ತ್ರಿಗಳವರು ಪಂಡಿತರು ಮುಕ್ಕು ಕರ್ಮಾನಿಷ್ಠರು. ಇವರು ವೇದಾಂತ ಸುಳಪರರ ಪರವಾಗಿ ತುಂಬಾ ಶ್ರಮವಹಿಸಿ ಈ ಪವಿತ್ರ ಕಾರ್ಯದಲ್ಲಿ ನಿರತರಾದುದು ನಮ್ಮ ಮತ್ತು ವಾಚಕರ ಸೌಭಾಗ್ಯವೇ ಸರಿ. ಸಾರಸಾರ್ಥಕ ದೃಷ್ಟಿಯಿಂ ಕಷ್ಟಮೆಯೂಗುತ್ತಿರುವಾಗ ಈ ತರಹದ ತರಂಗಗಳು ಕಬ್ಬು ಮಾಡುತ್ತಿದ್ದರೆ ಆಗ ಎಲ್ಲರೂ ಜಾಗ್ರತರಾಗುವರು.

"Religion is the manifestation of the divinity already in man" "ಸಾರವರ್ತಿಕ ದೃಷ್ಟಿಯಿಂದಲೆ ಆಗಲೇ ಮಾನವ ಜನ್ಮದಲ್ಲಿ ಆವಿರ್ಭವಿಸಿದ ದೈವಿತ್ವವನ್ನು ಭಕ್ತಿಯ ಸ್ವೀಕಾರವೆ ಧರ್ಮ" ಎಂಬ ಸಾಧುವಾಣಿಯು ಶ್ರೀಸದ್ವಿವೇಕಾನಂದಜೀಯವರ ಪರಿಶುದ್ಧವಾದ ಮುಖ ಕಮಲದಿಂದ ಹೊರಬಿತ್ತು. ಹಾಗೆಯೇ ಭಕ್ತಿಯಿಂದ ಈ ಗೀತಾವಾರಾಯಣವನ್ನು ಸ್ರೀತಿಯಿಂದ ಕೈಕೊಳ್ಳಬೇಕಾದುದು ಅತ್ಯವಶ್ಯವು. ಅಲ್ಲದೆ ನಿತ್ಯವೂ ಸ್ತೋತ್ರಕ್ಕೆ ಅರ್ಹವಾದ ಗೀತೆ ಹನ್ನೊಂದನೆಯ ಅಧ್ಯಾಯದಲ್ಲಿ ಅರ್ಜುನನು ಮಾಡಿರುವ ಭಗವದ್ವರ್ಣನೆಯನ್ನು ಪ್ರತಿಯೊಬ್ಬನೂ ಪ್ರತಿ ದಿನವೂ ಮನನಮಾಡಬೇಕಾಗಿ ನಮ್ಮ ವಿನಂತಿಯಿದೆ

ಸ್ವೆಸ್ಥ ವ್ಯಾಕ್ಯಕ್ಕೆ ಸಂಪಾಲಯಮು ತಾಂತಾನ್ಯಂಗಿ ಮೋಗೇಣ ಮುಚ್ಛಿಂಯಹೇತಾಃ ಗೆಳೆಜಾಪ್ಯತ್ಯಣೇಭ್ಯಃ ಶುಭ ಮೆನ್ನು ನಿತ್ಯಂ ಲೋಕಾಃ ಸಮಸ್ತಾಃ ಸುಖಿನೋಭವಂತು. ಸ್ವಜೆಗೆಳ್ಳರಿಗೂ ಮಂಗಳವಾಗಲಿ, ರಾಜರು ಧರ್ಮಾನುಸಾರ ಧರ್ಮದಿಂದ ಪರಿವಾಲಿಸಲಿ. ಗೋಬ್ರಾಹ್ಮಣರಿಗೂ, ಬ್ರಾಹ್ಮಣಾರಿಗೂ, ಇಡೀ ಪ್ರಪಂಚಕ್ಕೂ ಸರ್ವದಾ ಸುಖವು. ಟಾಗಲಿ.

ಸಂಪೂರ್ಣಂ.

ಮಹಿಷಾಹುತಿ ನಿಶೇಧ ವಿಷಯಂಗ.

(ತಾಜಿತ್ತವರಿಂದ.)

ತಾವೇಕು 23—3—30ರಲ್ಲಿ ಮಡಿಕೇರಿ ಸುಬ್ಬಿಲ್ ಹೈಸ್ಕೂಲ್ ಹಾಲ್‌ನಲ್ಲಿ ಕಾಟಕೇರಿ, ಇಮ್ಮವಳವಾಡಿ, ಹೊರಮಲೆ, ಹಾಲೇರಿ, ಮಡಿಕೇರಿನಾಡು, ಮಕ್ಕಂದೂರು ಮತ್ತು ಕೆವಕಲ್ ಮುಂತಾದ ಏಳು ಗ್ರಾಮಗಳ ಮತ್ತು ಮಡಿಕೇರಿಯ ನಿವಾಸಿಗಳ ಒಂದು ಸಾರ್ವಜನಿಕ ಸಭೆಯು ಮೆ. ಪಿ ಎ ಜೆ ಲ್ಯಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾಟಕೇರಿ ವಂಶಾವಳಿ ಗ್ರಾಮಗಳಲ್ಲಿ ಇದು ವರೆಗೆ ನಡೆಯುತ್ತಿದ್ದ ಮಹಿಷಾಹುತಿಯನ್ನು ನಿಲ್ಲಿಸುವ ಸಂಬಂಧ ಪವಸ್ಸರ ಅಭಿಪ್ರಾಯಗಳನ್ನು ಹೊರಗೆಡವಿ. ತಕ್ಕ ವಿಚಾರಣೆ ವಹಿಸಬೇಕಾದುದೇ ಸಭೆಯ ಮುಖ್ಯೋದ್ದೇಶವಾಗಿತ್ತು. ಮೆ. ಚಿಟ್ಟಂಡ ಗಣಪತಿಯವರು ಸಭೆಯು ಉದಿಸಿ ಕಾರ್ಯಕ್ರಮವನ್ನು ಸೂಚಿಸಿದರು. ಮೆ. ಗಳಾದ ಡಿ. ಎಂ. ಸಿದ್ದಲಿಂಗಯ್ಯನವರು, ಪುಲಿಯಂಡ ಐಯ್ಯಪ್ಪನವರು, ಕೋಟಿ ವ್ಯೆಚಿಣ್ಣಪ್ಪನವರು, ಮನೆಯಪಂಡ ಬೆಳ್ಯಪ್ಪನವರು, ಶ್ರೀಕಂಠಯ್ಯನವರು, ಚೆಪ್ಪಿರ ಕುಶಾಲಪ್ಪನವರು, ಸಿ ಯನ್. ಪೆಂಕಪ್ಪಯ್ಯನವರು, ಯಂ. ಕೃಷ್ಣರಾಯರು ಮತ್ತು ಪಂದಿಕುತ್ತಿರ ಜಂಗಿಪ್ಪನವರು ಕಾಲೋಚಿತವಾದ ಭಾಷಣಗಳನ್ನು ಕೊಟ್ಟರು. ಇವರ ಭಾಷಣಗಳ ಸಾರಾಂಶವು ಕೆಳಗೆ ಕೊಡಲ್ಪಟ್ಟಿದೆ.

ಮೆ. ಚೆಕ್ಕೆರ ಗಣಪತ್ಯಯ್ಯನವರು—"ದೇವರ ಹೆಸರಿನಲ್ಲಿ ನಮಯಿಸಲ್ಪಡುವ ಸಾಹಸ್ರಗಟ್ಟಲೆ ವ್ಯಕ್ತಿಗಳಗಳ ಅರ್ಜಿಯನ್ನು ವಿಮರ್ಶಿಸಲು ನಾವು ಇಂದು ಇಲ್ಲಿ ನೆರೆದಿದ್ದೇವೆ. ಅವರಾಧಿ ಸ್ಥಾನದಲ್ಲಿ ನಿಂತಿರುವ ಮನುಷ್ಯವರ್ಗಕ್ಕೂ, ಮೂಕನಿಷ್ಠಾಳು ಭಾತಿಯಿಸ್ಸಾರಿಯದ ಮೂಗುವಾಣಿಗಳಿಗೂ ನಿರ್ವಂಚನೀಯವಾದ ತೀರ್ಪನ್ನು ಕೊಡುವಿರಾಗಿ ಸಾವಿವ್ವೆನೆ ಪ್ರಸಂಚದ ಎಲ್ಲಾ ಮತಗಳಲ್ಲಿ ಸತ್ಯ ಮತ್ತು ಅಹಿಂಸೆ ಎಂಬ ಆತಿ ವಿಶಾಯದ ಮೇಲೆ ಕಟ್ಟಲ್ಪಟ್ಟಿವೆ. ಅಹಿಂಸಾ ಪರಮೋಧರ್ಮ ಎಂಬ ವಾಕ್ಯವು ಎಲ್ಲಾ ಮತ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಇಂದಿನ ಮತವನ್ನು ಹೇಳುವುದಾದರೆ ಆ ಕಟರಮತಿ ಆತ್ಯಮದ ದೇವಮೂತನ ಆಮಂನಾವಾಣಿಯೊ, ಕಾಂತಿ ನಿ ಕೇತನದ ಮಹೋಪಾಧ್ಯಾಯಕ ಶಾಂತಿ, ಶಾಂತಿ ಎಂಬ ನುಡಿಯೂ ನಮ್ಮ ಕಿವಿಯಲ್ಲಿ ಹಗಲು ರಾತ್ರೆ ಹೊಡೆಯುತ್ತಿವೆ. ಪ್ರಪಂಚದ ಜೀವಜ್ಯೋತಿಗಳಾದ ಈ ಮಹಾತ್ಮರ ಸಂದೇಶವನ್ನು ಗ್ರಾಮಾಂತರದ ಸಹೋದರರಿಗೆ ತಿಳಿಸಲು ನಾವೋಷಿಸಿದ್ದೇವೆ. ಈ ಪುಣ್ಯ ಸತ್ಕಾರ್ಯಕ್ಕೆ ದೇಶದಲ್ಲಿ ವ್ಯಾಪಾರದಲ್ಲಿ ಸಂಘಗಳು ಸ್ಥಾಪಿಸಲ್ಪಟ್ಟು ಆಹಾರಕ್ಕಾಗಿ ಅಲ್ಲದೆ ಅನಾವಶ್ಯಕವಾದ ವ್ಯಾಪಾರಾಂಶವನ್ನು ನಿಲ್ಲಿಸುತ್ತಾ ಬಹುಕಾಲ ವಿ. ಮೊನ್ನೆ ತಾನೆ ಮದ್ರಾಸು ಆರಿಯಕ್ಷದ ಗನರ್ನರರು ವ್ಯಾಪಾರದಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಿ ಮಾತಾಡಿದರು. ಮೈಸೂರು ವ್ಯಾಪಾರ ತ್ಯದಲ್ಲಿ ಗೋವಧಾ ನಿಷೇಧದ ಕಾಯಿದೆಯೆನ್ನುಂಟುಮಾಡಲು ವಿರುದ್ಧ ಬಂಗ್ಲೆ ಬಂದು ಪರಿಶಿಯನ್ನು ನಿರ್ವಹಿಸಿದ್ದಾರೆ. ಅಲ್ಲಿ ಅನೇಕ ದೇವಸ್ಥಾನಗಳಲ್ಲಿ ಸಾವಿರಗಟ್ಟಲೆ ಕೊಡಿಕ್ಕಿದ್ದ ಕುರಿ, ಕೋಳಿ, ಕೋಣಗಳ ಆಹುತಿಯನ್ನು ಜನರು ತಾವಾಗಿಯೇ ನಿಲ್ಲಿಸಿ ಸಾತ್ವಿಕ ಪೂಜೆಯನ್ನು ನೆಲೆಗೊಳಿಸಿದ್ದಾರೆ. ತಿರುವಂಕೂರು ವ್ಯಾಪ್ತಿದಲ್ಲಿ ಮಹಾರಾಣಾ ಯವರ ವ್ಯಾಣಾ ಬಲಿಯನ್ನು ಕಟ್ಟುಬ್ಬಿಯುರ ನಿಲ್ಲಿಸಿದ್ದಾರೆ. ಇದರ ಬಡಲು ಸಾತೆ ಕಾಯಿಯಲ್ಲು ಅರ್ಪಿಸುತ್ತಾರೆ.

ಕೊಡಗಿನ ನಿವಾಸಿಗಳಾದ ಕೊಡಗರಾದರೋ ಇತರ ಎಲ್ಲಾ ವಿಷಯಗಳಲ್ಲಿ ಹೊಸ ಹೊಸ ಸಮಾಜ ಸುಧಾರಣೆಯ ಕಾಯಿದೆಗಳಿಗೆ ಒಗಾಗದಷ್ಟು ನಾಗರಿಕರಾದೊಡೂ ದೈವಿಕ ವಿಚಾರದಲ್ಲಿ ಕನಿಷ್ಟ ವರ್ಗಕ್ಕೆ ಸೇರಿದವರೆಂದು ಹೇಳಲು ವಿಷಾದಿಸುತ್ತೇನೆ. ವ್ಯಾಣಾ ಬಲಿಯು ಹಿಂದೂ ಧರ್ಮದಲ್ಲಿ ಅತ್ಯಂತ ಕೆಳವ್ಯ ವರ್ಗಕ್ಕೆ ಸೇರಿದಿನಲ್ಲಪಟ್ಟ ಪೂಜಾ ವಿಧಿಯಂ ಗ್ರಾಮಾಂತರ ಸಹೋದರರೇ, ಇಂದಿನ ಸಂದೇಶವನ್ನು ತಿಳಿದು ನಿಮ್ಮ ಗ್ರಾಮಗಳಲ್ಲಿ ಅಮಾನುಷ ಬಾಲಬಲಿಯನ್ನು ಪಾಳಿಸಿ.' ಎಂದು ಹೇಳಿದರು.

ಮೆ. ತಿಮ್ಮಿಗಮ್ಮಯ್ಯನವರು—ವ್ಯಾಣಾ ಬಲಿಯು ಹಿಂದೂ ಮತಕ್ಕಷ್ಟೆ ಅಗಿ ಜಾಗಾ ಬಾತಿಯಾದುದಲ್ಲ ಸವಿಕಾಲದಲ್ಲಾ ನಿವ ಎಳು ಶತ್ರು ಕೆಟ್ಟ ಕೆಲಸಕ್ಕೆ ಬೆಂದು ಕಾಲ್ಪನಿಕವಾಗಿ ಸೃಷ್ಟಿಸಲ್ಪಟ್ಟಿರುವುದೆ ಬಹಿತ ಸತ್ಯವಲ್ಲದೆ, ಆಹಾರವಾಗಿ ಉರುಬೋಗಿಸದ ಕೋಣಗಳನ್ನು ಬಲಿ ಕೊಡ ವುದು ಸಾಧಾರಣವಾಗಿ ಎಲ್ಲಾ ಕಡೆಗಳಲ್ಲಿಯೂ ಇರುವ ಪದ್ಧತಿಯಾಗಿದೆ. ಇದರಿಂದ ಧೈರ್ಯ ರಿಗೆ ತುಂಬಾ ಅಧಿಕ ನಷ್ಟವಿಸಿದೆಯೆಂದೂ ಮುಂತಾಗಿ ಹೇಳಿದರು.

ಮೆ. ಪುಲಿಯಂಡ ಐಯ್ಯಪ್ಪನವರು—"ವ್ಯಾಣಾ ಬಲಿಯು ಅನಾಗರೀಕರ ಪದ್ಧತಿಯಿಂದಲೂ ನಡೆಯುತ್ತಾ ಬಂದಿರುವುದರಿಂದ ನಾವು ಹುಮ್ಮಸ್ಸಿನಿಂದಲೂ ಬುದ್ಧಿಪೂರ್ವಕವೂ ಯೋಚಿಸಿ ವ್ಯಾಣಾ ಬಲಿಯನ್ನು ಸಂಪೂರ್ಣವಾಗಿ ನಿಷೇಧಿಸುವುದು ಯುಕ್ತವೆಲ್ಲ. ಆದರೆ ತಾವು ತಿನ್ನತಕ್ಕ ಪದಾರ್ಥಗಳ ಬದಲು ತಿನ್ನದಂಥ ಕೋಣ ಇತ್ಯಾದಿಗಳನ್ನು ಬಲಿಯಾಗಿ ಅರ್ಪಿಸುವುದು ನ್ಯಾಯವಲ್ಲ" ಎಂದರು. ಅಪ್ಪಚ್ಚಿರ ಮೆ. ಅಪ್ಪಚ್ಚು ಮಂಡಾಡಿ ಚಿಣ್ಣಪ್ಪನವರು ಎದ್ದು ನಿಂತ. "ಈ ವರೆಗೆ ನಡೆದು ಬಂದ ಪೂರ್ವ ಪದ್ಧತಿಯನ್ನು ನಿಲ್ಲಿಸಲು ಯತ್ನಿಸುವುದು ಪ್ರಯೋಜನಕಾರಿಯಲ್ಲ. ಆಯಾ ಕಡೆಗಳಲ್ಲಿ ಆಯಾ ಜನರಿಗೆ ತನ್ನ ಸ್ವಭಾವದಲ್ಲಿ ಹೃದಯಂಗಮವಾಗುವಂತೆ ವಿವರಿಸಿದರು. ಇದೂ ಇಲ್ಲದೆ, ಮಹಿಷಾಹುತಿಯನ್ನು ನಿಲ್ಲಿಸುವುದರಿಂದ ಬರಬಹುದಾದ ಮುಖ್ಯಾಂಶಗಳನ್ನು ತಾವು ಹೊಸಪಡಿಸುತ್ತೇವೆ ನೀವು ಕಾರ್ಯಕ್ರಮವಾಗಿ ಮೇಳೆದರು.

ಮೆ. ಕೋಟೆರ ಚಿಣ್ಣಪ್ಪನವರು—"ವ್ಯಾಣಾ ಬಲಿಯು ಅನಾಗರೀಕರ ಪದ್ಧತಿಯೆಂಬುದನ್ನು ಗ್ರಾಮಾಂತರದ ಜನರಿಗೆ ತನ್ಮ ಸ್ವಭಾವದಲ್ಲಿ ಹೃದಯಂಗಮವಾಗುವಂತೆ ವಿವರಿಸಿದರು. ಇದೂ ಇಲ್ಲದೆ, ಮಹಿಷಾಹುತಿಯನ್ನು ನಿಲ್ಲಿಸುವುದರಿಂದ ಬರಬಹುದಾದ ಮುಖ್ಯಾಂಶಗಳನ್ನು ತಾವು ಹೊಸಪಡಿಸುತ್ತೇನೆ ನೀವು ಕಾರ್ಯಕ್ರಮವಾಗಿ ಮೇಳೆದರು.

ಮೆ. ಕೋಟೆರ ಚಿಣ್ಣಪ್ಪನವರ ಭಾಷಣವಾದ ನಂತರ, ಅಲ್ಲಿ ನೇರಿದ ಸಭೆಕರ ಅಭಿಪ್ರಾಯವನ್ನು ಕೇಳಲಾಗಿ, ಸರ್ವಾನುಣ್ಣಯ್ಯನವರು—"ವೈವಾವೇಷ (ತೋಳ್) ವನ್ನು ಕಳಿದೆ ಆ ಪದ್ಧತಿಯನ್ನು ನಿಲ್ಲಿಸುವುದು ಅವಶ್ಯ' ನೆಂದರು. (ಸಭೆಯಲ್ಲಿ ನಗೆ)

ಮೆ. ಕೋಡಂಡ ದೊಡ್ಡಯ್ಯನವರು—'ಮಹಿಷಾಹುತಿಯನ್ನು ನಿಲ್ಲಿಸಲು ನಾವಿಲ್ಲರೂ (ಪಾಲುಬಿದ್ದ ಹೊರಮಲೆ ನಾಡಿನವರು) ಒಪ್ಪುತ್ತೇನೆ. ಆದರೆ ಅನೇಕ ತಕ್ಕ ಮುಖ್ಯಸ್ಥರು ಗೈರಾಹಾಜರಾಗಿರುವುದರಿಂದ ಅವರ ಅನುಮತಿ ಬಗ್ಗೆ, ಹೆಚ್ಚಕ್ಕೆ ಮೊಸಲೇ ಇನ್ನೊಂದು ಸಿಭೆಯಾಗಿ ಸೂಡಿಸೀಕು'ವುದು ಕಂಡಿ ತೊಡಿದು.

ಮೆ. ಮನೆಯಪಂಡ ಬೆಳ್ಯಪ್ಪನವರು—"ವ್ಯಾಣಾಬಲಿ ಕೆಲಮಂದಿಯು ನಿಲ್ಲಿಸುವುದರ ಸಂಬಂಧವಾಗಿ ಹೆಚ್ಚು ಯೋಚಿಸಬೇಕಾಗಿಲ್ಲ. ರಾಷ್ಟ್ರಪಿಬ್ಬಲಿಯು ಪುರೋಹಿತರು ತಾಂತ್ರಿಕವಾಗಿ ತೊಡುವುತ್ತಾರೆ. ಅವರು ಅನೇಕ ಕಡೆ ಇಂಥಾ ಅಮಾನುಷಗಳನ್ನು ನಿಲ್ಲಿಸಿದ್ದಾರೆ" ಎಂದರು.

ಮೆ ಶ್ರೀಕಂಠಯ್ಯನವರು—(ತಿಲ್ಲೇಕಧಾರಾದ ಮೇರೆ) ಜನರು ಕೋಳಿ, ಕುರಿ, ಕೋಣ ಮೊದಲಾದ ಸಾಧು ವ್ಯಾಣಾಗಳನ್ನು ದೇವಂಗೆಯಾಗಿ ಅರ್ಪಿಸುವುದೇನೋ ನಿಜ. ಇದರ ಬದಲು ಆಸೆ ಹುಲಿ, ಕರಡಿಗಳನ್ನು ಬೆಂಕಿ ಆರ್ಪಿಸುವುದಿಲ್ಲ? ಇಂಥ ಮೃಗಗಳನ್ನು ಬಲಿಕೊಡಲು ದೇಇದೆ, ಪೂಜಾಂಮುಸ್ಸೇ ಈ ಮೃಗಗಳು ಬಲಿಕೊಡುವುವು ಅತ್ಯರಿಂದ ಸಾಧುವಾಣಾಗಳನ್ನು ಬಹಿಸು ಅವುಗಳನ್ನು ಬಲಿಸು ಅರ್ಪಿಸುವುದು ಶಾಸ್ತ್ರ ವಿರುದ್ಧವು. ದೇವರು ವನ್ಯಮೃಗವಿದ ವೆನ್ನು ಅಪೇಕ್ಷಿಸುವುದಿಲ್ಲ. ಕಾರಣಕೆ ಕೊಟ್ಟಿದೆ ಆ ಕಾಣಿಯ ಕೂಡ ದೇವರಿಂದ ಸ್ವೀಕರಿಸಲ್ಪಡದೆ ಅಲ್ಲೇ ಬಿದ್ದು ಕಾಶ್ಯ

ಮ. ಚ್ನ್ನಿರ ಕುಶಾಲಪ್ಪನವರು—ನೇಪರೆಂಡರೆ ನಾವು ಭಾವಿಸುವಷ್ಟು ಧಯಂಕರನಲ್ಲ. ಮನುಷ್ಯಾಕಾರದ ದೊಡ್ಡ ಹೊಟ್ಟೆಯ ರಕ್ಕಸನಾಕಾಶ್ಯಾಗಿ ಆಕಾಶದಲ್ಲಿ ಕೂತಿರುವ ಒಂದು ವ್ಯಾಣ್‌ಯಲ್ಲ. ದೇವರಿಂದಲೆ ಸರ್ವವ್ಯಾಪಕವಾದ ಒಂದು ಶಕ್ತಿ. ವ್ಯಾಣ್ ಬಲಿಯನ್ನು ದೇವರಿಗೆ ಲಂಚ ರೂಪದಲ್ಲಿ ಕೊಟ್ಟು ಕರ್ಯದ ಫಲವನ್ನು ನಿವಾರಿಸಿಕೊಳ್ಳುವುದು ಕೇವಲ ಅನಾಧ್ಯವು ವ್ಯಾಣ್ ಬಲಿಯು ಮೂಢ ಶಿಖಾಮಣಿಗಳಿಂದ ಎತ್ತಿ ಹಿಡಿಯಲ್ಪಟ್ಟ ಪೂಜಾವಿಧಿ ದೇವರು ಸೃಷ್ಟಿಸಿದ ವ್ಯಾಣ್‌ಯನ್ನು ದೇವರಿಗೆಂದು ಒಲಿ ಕೊಡುವದರಲ್ಲಿ ಅರ್ಥವಿಲ್ಲ. ಕೋಣನ ಬಲಿಯು ಹಿಂದೂ ಧರ್ಮಕ್ಕೆ ವಿರೋಧವಾಗಿದೆ. ಇದೂ ಅಲ್ಲದೆ ದೇಶದ ವಿಕಗೆಯಿಂದ ಪೈನ ನಾಯಗಾರಣ ಸುಲಭ ಜೀವನಕ್ಕೆ ಕೋಣ, ಎತ್ತು ಮುಂತಾದ ವ್ಯಾಣ್‌ಗಳಿಂದ ಬಹಳ ಪ್ರಯೋಜನಗಳಿವೆ ಆದುದರಿಂದ ಮಹಿಷಾಮರ್ತಿಯು ಖಿಡಿಸಿಲ್ಪಡಕ್ಕುದೆಂದು ಹೇಳಿದರು

ವೆ. ಸಿ. ಎನ್. ವೆಂಕಪ್ಪಯ್ಯನವರು-ವ್ಯಾಣ್ ಬಲಿಯು ಒಂದು ಕ್ರೂರ ಮತ್ತು ಹಿಂನಾತ್ಯಕವಾದುದು. ರಕ್ಷವನ್ನು ಕುಡಿಯಲು ಆಪೇಕ್ಷಿಸುವ ದೇವತೆಗಳನ್ನು ಪಿಶಾಚಿಗಳೆಂದರೆ ತಪ್ಪಾಗಲಾರದು. ಅಂಥಾ ಪಿಶಾಚಿಗಳನ್ನು ಊಂದ ಹೆರಗೆ ಓಡಿಸಬೇಕು. ಪಶು ಬಲಿಯು ಬರೇ ಕಾಡು ಮತ್ತು ಮೂಢ ಜನುಗೆ ಹೇಳಿದ್ದು. ನುಷ್ಯೂದೀಯು ಗೋವಧೆ ಮಾಡಿದರೆ ಹಿಂದೂಗಳೆಲ್ಲರೂ ಹುಲ್ಲು ಕಡಿಯುತ್ತಾರೆ. ಹೀಗಿರುವಲ್ಲಿ ನಮ್ಮ ಮತಾಚಾರಗಳಿಗೆ ಕೇವಲ ಅಯೋಗ್ಯವಾದ ಈ ಕಾರ್ಯವನ್ನು ನಡಿಸುವುದು ಒಳ್ಳೆಯದಲ್ಲ. ಕೋಣನ ಬಲಿಯನ್ನಂತೂ ನಮ್ಮ ದೇಶೀಯರೆಲ್ಲರೂ ನಿಲ್ಲಿಸಲೇಬೇಕಾಗಿದೆ.

ಮೆ. ಯು. ಯಂ ಕೃಷ್ಣಕಾಯರು—ಕಟುಕರ ಮನೆಯ ಎಲ್ಲಾಗುವ ವ್ಯಾಣ್‌ವಧೆಯ ದೃಶ್ಯವನ್ನು ಎಲ್ಲರ ಮನಃಕರಗುವಂತೆ ವರ್ಣಿಸಿ, ವ್ಯಾಣ್‌ಬಲಿಯನ್ನು ನಿಲ್ಲಿಸುವುದರೊಂದಿಗೆ ಮೂಂಸ ಆಹಾರವನ್ನೂ ಬಿಡಬೇಕೆಂದು ಹೇಳಿದರು.

ಕೊನೆಗೆ ಮೆ. ಪಂದಿಕುತ್ತಿರ ಚಂಗಪ್ಪನವರು—"ನಾವು ಹಿಂದಿನ ಅನೇಕ ಪದ್ಧತಿಗಳನ್ನು ಬಿಟ್ಟಿರುತ್ತೇವೆ. ಹುತ್ತಿ ಹಬ್ಬದಲ್ಲಿಯೂ ಕೂಡ ಅನೇಕ ಪದ್ಧತಿಗಳು ಬಿಟ್ಟು ಹೋಗಿರುತ್ತವೆ. ಇದಕ್ಕೆ ದೇವರ ಮುಯ್ಯಿ ಇಲ್ಲ. ಕೋಣನ ಬಲಿಯನ್ನು ನಿಲ್ಲಿಸಿದ ಮಾತ್ರಕ್ಕೆ ದೇವರಿಂದ ಮುಯ್ಯಿಯಂತೆ! ಇದು ಕೇವಲ ತಪ್ಪು ಅಧನ್ಯಾಯವು. ಮೇಲೆ ಹೇಳಿದ ಏಳು ನಲೆಯವರು ಈ ಗೋಪತ್ಯ ವಾಪದಿಂದ ಬಹಳ ಹಿಂದೆ ಬಿದ್ದಿರುತ್ತಾರೆ. ಈ ಕ್ರೂರ ಕೃತ್ಯವನ್ನು ನಿಲ್ಲಿಸುವುದರಿಂದ ಕೆಡಕು ಉಂಟಾಗುವುದೇ ಇಲ್ಲ. ದೇವರಿಗೆ ಇದು ವಿರೋಧವಾಗಿದ್ದರೆ, ಇಂದು ಈ ಸಭೆಯೂ ಇಲ್ಲಿ ಸೇರುತ್ತಿರಲಿಲ್ಲ. ಆದುದರಿಂದ ಮಹಿಷಾಮರ್ತಿಯನ್ನು ನಿಲ್ಲಿಸುವುದು ಯೋಗ್ಯವಾದುದೆ"ಂದು ಹೇಳಿದರು.

ಆನಂತರ ಅಧ್ಯಕ್ಷರು ಮಾಡಿದ ಭಾಷಣವು ರಸ ಪೂರಿತವಾಗಿದ್ದಿತ. "ಕೊಡಗಿನಲ್ಲಿ ಗೋವಧಾ ನಿರೋಧದ ಕಾಯದೆಯು ಒಂದು ಇದೆಯೆಂದೆ. ನಾನು ನೆನಸುತ್ತೇನೆ. ಮಹಿಷಾಮರ್ತಿಯು ಗುಟ್ಟಿನಲ್ಲಿ ನಡಯುತ್ತಿದ್ದು ಈ ವರೆಗೂ ಯಾರಿಗೂ ಗೊತ್ತಿಲ್ಲದೆ ಜೀರಲಿಲ್ಲ. ಈಗ ಹೊಂಬಿದ್ದರುವದರಿಂದ ಅದನ್ನು ನಿಲ್ಲಿಸಲು ಎಲ್ಲರೂ ಯತ್ನಿಸಬೇಕು. ಹಳೇ ಪದ್ಧತಿಯಾದ ನರಬಲಿಯನ್ನು ನಿಲ್ಲಿಸಿರುವಾಗ ಕೋಣನ ಬಲಿಯನ್ನು ನಿಲ್ಲಿಸುವುದರಿಂದ ದೋಷವೆಸಗಾ ಬರುವ ಹಾಗಿಲ್ಲ. ಮತ್ಯದೀಯರಾದರೋ ತಾವು ತಿನ್ನುವ ಮೃಗಗಳನ್ನು ಕೂಲ್ಲುವಾಗ್ಯೆ ಅವರ 'ಅಲ್ಲಾ'ನಿಗೆ ಅರ್ಪಿಸುತ್ತಾರೆ. ಅದು ನ್ಯಾಯವಾದಿ ಅರ್ಪಣೆ. ಆದರೆ ಕೂಡಗಿನ ಗ್ರಾಮಸ್ಥರು ತಾವು ತಿನ್ನುವ ವಸ್ತುಗಳನ್ನೆಲ್ಲಾ ದೇವರಿಗೆ ಅರ್ಪಿಸುವುದಿಲ್ಲ. ಅದರ ಒಡಲು ಕಾಯಕಕ್ಲೆಷಗಳು ಒಂದಾಗಿ ವೈಕ್ಯ ಹಬೆಕೆ ಚಟ್ಟಿ ಕೊಂಡು, ಬರೀ ವ್ಯಾಣನನ್ನು ಅರ್ಪಿಸಬೇಕೆಂಬ ಉದ್ದೇಶದಿಂದ ಒಹು ಎಳೆಯದಾದ ಯಾ ಲಾಷಾರಾದ, ತಿನ್ನಲು ಅಯೋಗ್ಯವಾದ ವ್ಯಗಳನ್ನು ದೇವರಿಗೂದು ಒಲಿಕೊಡುವುದು ನೀಚಪದ್ಧತಿಯೂಗಿದೆ. ದೇವರು ಎಂದೂ ಲಂಚಕೋರನಲ್ಲ. ಒಂದು ವ್ಯಾಣ್‌ಯನ್ನು ತಿನ್ನಲೇಕಾದಿದ್ದರೆ ಚಿತ್ರಹಿಂಸೆ ಮಾಡದೆ ಕೊಂದು ತಿನ್ನುವುದು ಒಳ್ಳೆದು. ತಿನ್ನಲಾಗದ ವ್ಯಾಣ್‌ಯನ್ನು ಅನಾವಶ್ಯಕವಾಗಿ ಕೊಂದು ಬಿಸಾಡುವುದು ಯಾವ ನ್ಯಾಯ. ಆದುದರಿಂದ ಇಂದಾ ಮಹಿಷಾಮರ್ತಿಯನ್ನು ನಿಲ್ಲಿಸಲು ಒಂದು ಕಮಿಟಿಯನ್ನು ಏರ್ಪಡಿಸಿರಿ' ಎಂದು ಕೇಳಿಕೊಂಡರು. ಅದರಂತೆಯೇ ಈ ಕಳಗೆ ಕಾಣುವ ಮಹನೀಯರಿಂದ ಕೂಡಿದ ಒಂದು ಕಮಿಟಿಯು ಏರ್ಪಾಡಾಯಿತು. ಮತ್ತು ಅಲ್ಲಿ ನೇರದ ಏಳು ನಲೆಯ ಗ್ರಾಮಸ್ಥರು 'ತಾವು ಇನ್ನು ಮುಂದಕ್ಕೆ ಕೋಣನ ಬಲಿಕೊಡಲು ಪೂರ್ತಿ ವಿರೋಧಿಸುತ್ತೇವೆ'ಯೆಂಬ ಕರಾವೊಪ್ಪನ್ನು ವಿಷೇಶಭಾವದಿಂದ ಅಂಗೀಕರಿಸಿದರು. ಕಮಿಟಿಯು ಹೊಂಮಲೆ ನಾಡಿನವರ ಹುಬ್ಬಕ್ಕೆ ಮೊದಲೇ ಒಂದು ವಿಷಯಿಂಗ' ಮೂಡುವಂತೆ ವರ್ಪಡಿಸಲಾಯಿತು.

ಕಮಿಟಿಯ ಮೆಂಬರುಗಳು.

1. ಇಬ್ಬನವಾಡಿ ಗ್ರಾಮ—(1) ಮೆ ಗಳಾದ ಚಿಟ್ಟಂಡ ಚಿಣ್ಣಪ್ಪ, (2) ನಂದಿನೆರವಂಡ ಮಂದಣ್ಣ. 2. ಕಾಟಕೇರಿ-(1) ಚಿಮ್ಮಂಡ ಚಿಂಗಪ್ಪ, (2) ಚೈಟ್ಟಿ ಪೂದಪ್ಪ. 3. ಹೊರಮಲೆ—(1) ಅಮ್ಮಚಿವಂಡ್‌ಯಂಡ ಚಿಂಗಪ್ಪ, (2) ನಲಪಟ್ಟ ಮೊದಪ್ಪ. 4. ಕಾಕೇರಿ—(1) ಮರುವಂತ ಬೋಪ್ಪಯ್ಯ, (2) ಮುದ್ದರ ಕಾರ್ಯಪ್ಪ. 5 ಮತಿಕೇರಿನಾಡು—(1) ನಾಂಡಿರ ಪೂವೈಯ್ಯ, (2) ಬೊಳ್ಳೆರ ಸುಬ್ಬಯ್ಯ. 6 ನಲ್ಕುಂದೂರು—(1) ಕುಂಬುಗೌಡನ ಅಪ್ಪಯ್ಯ, (2) ತೂಕ್ಕಲೆರ ತಿಮ್ಮಯ್ಯ. 7. ಕೆದಕಲ್—(1) ಪುಲ್ಲೆರ ಬೋಪ್ಪಯ್ಯ, (2) ಯಂತನ ಕಾಳಪ್ಪನವರು.

ಶ್ರೀಮಂಗಲನಾಡು ಓಟರುಗಳಲ್ಲಿ ವಿನಂತಿ.

ದೇಶ ಸೇವೆ ಮಾಡಬೇಕೆಂಬ ಅಧಿಶಾಕಯು ನನ್ನಲ್ಲಿ ಅಂಕುರಿಸಿ ವೃದ್ಧಿಯಾಗತ್ತಾ ಬಂದಿದ್ದರಿಂದ ಬರುವ ಎಪ್ರಿಲ್ ತಾರೀಕು 25ರಲ್ಲು ಜರಗುವ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗೆ ಈ ನಾಡಿನ ಪರ ನಾನೊಬ್ಬ ಉಮೇದ್ವಾರನಾಗಿರುತ್ತೇನೆ. ಇದನ್ನು ತಮಗಳಲ್ಲಿ ಈ ಮೊದಲೆ ಹಸ್ತ ಪತ್ರದ ಮೂಲಕವೂ ಸ್ವತಹ ಕಂಡೂ ಪ್ರಸ್ತಾಪಿಸಿಕೊಂಡಿರುತ್ತೇನೆ. ಸಾಧ್ಯವಾದ ಮಟ್ಟಿಗೆ ಜನಾಭಿವೃದ್ಧಿಯನ್ನು ಕುರಿತು ಸರಕಾರದಲ್ಲಿ ಹೋರಾಡಲು ಬದ್ಧ ಕಂಕಣನಾಗಿರುತ್ತೇನೆ ತಮಗೆ ಹಕ್ಕಾಗಿರುವ ಸ್ವಾತಂತ್ರದ ಓಟನ್ನು ಮೇಲ್ಕಂಡ ತಾರೀಕು 25—1—30ರಲ್ಲು ಸದುಪಯೋಗಪಡಿಸಿ ನನ್ನ ಮೇಲಿನ ತಪ್ಪಲ್ಕೆ ಕಿಂಚಿತ್ ಎಡೆಕೊಡಬೇಕಾಗಿ ತಮಗಳಲ್ಲಿ ವಿನಯದಿಂದ ವಿಜ್ಞಾಪಿಸಿಕೊಳ್ಳುತ್ತೇನೆ

ಹುದಿಕೇರಿ, ತಮ್ಮ ಕೃಪಾಭಿಲಾಷಿ,
20—1—'30 ಕರಿಯಮೂಡ ನಂಜಪ್ಪ.
2—2

Mangalore Tiles.

Roofing, ridge and flooring Tiles etc will be supplied at any station in Coorg accessible to motor lorries. For rates please apply to —

Siddeeka Aboobakar,
Proprietor—Siddeek's Mannure Works,
Mercara.

ಮುಂಗಳೂರು ಹಂಚುಗಳು.

1ನೇ ಕ್ಲಾಸ್ ಮೂರು ಹುಚ್ಚು ಮತ್ತು ನೆಲಹಂಚು ನಮ್ಮಲ್ಲಿ ದೊರಕುವುದು. ಮೋಚಾರ್ ಆರಿ ಹೋಗುವ ಹೆಗೆಲ್ಲೆಲ್ಲಾ ಸಾಗಿಸಿ ತೊಡಲಾಗುವದು. ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿ.

ಸಿದ್ದೀಕ ಅಬ್ಬಬಕರ್,
24—14 ಮಡಿಕೇರಿ.

ಪೊನ್ನಂಪೇಟೆ-ಶ್ರೀಮಂಗಲ ನಾಡುಗಳ ಜಮ್ಮ ಓಟರುಗಳಲ್ಲಿ ಕೂಂಡ ಗಣಪತಿಯ ವಿಜ್ಞಾಪನೆ.

ಒರುವ ಏಪ್ರಿಲ್ ತಿಂಗಳು 25ರಲ್ಲು ನಡೆಯಲಿಕ್ಕಿರುವ ಕೌನ್ಸಿಲ್ ಚುನಾವಣೆಯಲ್ಲಿ ಮೇಲಿನ ಎರಡು ನಾಡುಗಳ ಜಮ್ಮ ಓಟರುಗಳ ಪರವಾಗಿ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರುತನಕ್ಕೆ ನಾನು ಒಬ್ಬ ಉಮೇದುವಾರನಾಗಿ ನಿಂತಿರುತ್ತೇನೆ. ನೀವುಗಳೆಲ್ಲರು ನಿಮ್ಮ ಓಟುಗಳನ್ನು ನನಗೆ ಕೊಟ್ಟು ನನ್ನನ್ನು ಜಯಶೀಲನನ್ನಾಗಿ ಮಾಡಬೇಕಾಗಿ ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ.

ಗೋಣಿಕೊಪ್ಪಲು, ತಮ್ಮ ವಿಧೇಯ,
30—3—1930 ಕೊಂಗಂಡ ಗಣಪತಿ.
3—1.

ಪ್ರಕಟಣೆ.

ಅಮ್ಮತ್ತಿ—ತಿತಿಮತಿ ಬಸ್ಸ್ ಸರ್ವಿಸು.

ಸಬ್ಬಮಣ್ಣ ಮೋಟಾರು ಸರ್ವಿಸು ಬೆಳಿಗ್ಗೆ 7—30 ಗಂಟೆಗೆ ತಿತಿಮತಿಯಿಂದ ಹೊರಟು 8—30 ಕ್ಕೆ (ಕಾವೇರಿ ಮೋಟಾರು ಸರ್ವಿಸು ಮಡಿಕೇರಿಗೆ ಹೋಗುವ ಹೊತ್ತಿಗೆ ಸರಿಯಾಗಿ) ಅಮ್ಮತ್ತಿಗೆ ಬಂದು, ಅಮ್ಮತ್ತಿಯಿಂದ 11 ಗಂಟೆಗೆ (ಅಂದರೆ ಮಡಿಕೇರಿಯಿಂದ ವೀರರಾಜಪೇಟೆಗೆ ಹೋಗುವ ಕಾವೇರಿ ಸರ್ವಿಸು, ಮೈಸೂರು ಮೋರ್ಡನ್ ಸರ್ವಿಸು, ಪೈಲಿವೇಟ್ ಲಕ್ಷ್ಮಣ ಸರ್ವಿಸು ವೀರರಾಜಪೇಟೆಗೆ ದಾಟಿದ ನಂತರ) ಹೊರಟು 12 ಗಂಟೆಗೆ ತಿತಿಮತಿಗೂ, ತಿತಿಮತಿಯಿಂದ ಪುನಃ 2½ ಗಂಟೆಗೆ ಹೊರಟು 3½ ಗಂಟೆಗೆ ಅಮ್ಮತ್ತಿಗೆ ತಲುಪಿ, ಅಮ್ಮತ್ತಿಯಿಂದ ಪುನಃ (ಮೇಲಿನ ಎರಡೂ ಬಸ್ಸುಗಳು ದಾಟಿದ ನಂತರ) 5 ಗಂಟೆಗೆ ಹೊರಟು 6 ಗಂಟೆಗೆ ತಿತಿಮತಿಗೆ ತಲುಪುವುದು.

ತಾ 15—3—'30 ಚೀಂಡಂಡ ಪೂಣಚ್ಚ,
4—2. (ಪ್ರೊಪ್ರೈಟರ್.)

ನಾಪೋಕ್ಲುನಾಡಿನ ಓಟರುಗಳಲ್ಲಿ ಬೆಟ್ಟೋಳಂಡ ಮೂಚ್ಚಯ್ಯನ ವಿನಂತಿ.

ಮಹನೀಯರೇ,

ಇದೇ ಏಪ್ರಿಲ್ ತಾ. 25 ನೇ ಶುಕ್ರವಾರ ನಡೆಯುವ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗೆ ಈ ನಾಡಿನ ಪರವಾಗಿ ನಾನೊಬ್ಬ ಉಮೇದುವಾರನಾಗಿರುತ್ತೇನೆ. ಈ ನಾಡಿನವರು ಬಹುಮತದ ಅಭಿಪ್ರಾಯಕ್ಕೆ ಅನುಸಾರವಾಗಿ ನಡಕೊಳ್ಳಲು ತಯಾರಾಗಿರುವ ನನಗೆ ನೀವುಗಳು ಆ ದಿನ ಬೆಮುವಿಟ್ಟು ನಿಮ್ಮ ಓಟನ್ನು ಕೊಟ್ಟು ನನ್ನನ್ನು ಜಯಶೀಲನನ್ನಾಗಿ ಮಾಡಿ, ಆ ಮೂಲಕ ಡಿಸ್ಟ್ರಿಕ್ಟ್ ಬೋರ್ಡಿನಲ್ಲು ದೇಶದ ಒಸರ ಹಿತ ಕ್ಕಾಗಿ ಹೋರಾಡಲು ಅವಕಾಶವನ್ನುಂಟುಮಾಡಿ ಕೊಡಬೇಕಾಗಿ ಕೋರುವೆ.

ಬಲ್ಲಮಾವಟಿ ಗ್ರಾಮ, ತಮ್ಮ ವಿಧೇಯ,
ತಾ 1—4—'30. 3—1 ಬಿ. ಹಿ. ಮೂಚ್ಚಯ್ಯ.

For Sale.

A house with seven rooms and a large compound with half an acre Coffee situated in a decent view is for sale for Rs 5000, or near offer.

Three hundred batues of wetlands with 40 acres of jungle with valuable timber for Coffee, Pepper and Orange cultivation situated near Suntikoppa by road side with 30 heads of cattle and a large tiled house is for sale for Rs. 10,000 or nearest offer.

Please apply for particulars to :—

'J.'
C/o. The Manager,
4—3 "Kodagu," Mercara.

ಪೊನ್ನಂಪೇಟೆನಾಡು ಮತ್ತು ಶ್ರೀಮಂಗಲನಾಡು ಜಮ್ಮ ಓಟರುಗಳಲ್ಲಿ ಚೆಪ್ಪುಡಿರ ಪೂವೈಯ್ಯನ ವಿನಂತಿ.

ದೇಶಾಭಿಮಾನಿಯರೇ,

ಈಗ ಬರುವ "ಕೌನ್ಸಿಲು" ಮೆಂಬರುತನಕ್ಕೆ ನನ್ನ ಮೈ ಕೈಗ್ಟ್ಟುನಾಡಿನ ಜಮ್ಮದ ಪರವಾಗಿ ನಾನು ಒಬ್ಬ ಉಮೇದ್ವಾರನಾಗಿ ನಿಂತಿರುತ್ತೇನೆ. ಮೆಂಬರರ ಚುನಾವಣೆಯು ಇದೇ ಏಪ್ರಿಲ್ ತಾ. 25ರಲ್ಲು ನಮ್ಮೆಲ್ಲರ ಓಟು ಮೂಲಕ ನಡೆಯುವುದು ಸದರಿ ಚುನಾವಣೆ ಕಾಲದಲ್ಲಿ ತನ್ನು ಸ್ವಾತಂತ್ರ್ಯ ಹಕ್ಕಾಗಿರುವ ಮೂರು ಓಟುಗಳಲ್ಲಿ ಒಂದು ಓಟನ್ನು ನನ್ನ ಹೆಸರಿಗೆ ಕೊಟ್ಟು ತಮ್ಮಂತಿರುವ ನನ್ನನ್ನು ಜಯಪ್ರದನಾಗಿ ಕೌನ್ಸಿಲಿಗೆ ಕಳುಹಿಸಿಕೊಡಬೇಕಾಗಿ ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ. ತಮ್ಮೆಲ್ಲರ ಪ್ರೀತಿಯಿಂದ ನಾನು ನನ್ನ ಹಿರಿಯರಂತೆ ಸದಾ ದೇಶ ಸೇವೆಯಲ್ಲಿ ನನ್ನ ತನು ಮನವನ್ನು ಅರ್ಪಿಸಿರುತ್ತೇನೆ.

ಪೊನ್ನಂಪೇಟೆ. ಸದಾ ಕೃಪಾಭಿಲಾಷಿ,
3—1. ಪಿ. ಯಸ್. ಪೊನ್ನಯ್ಯ.

ರೋಲ್ಡ್ ಗೋಲ್ಡ್ ಭಂಗಾರದ ಗಡಿಯಾರಗಳು.

ಪಾಕಲು ಕ್ರಯ 17—12—0. ಕೆಲವು ದಿನಗಳ ವರೆಗೆ 8—12—0.

ಈ ಗಡಿಯಾರಗಳು ಒಹು ಪ್ರಖ್ಯಾತಿಯಾದ ಫಿಡೋ ಲೀವರ್ ಮೂವೆಂಟ್ಸ್‌ಗಳಿಂದ (ಸ್ವಿಸ್ ಮೇಡ್) ತಯಾರಿಸಿದ್ದು ಇವು ಏರಾರು ಗಂಟೆಯನ್ನು ತೋರಿಸುವುದಲ್ಲದೆ ಒಳಗಡೆ ಕಂಪು ಇಟ್ಟಿರುವುದು. ಇದರ ಕೇಸು ಭಂಗಾರಕ್ಕೆ ಸರಿಯಾಗಿದೆ. ಇದಕ್ಕೆ 5 ವರ್ಷ ಖಾತ್ರಿಯಿಪಡಿ ಗ್ಯಾರಂಟಿ ಕೊಡುವೆವು. 1 ಕೈಯಲ್ಲಿ ಕಟ್ಟುವ ರಿಸ್ಟ್ ವಾಚ್, 1 ಪಾಕಟ್ ವಾಚ್ ಮತ್ತು 1 ಟೇಬಲ್ ಕ್ಲೈಂಕ್ಸು ಈ 3 ನೇರಿ ರೂ 8—12—0. ಮಾತ್ರ. ಈ ಕ್ರಯವು ಕೆಲವು ದಿನಗಳ ವರೆಗೆ ಮಾತ್ರ. ನಂತರ ಸಿಕ್ಕೆಆರದು ರಿಸ್ಟ್ ವಾಚ್ ಮತ್ತು ಕ್ಲೈಂಕ್ಸು ರೂ. 5—8—0; ರಿಸ್ಟ್ ವಾಚ್ ಮತ್ತು ಪಾಕೇಟ್ ವಾಚ್ ರೂ. 7—0—0.



ವಿಳಾಸ:—ಕೆ. ಎನ್. ದೆನ್‌ಸನ್ ಅಂಡ್ ಕೊ.
52—37 ಪೆ. ನಂ. 1246 ಮದ್ರಾಸ್.

ವರ್ತಮಾನ ಸಂಗ್ರಹ.

ಒಳದೇಶ.

ಗೋಣಿಕೊಪ್ಪಲಲ್ಲಿ ಒಬ್ಬನಿಗೆ ಪ್ಲೇಗು ರೋಗವು ಅಂಟಿದೆಯೆಂದು ಸುದ್ದಿ.

ಜೀಫ್ ಕಮಿಶನರವರು ನಿನ್ನೆ ದಿನ ಬೆಂಗಳೂರಿನಿಂದ ಮಡಿಕೇರಿಗೆ ಬಂದಿರುವರು.

ಈ ವಾರ ಕೊಡಗಿನ ಎಲ್ಲಾ ಕಡೆಗಳಲ್ಲೂ ಮಳೆಯು ಜೋರ್ನಾಗಿ ಬಿದ್ದಿದೆಯೆಂದು ವರ್ತಮಾನ.

ಹೊರಮಲೆನಾಡಿನ ಭದ್ರಕಾಳಿ ದೇವರ ದೊಡ್ಡ ಹಬ್ಬವು ಈ ತಾ. 9 ರಿಂದ 11 ರ ವರೆಗೆ ನಡೆಯುವುದು.

ಮಡಿಕೇರಿ ಸೆಂಟ್ರಲ್ ಪೈಸ್ಕೂಲು ಬೇಸಿಗೆ ಕಾಲದ ರಜೆ ಗಾಗಿ ಈ ತಾ. 5ರಿಂದ ಮೇ ತಾ. 19ರ ವರೆಗೆ ಮುಚ್ಚಲ್ಪಟ್ಟಿದೆ.

ಕಳೆದ ತಾ. 30ನೇ ಆದಿತ್ಯವಾರ ಪೊನ್ನಂಪೇಟೆ ಕುತಾಲ ಪುರದಲ್ಲಿ ಎಂದಿನಂತೆ ರಾಷ್ಟ್ರೀಯ ಧ್ವಜಾರೋಹಣವು ನಡೆಯಿತು.

ಮೂರ್ನಾಡು ಆಸ್ಪತ್ರೆಯು ನಿನ್ನೆ ದಿನ್ನಬೆಳಿಗ್ಗೆ 10½ಗಂಟೆಗೆ ಕಮಿಷನರಾದ ಮೆ. ಪ್ರೀಸ್ಟ್ಲಿಯವರಿಂದ ಉದ್ಘಾಟಿಸಲ್ಪಟ್ಟಿತು.

ಪೊಳೆಬೆಲ್ಲ ವ್ಯಾಂಕ್ಯದ ಕೈಮಬೆಲ್ಲ ತಾಫ ತೋಟದ ಲ್ಲಿದ್ದ ದನಗಳ ಡೊಡ್ಡಿಯನ್ನು ಈ ಏಪ್ರಿಲ್ ತಾ. 1ರಿಂದ ಮುಚ್ಚಲು ಹು.ಕಂ ಆಗಿದೆ

ಕಳೆದ ಫೆಬ್ರವರಿ ತಿಂಗಳಲ್ಲಿ ಕೊಡಗಿನಲ್ಲಿ 310 ಜನರಿಗೆ ಕೂ, 274 ಮೊಣಗಳೂ ಸಂಭವಿಸಿವೆಯೆಂದು ಸಿವಿಲ್ ಸರ್ಜನರು ಪ್ರಕಟಿಸಿರುವರು.

ಕೊಡಗು ಫಾರೆಸ್ಟ್ ಇಲಾಖೆಯ ಸ್ಪೋರ್ಟ್ಸ್ ಕ್ಲಬ್ಬಿನ ವಾರ್ಷಿಕ ಸ್ಪೋರ್ಟ್ಸ್ ಈ ತಾ. 5ನೇ ಶನಿವಾರ ಮಡಿಕೇರಿ ರಾಜಾಸೀಟಿನಲ್ಲಿ ನಡೆಯುವುದು.

ಈ ತಾ 18ರಿಲ್ಲಿ ಪತ್ರಾರಂಭವಾಗುವ 'ಆಸ್ಪರ್' ರಜೆಗಾಗಿ ಜೊಕೆಯಲ್ಲಿಯೇ ಕೊಡಗಿನ ಸಿವಿಲ್ ಕೋರ್ಟುಗಳಿಗೆ ಬೇಸಿಗೆ ಯ ರಜೆಯು ಸುರುವಾಗುವದೆಂದು ಸುದ್ದಿ ಇದೆ.

ಸುರ್ ಜಡ್ಜರಾದ ಮೆ. ಪಿ ಬಿ. ಮೇದಪ್ಪನವರಿಗೂ, ದಕ್ಷಿಣ ಕೊಡಗು ತಾಲೋಕಿನ ಸುಬೇದಾರಾದ ಪಿ. ಬಿ. ಚಿಣಪ್ಪನವರಿಗೂ ಫಸ್ಟ್ ಕ್ಲಾಸ್ ಮೇಜಿಸ್ಟ್ರೇಟರ ಅಧಿಕಾರ ಕೊಡಲಾಗಿದೆ

ಜಮಾಬಂದಿಯ ಸಂಭದ ಪ್ರಚಾರ ಕಾರ್ಯದ ಬಗ್ಗೆ ಈ ತಾ. 6ರಲ್ಲಿ ಗೋಣಿಕೊಪ್ಪಲಲ್ಲೂ, ತಾ. 7ರಲ್ಲಿ ಹುದಿಕೇರಿಯಲ್ಲೂ ಮತ್ತು ತಾ. 8ರಲ್ಲಿ ಶ್ರೀಮಂಗಲದಲ್ಲೂ ನಿಯಿಟಿಂಗುಗಳು ನಡೆಸಲ್ಪಡುವವೆಂದು ತಿಳಿಯುತ್ತೇವೆ.

ಮೂಯಮುಡಿ ಗ್ರಾಮದ ಮೆ. ಚೆಂಬಿರ ತಿಮ್ಮಯ್ಯನವರು ಕಳೆದ ತಾ. 28ರಲ್ಲಿ ಯೂ, ಮಡಿಕೇರಿ ರೆವಿನ್ಯು ಆಫೀಸಿನ ಮೆ. ನೆರವಂಡ ಸಂಪನ್ನವರು ತಾ. 29ರ ರಾತ್ರಿಯಲ್ಲಿಯೂ ತಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ

ನೋಟಿಫೈಡ್ ವಿಭಾಗದೊಳಗೆ ಮೂಸವನ್ನು ಪೂರಲು ಅಪೇಕ್ಷಿಸುವ ಸ್ಥಿತಿಯೊಬ್ಬನು ತಾನುಕೊಡಬೇಕಾದ ಉಸ್ತೋಗ ಕಂದಾಯವಲ್ಲದೆ ವರ್ಷ ಒಂದಕ್ಕೆ ಒಂದು ರೂಪಾಯಿ ಫೀಸು ಕೊಟ್ಟು ಪೈಸಿಂಟರಿಂದ ಲೈಸೆನ್ಸನ್ನು ಪಡಕೊಳ್ಳತಕ್ಕದ್ದೆಂದು ಕಮಿಷನರ ಪ್ರಕಟಿಸಿರುವರು

ಕಕ್ಕಬೆ ಸ್ಕೂಲಿನ ಹೊಸ ಕಟ್ಟಡಕ್ಕಾಗಿ ಚಂದಾಕೊಟ್ಟಿರುವ ಮೆ ಕುಯ್ಯಮುಡಿ ಪೊಣ್ಣಪ್ಪಯ್ಯನವರ ಅಕಾಲಮರಣಕ್ಕೆ ಸದರಿ ಸ್ಕೂಲು ಕಾಪೊಸೇಶನ್ ಸಂಭದವರು ತಾ 21—3—30 ರಲ್ಲಿ ನಡೆದ ವಿಷಟಿಂಗಿನಲ್ಲಿ ವ್ಯಸನವನ್ನು ಸೂಚಿಸಿ, ಸದರಿ ಸಂಗತಿಯನ್ನು ಅವರ ಕುಟುಂಬಕ್ಕೆ ತಿಳಿಸಲು ತೀರ್ಮಾನಿಸಿದರೆಂದು ಆದರ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಇನ್ನು ಮುಂದೆ ಸಂವಾಜೆ, ಪೆರಾಜೆ, ರಬ್ಬಡಕ ಮತ್ತು ಜೆಂಬು ಗ್ರಾಮಗಳ ಬ್ರೀಚ್ ಆಫ್ ಕಂಟ್ರಾಕ್ಟು ಕೇಸುಗಳನ್ನು ಮಡಿಕೇರಿನಾಡು ವಾರುಪಕ್ಕಗಾರ ಮೇಜಿಸ್ಟ್ರೇಟರ ಕೋರ್ಟಿಗೂ, ಬಾಕಿ ಎಲ್ಲಾ 2ನೇ ಸುತ್ತು 3ನೇ ಕ್ಲಾಸು ಕೇಸುಗಳನ್ನು ಮಡಿಕೇರಿ ಸಬ್ ಮೇಜಿಸ್ಟ್ರೇಟರ ಕೋರ್ಟಿಗೂ ದಾಖಲು ಮಾಡ ಬೇಕೆಂದು ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟಿದೆ.

ಕೊಡಗು ಎತ್ತಿಟಿಕ್ ಎಸೋಸಿಯೇಶನಿನ ಆಶ್ರಯದಲ್ಲಿ ಮಡಿಕೇರಿಯಲ್ಲಿ ಈ ವಾರ ನಡೆದ ಕ್ರಿಕೆಟು ಟೂರ್ನಮೆಂಟಿನಲ್ಲಿ ಮಡಿಕೇರಿ ಕ್ರಿಕೆಟು ಟೀಮಿನವರು ಕಾಸ್ಮೋಪಾಲಿಟನ್ ಟೀಮಿನವರನ್ನು ಸೋಲಿಸಿದರು. ಆಬೈರು ಆಟವು ಟೀಚರ್ಸ್ ಟೀಮಿನವರಿಗೂ, ಮಡಿಕೇರಿ ಕ್ರಿಕೆಟು ಟೀಮಿನವರಿಗೂ ಈ ತಾ. 6 ನುತ್ತು 7ರಲ್ಲಿ ಆಗುವುದೆಂದು ತಿಳಿಯುತ್ತೇವೆ.

ಪಬ್ಲಿಕ್ ಕ್ಯಾಸ್ ಸೆಂಪದನರ ಆಶ್ರಯದಲ್ಲಿ ಶಿಶು ಪ್ರದರ್ಶನವು ಈ ತಾ. 10 ನೇ ತಾ. 11 ರಲ್ಲಿ ಮಡಿಕೇರಿ ರಾಜಾಸೀಟ್ ಒಳ ನಡೆಯುವುದು. ಆರೋಗ್ಯ ಸ್ಪರ್ಧಿಸುವ ಕಮಿಷನರವರಿಂದಲೂ, ಶಿಶು ಸ್ಪರ್ಧಿಸುವ ಕಮಿಷನರರ ಪತ್ನಿಯ ವರಿಂದಲೂ ತೆಗೆಸಲ್ಪಡಿ ವುದಲ್ಲದೆ ಚೀಫ್ ಕಮಿಷನರವರ ಪತ್ನಿಯವರಿಂದ ಬಹುಮಾನಗಳು ಹುಚಲ್ಪಡುವವೆಂದು ತಿಳಿಯುತ್ತೇವೆ.

ಮಡಿಕೇರಿ—ಭಾಗಮಂಡಲ—ರಸ್ತೆಯ 10/4 ಮೈಲಿನ ಬಳಿ ಇರುವ ಕೊಟ್ಟೂರು ಸೇತುವೆಯು ರಿಪೇರಿಯ ಬಗ್ಗೆ ಈ ತಾ. 4ರಿಂದ ಹಿಂದು ತಿಂಗಳ ವರೆಗೆ ಎಲ್ಲಾ ವೈವಾಟುಗಳಿಗೆ ಮುಚ್ಚಲ್ಪಡುವುದು; ಆದರೂ ಹಗಲು ಕೆಲಸ ಮುಗಿದ ಮೇಲೆ ಸಾಮಾನ್ಯಕಾಲ 6 ಗಂಟೆಯಿಂದ ಬೆಳಿಗ್ಗೆ 7 ಗಂಟೆ ವರೆಗೆ (ಇದೇ ರಾತ್ರಿ) ವೈವಾಟಿಕ್ಕೆ ತೆರೆಯಲ್ಪಡುವುದೆಂದು ಎಗ್ಸಿಕ್ಯುಟಿವ್ ಇಂಜಿನಿಯರವರು ತಿಳಿಸಿರುತ್ತಾರೆ.

ಕಳೆದ ತಿಂಗಳಲ್ಲಿ ಕೊಡಗು ಎತ್ತಿಟಿಕ್ ಎಸೋಸಿಯೇಶನ ನ ೫ಕ್ಯದಲ್ಲಿ ಮಡಿಕೇರಿಯಲ್ಲಿ ನಡೆದ ಟೆನ್ನಿಸ್ ಟೂರ್ನಮೆಂಟಿನ 'ಸಿಂಗಲ್ಸ್ ಹ್ಯಾಂಡಿಕ್ಯಾಪ್' ಬಟ್ಟನ್ನು ಮೆ. ಕೊಡಂದೆರ ಮೊದಪ್ಪನವರು ಅವರ ಪತ್ನಿಯವರ ಜತ್ತಾಪಕರ್ಷವಾಗಿ ಕೆಂಟ್ಟದೆಂತಲೂ, 'ಸಿಂಗಲ್ಸ್' ಸಂಧದಾಟದಲ್ಲಿ ಗೆದ್ದ ವರಿಗೆ ಮೆ. ಎ ಬಿ. ಸೂದಪ್ಪನವರು ಒಂದು ಸಾಮಯಂ ಬಟ್ಟನ್ನು ಕೊಟ್ಟಿದೆಂತಲೂ ಆದರ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಇಂಟರ್‌ಮೀಡಿಯೇಟ್ ಯೂ ಹೆಚ್ಚಿನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಕೊಡಗಿನ ಯುವತಿಯೊಬ್ಬಳಿಗೆ ಮಿಲ್ಲಿಯಲ್ಲಿರುವ ಲೇಡಿ ಲಾರ್ಡ್ ಹಾರ್ಡಿಂಜ್ ಮೆಡಿಕಲ್ ಕಾಲೇಜಿನಲ್ಲಿ ಸೀಟಿನ ವ್ಯವಸ್ಥೆಯಾಗಿದೆಯೆಂದೂ, ಇದಕ್ಕಾಗಿ ಆರ್ಡರ್ಗಳು ಈ ತಾ 30ನೇ ಗೆ ಕಳುಹಿಸಲ್ಪಡಬೇಕಿತ್ತೆಂತಲೂ ಶಾಶಾ ಇನ್ಸ್‌ಪೆಕ್ಟರಾದ ಮೆ. ಯಪ್ಪ, ಎಡ್‌ಮಿಂಪ್ಟರವರು ಗಜಟಿಪಿಸಿ ಪ್ರಕಟಿಸಿರುವರು

ಶ್ರೀರಾಮಕೃಷ್ಣ ಪರಮ ಹಂಸರವರ ಮತ್ತು ಶ್ರೀ ಸ್ವಾಮಿ ವಿವೇಕಾನಂದರವರ ಜನ್ಮೋತ್ಸವಗಳು ಈ ತಾ. 19 ನೇ ಶನಿವಾರ ಪೊನ್ನಂಪೇಟೆ ಶ್ರೀ ಶಾರದಾಶ್ರಮದಲ್ಲಿ ವೈ ಸೂರು ಶಿಕ್ಷಣ ಶಾಖಾಧಿಕಾರಿಗಳಾದ ಮೆ. ಎನ್ ಜಿ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನಡೆಯುವುದೆಂದೂ, ಆ ಸಮಯದಲ್ಲಿ ಬೆಂಗಳೂರು ದೇಶೀಯ ವಿದ್ಯಾ ಶಾಲೆಯ ವೆ.. ಕೋ ಲಾರ ಸೆಂಪದ್ಗಿರಿ ರಾಯರು ಸ್ವಾಮಿ ವಿವೇಕಾನಂದರನ್ನು 'ಸಂಸ್ಕೃತ' ಪತ್ರಿಕೆಯ ಸಂಪಾದಕಿಯಕಾದ ಶ್ರೀಮತಿ ಆರ್. ಕಲ್ಯಾಣಮ್ಮನವರು ಶ್ರೀ. ಶಾರದಾ ದೇವಿಯವರನ್ನೂ ಕುರಿತು ಉಪನ್ಯಾಸ ಮಾಡುವರೆಂದೂ, ಕಳೆದ ವರ್ಷದಂತೆ ಹಗಲು ಪೂಜೆ, ವಾಹನ, ಭಜನೆ, ಪ್ರಸಾದ ವಿನಿಯೋಗ ಮತ್ತು ಉನ್ನತ್ಯಾನಗಳೂ, ಕಾತ್ರಿ ಮೆರವಣಿಗೆ, ಜಲಸ ಚಿತ್ರ ಪ್ರದರ್ಶನೋಪನ್ಯಾಸ, ಭಾಕಥಿ ಪರಸ ಮತ್ತು ಹರಿಕಥಾ ಪ್ರಸಂಗವೂ ನಡೆಯುವುದೆಂದೂ ತಿಳಿಯಬರುತ್ತದೆ.

ಡಿಸ್ಟ್ರಿಕ್ಟ್ ಬೋರ್ಡು ಮತ್ತು ಕಾನ್ಸಿಲು ಜುಮಾನೆಗಳ ಅಮೀದುವಾರರ ಆರ್ಡರ್ಗಳ ಅಜಮಾಯಿಸಿಕೆಯು ತಾ. 28-3—'30ನ್ನು ನಡೆದಾಗ್ಯೆ ಸುಂಟಿಕೊಪ್ಪನಾಡಿನ ಪರವಾಗಿ ಡಿಸ್ಟ್ರಿಕ್ಟ್ ಬೋರ್ಡಿಗೆ ಅಮೀದ್ವಾರರಾಗಿ ನಿಂತಿದ್ದ ಮೆ. ಮನೆಯಪಂಡ ಬೆಳ್ಯಪ್ಪನವರೂ, ನಂಜರಾಯಪಟ್ಟಣ ತಾಲೋಕಿನ ಸಾಗಿನವರ ಪರವಾಗಿ ಕೌನ್ಸಿಲಿಗೆ ಅಮೀದ್ವಾರರಾಗಿದ್ದ ಮೆ. ಡಿ. ನಾರಾಯಣ ಕೆಟ್ಟಿಯವರೂ, ಮಡಿಕೇರಿ ತಾಲೋಕಿನ ಜಮ್ಮಗಾರರ ಪರವಾಗಿ ಕೌನ್ಸಿಲಿಗೆ ಅಮೀದ್ವಾರರಾಗಿದ್ದ ಮೆ. ವಿ. ಸಿ. ಸುಬ್ಬಯ್ಯನವರೂ ತನ್ನ ಅಬ್ಜೆಕ್ಷನುಗಳನ್ನು ವಾಪಸು ತೆಗೆದುಕೊಂಡಿರುವರು.. ಆವತ್ತಿನ ಡಿಸ್ಟ್ರಿಕ್ಟ್ ಬೋರ್ಡಿಗೆ ಸೊಂಟಿಕೊಪ್ಪ ನಾಡಿನ ಪರವಾಗಿ ಸೆ. ಕೊಗೆ ಟ್ಟಿರ ಅಪ್ಪಯ್ಯನವರೂ, ಕೌನ್ಸಿಲಿಗೆ ನಂಜರಾಯಪಟ್ಟ ತಾಲೋಕಿನ ಸಾಗಿನವರ ಪರವಾಗಿ ಮೆ. ಹುಡ್ಲಿ ಟೆನ್ನಮಲ್ಲ ವೈಸರೂ ಎಮೀದಾಳಿಗಳಿಲ್ಲದ್ದರಿಂದ ಓಟು ತೆಗೆದುಕೊಳ್ಳದೆ ಜಾನಾಯಿಸಲ್ಪಡುವರು.

ಹಿಂದೂದೇಶ.

ಬ್ರಿಟಿಷ್ಸಿನ ಅ್ಯಾಂಕಶಪುರಿನ ಹತ್ತಿ ಬಟ್ಟೆಗೆ ರಿಬೇಯಿತಿ ಕೊಡುವ ಮತ್ತು ಹಿಂದೂದೇಶದ ಹತ್ತಿ ಸ್ಪಿನೇರಿ ಕೈಗಾರಿಕೆಯ ಅಭಿವೃದ್ಧಿಗೆ ಕುಂದಕ ತರುವ ಹತ್ತಿ ಟ್ಯಾರಿಫ್ ಬಿಲ್ಲ್' ಎನಿಪ್ಪಿಯಲ್ಲಿ ವಾಸಾಮರುವಂದ ಮೊದಾಸಿನ ಮೆ. ಬಿ ಸ್ಯ ಕಾರಾರನು ಕಮ್ಮಿ ಎನಿಪಬ್ಬಿ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿರುವರು. ಸೇಕನ್ಡ್ ಪಾರ್ಟಿಯು ಮುಂದಾಳಿಕವ ಪಂಡಿತ ತುದನ ಮೋಹನ ಮೂವೀಯವರನ್ನೂ, ಅವೇ ಪಾರ್ಟಿಯ 12 ಮೆಂಬರುಗಳೂ ರಾಜಿನಾಮೆ ಕೊಡಲಿಕ್ಕಿರುವರಂತೆ.

ಮಹಾತ್ಮ ಗಾಂಧಿಯವರ ಸತ್ಯಾಗ್ರಹ ಪ್ರಯೋಗವು ಅಸಾಧ್ಯವಾಗುತ್ತಾ ಬರಿನಿ ಅವರು ನಾಳೆ ದಿನ ಜಲಲ ಪ್ರಾರಂಭಿಕ ಕಲಲಿಕ್ಕಿರುವರು. ತಾ. 6ರಲ್ಲಿ ಆಲ್ಲಿ ಸಮುದ್ರದ ನೀರು ನಿಂದ ಪಾಕಾನಿಗೆ ವಿರೋಧವಾಗಿ ಉಪ್ಪು ಮಾಡಲು ಪತ್ಯಮಿಸುವರು. ಅನಂತ್ಸ್ಥ ಆ ದಿನ ಸೆರೆಹಾವರೆ ಹುಬಾನೇತಿದ ಹಲವು ಕಡೆಗಳಲ್ಲಿ ತಮೋಕಾರಿಗರುವ ಸ್ವಯಂಸೇವಕರು ಉಪ್ಪು ಮಾಡಲು ಸ್ಯಾರಂಭಿಸುವರು. ಇಲ್ಲಾವಾದರೆ ಮಹಾತ್ಮರ ಹುಕುಮನ್ನು ಕಾಮಯತ್ಕಿರುವರು. ಮಹಾತ್ಮರಿಗೆ ಗ್ರಾಮಸ್ಥರು ತೋರಿಸಿದ ಉತ್ಸಾಹವನ್ನು ವರ್ಣಿಸಲು ಸಾಧ್ಯವಿಲ್ಲ. ಧನ ಸಹಾಯ ಮಾತ್ರವಲ್ಲ ಜನ ಸಹಾಯವನ್ನೂ ಕೊಡುತ್ತಿರುವರು. ಈಗಾಗಲೆ 169 ಗ್ರಾಮ ಉದ್ಯೋಗಿಗಳು ರಾಜಿನಾಮೆಕೊಟ್ಟಿರುವರು ಸೂರತ್ ಪಟ್ಟಣದಲ್ಲಿ ಅವರ ಭಾಷಣ ಕೇಳಲು ಸುಮಾರು 50 ಸಾವಿರ ಜನರು ನೆರೆದಿದ್ದರು; ಮತ್ತು ಅಲ್ಲಿ 25,000 ರೂಪಾಯಿ ಜಮೆಯಾಯಿತು. ಮಹಾತ್ಮರು ನಂತೇ ಒಪ್ಪಿಯನ್ನು ಸಂಪೂರ್ಣಾ ಬಹಿಷ್ಕರಿಸಬೇಕೆಂದು ಮತಗಾರುವಂತೆ ಆಪ್ಪೀಲು ಮಾಡುತ್ತಿರುವರು. 'ಸ್ವರಾಜ್ಯ ಇಲ್ಲವೇ ಸಾವು ಎಂಬುದೇ ಮಹಾತ್ಮರ ಈಗಿನ ಸಂದೇಶವಾಗಿದೆ. ಬೊಂಬಾಯಿಯಲ್ಲಿ ಸತ್ಯಾಗ್ರಹವು ಮೆ. ನಾರಿಮನ್ ರವರ ಮುಂದಾಳುತನದಲ್ಲಿ ನಡೆಯುವುದು. ಉತ್ಕರ ಮಲಬಾರಿನವರು ಹೊಸರುರ್ಗದ ಸಮೀಪ ಉಪ್ಪು ಮಾಡಲು ತಯಾರಿ ಸುತ್ತಿರುವರು. ಹಲವು ಕಡೆಗಳಲ್ಲಿ ಸ್ತ್ರೀಯರೂ ಸತ್ಯಾಗ್ರಹ ನಡಿಸಲು ಸ್ವಯಂಸೇವಕರಾಗಿ ಮುಂದೆ ಬರುತ್ತಿದ್ದಾರೆ.

ಯೆಡೆನಾಲ್ಕನಾಡು=ಬೆಪ್ಪುನಾಡು ಓಟರುಗಳಲ್ಲಿ ವಿನಂತಿ.

ಮಹನೀಯರೇ,

ಬರುವ ಏಪ್ರಿಲ್ ತಾ. 25 ರಲ್ಲಿ ನಡೆಯಲಿಕ್ಕಿರುವ ಡಿಸ್ಟ್ರಿಕ್ಟ್ ಬೋರ್ಡಿನ ಜುನಾವಣೆಗೆ ನೀಲಿನ ನಾಡುಗಳ ಪರವಾಗಿ ನಾನೊಬ್ಬ ಉಸೇದುವಾರನಾಗಿ ನಿಂತಿದ್ದೇನೆ. ಕೊಡಗಿನ ರಾಜಕೀಯ ವಿಚಾರದಲ್ಲಿ ಕೊಡಗಿನವರೆಲ್ಲರೂ ಒಗ್ಗಟ್ಟಾಗಿ ಪರ್ತಿಸಬೇಕೆಂಬ ಜವಾಬ್ದಾರಿ ಸೂಧದ ಕತ್ತವ್ಯನ್ನನುಸರಿಸಿ ನಡಿಸುವವನಾಗಿದ್ದೇನೆ. ಡಿಸ್ಟ್ರಿಕ್ಟ್ ಬೋರ್ಡಿನ ಮೂಲಕ ದೇಶ ಸೇವೆ ಅಂದರೆ ನಿಮ್ಮೆಲ್ಲರ ಸೇವೆ ಮಾಡಲು ಉತ್ಸಾಹಭರಿತ ಯುವಕನಾದ ನನಗೆ ನಿಮ್ಮೆಲ್ಲರ ಓಟುಗಳನ್ನು ಕೊಟ್ಟು ನಾನು ಜಯಿಸುವಂತೆ ಮಾಡಬೇಕಾಗಿ ಕೋರುತ್ತೇನೆ.

ಕುಂಜಿಲಗೇರಿ ಗ್ರಾಮ, ತಮ್ಮ ಸೇವಕ,
ತಾ ೪—೩—'೩೦ ಮುಕ್ಕಾಟಿರ ಕರುಂಬಯ್ಯ.
ಸಂ 4—1

WANTED.

A head clerk on Rs. 50—/2—75. Candidates should at least have passed the S. S L. C. or the Matriculation examination and the account test Apply to the undersigned with testimonials not later than 1—5—1930.

P C. Uthaiya
Head Master.
2—1 Govt. High School, Virajpet

ಮಡಿಕೇರಿನಾಡಿನ ಜನ್ಮ ಮತ್ತು ಸಾಗುವಳಿ ಓಟರುಗಳಲ್ಲಿ,

ಆಲಿಯ ಐಚೆಟ್ಟಿರ ಸುಬ್ಬಯ್ಯನ ವಿನಂತಿ.

ಮಹಾಶಯರೇ,

ಇದೇ ಏಪ್ರಿಲ್ ತಾರೀಕು 25ನೇ ಶುಕ್ರವಾರ ಮಡಿಕೇರಿ ನಾಡಿನ ಪರವಾಗಿ ಕೊಡಗು ಡಿಸ್ಟ್ರಿಕ್ಟ್ ಬೋರ್ಡಿಗೆ ಒಬ್ಬ ಮೆಂಬರನ್ನು ಜುನಾವಣೆ ಮಾಡಬೇಕಾಗಿರುವುದರಿಂದ, ನಮ್ಮ ಜುನಾವಣೆಯಲ್ಲಿ ನಾನು ಹಿಂದು ಉಸೇದುವಾರನಾಗಿ ನಿಂತಿರುತ್ತೇನೆ ಡಿಸ್ಟ್ರಿಕ್ಟ್ ಬೋರ್ಡಿಗೆ ಹೆಚ್ಚಿನ ಪ್ರತಿನಿಧಿತ್ವವನ್ನು ಪಡೆಯುವುದೂ, ಬೋರ್ಡಿಗೆ ಶೈಕ್ಷಣಿಕ ವಿಷಯ ಹುಲ್ಲಾಡಿಕೆಯನ್ನು ಸಂಪೂರ್ಣವಾಗಿ ಗ್ರಾಮೋನ್ನತಿಯೆಡ್ಡಿಗೆ ವಿನಿಯೋಗಿಸುವುದೂ, ಆಸ್ಪತ್ರೆ, ವಿದ್ಯೆ, ರಸ್ತೆ, ಮತ್ತು ಇತರ ಜನಾಬಗಳಿಗೆ ಸಾಕಷ್ಟು ಹಣ ಒದಗಿಸುವುದೂ, ಇವೇ ನನ್ನ ಮುಖ್ಯ ಉದ್ದೇಶಗಳಾಗಿರುವುದು ಆದ್ದರಿಂದ ಆ ದಿನದ ನೀವು ಮಡಿಕೇರಿಗೆ ಬಂದು, ನಿಮಗಿರುವ ಅಮೂಲ್ಯವಾದ ಒಂದು ಓಟನ್ನು ನನಗೆ ಕೊಟ್ಟು, ನನ್ನನ್ನು ಜಯಶಾಲಿಯನ್ನಾಗಿ ಮಾಡಿದ್ದೇ ನೆಯೆಗೆ ಅನುಕೂಲವಾಗಿ ಮಾಡಿಕೊಡಬೇಕಾಗಿ ತಮ್ಮೆ. ಲ್ಲರನ್ನು ವಿನಯದಿಂದ ಕೇಳಿಕೊಳ್ಳುತ್ತೇನೆ

ಮಡಿಕೇರಿ, ತಮ್ಮ ಶ್ಲೇಮಚಿಂತಕ,
ತಾ. 1—4—1930. ಐಚೆಟ್ಟಿರ ಸಿ. ಸುಬ್ಬಯ್ಯ.

ಸೌಮ್ಯ ಎಮ್ಮೆಗಳು.

ಮಾರ್ಕೆಟಿಂಗ್ ಮಾಡುವ ಮುಂಚೆ ಅಭಿವೃದ್ಧಿಯಾಗಿಸಲು ಸಿದ್ಧಿಕಾರಿಗಳು ಜವಾಬ್ದಾರರಲ್ಲ. ಸಂ.

ಮಡಿಕೇರಿ—ಸುರ್ಜಾಪುರ—ವೀರಾಜಪೇಟೆ ಬಸ್ಸು ಸರ್ವಿಸು ಉಪಯೋಗಿಸಿ

ಹಲವು ವರ್ಷಗಳಿಂದ ಮಡಿಕೇರಿಯಿಂದ ಮೂರ್ನಾಡು ಗಾಗಿ ವೀರಾಜಪೇಟೆಗೆ ಕಾರಿನ ಬಸ್ಸು ಸರ್ವಿಸು ಇಂದೀ ರಾಧ್ಯದಿಂದ ಸ್ಪರ್ಧಾರ್ಥಕಾಗಿ ಆನ.ಕೂಲ ಸಾಲದೆ ಇದ್ದ ಕಾರಣವನ್ನು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ಸ್ ಸಾಹೇಬರುಗಳು ತಂತಮ್ಮ ತೆಲೆಯ ಮೇಲೆ ತೆಗೆದುಕೊಂಡು ಕಳೆದ ವರ್ಷದ ಸೆಪ್ಟೆಂಬರ ತಿಂಗಳಲ್ಲಿ ಮಡಿಕೇರಿಯಿಂದ ವೀರಾಜಪೇಟೆಗೆ ಹೋಗಿ ಮಧ್ಯಾಹ್ನದ ಮೇಲೆ ವೀರಾಜಪೇಟೆಯಿಂದ ವಾಪಸು ಮಡಿಕೇರಿಗೆ ಇರುವಂತೆ ಮತ್ತೆ ಬ್ರಿಸ್ಸನ್ನು ದೊರೆತಿರುವಂತಾಗಿಸಿ ಕಾಫೀರ ಬಸ್ಸು ಸರ್ವಿಸಿನ ಸರಿಗೆ ಬೆಳಿಗ್ಗೆ ಮಡಿಕೇರಿಯಿಂದಲೂ, ವೀರಾಜಪೇ.ಯಿಂದ ಲೂ ಒಂದು ಸರ್ವಿಸುಗಳು ಹೊರಟು, ಅವು ನಾಮಾಂತರ

4 ಗಂಟೆಗೆ ವಾಪಸು ಬರುವಂತೆ ಲೈಸೆನ್ಸು ಇದೆ. ದಿವಸಕ್ಕೆ ಒಂದೇ ಲೈನಿಗಾಗಿ ಎರಡು ಸರ್ವಿಸು ಹಿಡಿಸಲು ಲೈಸೆನ್ಸು ಪಡೆದಿರುವ ಕಾವೇರಿ ಸರ್ವಿಸಿನವರ 16 ಯ 20 ಸೀಟುಗಳ ಬಸ್ಸುಗಳು ಸರಿಯಾಗಿ ನಡೆಯುದ್ದರಿಂದ ಪ್ರಯೋಣ್ಕರಿಗೆ ತುಂಬಾ ಅನಾನುಕೂಲವಾಗುತ್ತಿದೆ ಈ ದಿನ ವೇಗ್ಯೆಯೂ, ಸಾಯಂಕಾಲವೂ 6 ಸೀಟುಗಳ ಬಸ್ಸನ್ನು ಮಾತ್ರ ಮಡಿಕೇರಿಯಿಂದ ನಡಿಸಿದ್ದರಿಂದ ನನ್ನಂಥ ಪ್ರಯೋಣ್ಕರಿಗೆ ಸ್ಥಳ ಸಿಕ್ಕದೆ ತುಂಬಾ ನಸ್ಟ ಕಷ್ಟಗಳಾದವು. ಲೈಸೆನ್ಸು ಪಡಕೊಂಡ ಸರ್ವಿಸಿನವರು ಸರಿಯಾಗಿ ಬಸ್ಸು ನಡಿಸುವಂತೆ ಅಧಿಕಾರಿಗಳು ನೋಡಿಕೊಳ್ಳುವದೆಂದು ಆಶಿಸುತ್ತೇನೆ. ಅಲ್ಲದೆ ಗಣೇಶ ಸರ್ವಿಸಿನವರಿಗೂ ಈ ಲೈನಿಗಾಗಿ ದಿವಸಕ್ಕೆ ಎರಡು ಸರ್ವಿಸು ಇಡುವಂತೆ ಅಧಿಕಾರಿಗಳು ಲೈಸೆನ್ಸು ದಯಪಾಲಿಸಿದರೆ ಪ್ರಯೋಣ್ಕರಿಗೆ ಅನಾನುಕೂಲವಾಗಲಿಕ್ಕಿಲ್ಲವೆಂದು ಭಾವಿಸುತ್ತೇನೆ. ಮತ್ತಾ ಗಣೇಶ ಸರ್ವಿಸು ವೀರಾಜಪೇಟೆಯಿಂದ ಮಧ್ಯಾಹ್ನ ನದ ಮೇಲೆ 2 ಗಂಟೆಗೆ ಹೊರಡುವಂತೆ ಮಾಡಿದ್ದರಿಂದ ಆ ಸಮಯವು ಪ್ರಯೋಣ್ಕರಿಗೆ ಬಯ ಅನಾನುಕೂಲ. ಅಲ್ಲಿಂದ ಹೊರಡುವ ಎರಡು ಸರ್ವಿಸುಗಳು ಒಂದೆ. ಗಂಟೆ ವ್ಯತ್ಯಾಸದಿಂದ ಹೊರಡುವಂತೆ ಮಾಡಿದರೆ ಪ್ರಯೋಣ್ಕರು ಅಧಿಕ ರಿಗಳಿಗೆ ಕೃತಜ್ಞರಾಗುವರು.

ಇಷ್ಟು ಮಾತ್ರವಲ್ಲ, ಕಾವೇರಿ ಸರ್ವಿಸಿನ ಡ್ರೈವರುಗಳು ಈ ಮಧ್ಯೆ ಒಂದು ದಿನ ತಮಗುಂಟಾದ ಅಶ್ಯಸ್ಥಿಯಿಂದ ಬಸ್ಸು ನಡಿಸಲು ಬಾರದೆ ಮುಷ್ಕರ ಹಿಡಿದ ಕಾರಣ ಬಸ್ಸುಗಳು ಕಾಲಕ್ಕೆ ಸರಿಯಾಗಿ ನಡೆಯದೆ ಉಂಟಾದ ಅನಾನುಕೂಲವು ಅಧಿಕಾರಿಗಳ ಗಮನಕ್ಕೆ ಒಂದಿದೆಯೋ ಏನೋ ತಿಳಿಯದು. ಹೀಗೆಲ್ಲಾ ಇರುವಾಗ್ಯೆ ಕಾಲಕ್ಕೆ ಸರಿಯಾಗಿ ಬಸ್ಸುಗಳನ್ನು ನಡಿಸುವಂಥ ಸರ್ವಿಸಿನವರಿಗೇ ಲೈಸೆನ್ಸು ಕೊಡುವಂತೆ ಡಿ. ಮೇಚಿ ಸ್ಪೈಲರು ಮನಸ್ಸು ಮಾಡಿದರೆ ಜನರಿಗೆ ತುಂಬಾ ಸಹಾಯ ಮಾಡಿದಂತಾಗುವುದು.

ತಾ. 2—4—'30 "ಮುದಿ ಪ್ರಯೋಣ್ಕ"

ಇಪ್ಪೂ ಯಾತ್ರೆಯೂ, ಜನರಲ್ಲಿ ಖಾದಿ ಹುರುಪು

ಮಾನ್ಯರೇ,

ತಾರೀಕು 27—2—30ನೇ ತಾರೀಕಿನಲ್ಲಿ ಸೋಮವಾರಾತ್ರಿಯ ದಿವಸ ಇಪ್ಪೂ ಯಾತ್ರೆಯಲ್ಲಿ ಈಗ ಹೊಸತಾಗಿ ತೆರೆದ ಖಾದಿ ಭಂಡಾರದಲ್ಲಿ ಜನರು ಬಟ್ಟೆಗೆ ಕಿತ್ತಿಕ್ರಿಯುತ್ತಿದ್ದರು ಮಧ್ಯಾಹ್ನದ ಮೇಲೆ 1 ಗಂಟೆಗೆ ಸೇವಾದಳದವರಿಂದ ರಾಷ್ಟ್ರೀಯ ಧ್ವಜವನ್ನು ಹಾರಿಸಿ, ಸ್ವಾತಂತ್ರ್ಯ ಧ್ಯೇಯವನ್ನು ಸಾರುವ ಪ್ರತಿಜ್ಞೆಯನ್ನು ಹಿಡಿದನಂತರ ಜನರು ವಿಶೇಷ ಖಾದಿಯನ್ನು ಕೊಂಡುಕೊಳ್ಳಲು ಹತ್ತಿದರು. ಸೇವಾದಳದವರು ಖಾದಿಯನ್ನು ಅಲ್ಲಲ್ಲಿ ಹೊತ್ತು ಮಾರಿದರು. ಕೇವಲ ಯಾತ್ರಿಕರಲ್ಲಿ ಪ್ರತಿಯೊಬ್ಬ ಸ್ತ್ರೀಪುರುಷರು ಒಂದೊಂದು ಟೊಪ್ಪಿಯನ್ನಾಗಲೀ, ಕೈ ವಸ್ತ್ರವನ್ನಾಗಲೀ ತೆಗೆದುಕೊಂಡರು. 300 ಟೊಪ್ಪಿಗಳ ಮೇಲೆಯೇ ಖರ್ಚಾಗಿ ಟೊಪ್ಪಿಗಳು ತೀರಿ ಹೋದವು ಕಡೆಗೆ ಜನರು ಸ್ವಯಂ ಸೇವಕರು ಧರಿಸಿದ್ದ ಟೊಪ್ಪಿಗಳನ್ನು ಕೇಳಿಕೊಂಡರು. ಪ್ರತಿಯೆಬ್ಬನು ನಾವು ಇನ್ನು ಮುಂದಕ್ಕೆ ಪರದೇಶೀ ಒಟ್ಟಿಯನ್ನು ಧರಿಸುವದಿಲ್ಲವೆಂದು ಅಂದುಕೊಳ್ಳುತ್ತಿದ್ದರು. ಪುರುಷರಿಗಿಂತ ಸ್ತ್ರೀಯರೇ ಹೆಚ್ಚು ಖಾದಿಯಲ್ಲಿ ಸ್ತ್ರೀತಿಯನ್ನೂ ಭಕ್ತಿಯನ್ನೂ ತೋರಿಸಿ ಭಾರತ ಮಾತೆಯ ನಿಜ ಪುತ್ರಿಯರಂದು ತೋರ್ಪಡಿಸುತ್ತಿದ್ದರು.

ಎಲ್ಲದಕ್ಕೂ ವಿಶೇಷ ಸಂಗತಿಯೊಂದನ್ನು ಅಲ್ಲಿಯ ಜನರು ಮಾತಾಡುತ್ತಿದ್ದದ್ದು, ಏನೆಂದರೆ—ಈ ಮೊದಲು ಇಪ್ಪೂ ಯತ್ರೆಗಾಗಿ ಬಂದಿದ್ದ ಶ್ರೀ ಮೈಸೂರು ಮಹಾರಾಜರು ಕೇವಲ ಖಾದಿಯನ್ನೇ ಧರಿಸಿದ್ದಾಗಿದೆ.

ಮೂರು ಗಂಟೆಯ ಕಾಲದಲ್ಲಿ ಇಡೀ ಇಪ್ಪೂ ಯಾತ್ರೆಯಲ್ಲಿ ಅಲ್ಲಲ್ಲಿ ಜನರ ತಲೆಯ ಮೇಲೆ ಸ್ವಾತಂತ್ರ್ಯದ ಕಿರೀಟಗಳು (ಖಾದಿ ಟೊಪ್ಪಿಗಳು) ಎತ್ತಿ ಕಾಣುತಿದ್ದವು.

ಎಲ್ಲರೂ ಈ ದಿನ ನಾವು ಈ ಯಾತ್ರೆಯಲ್ಲಿ ಪರ ದಾಸ್ಯದ ಕೊಳೆಯನ್ನು ತೊಳಯು ಸ್ವತಂತ್ರ್ಯದ ಹೂಮಾಲೆಯನ್ನು ಭಾರತ ಮಾತೆಗೆ ಹಾಕುತ್ತಿದ್ದೇವೆಂದು ಕಂಠಘೋಷವಾಗಿ ಸಾರಿದರು.

ಸರಕಾರದವರು ಕೇವಲ ಕೇಶವ ದಾಸರ ಹುಟ್ಟಿತೀರ್ತನೆಯಿಂದಲೇ ಒನರು ಹೆಚ್ಚು ಖಾದಿ ಬಟ್ಟೆಯನ್ನು ಧರಿಸುವಂತೆ ಮಾಡಿದ್ದು ಕಂಪೇರಿ ದಾಸರ ಬಾಯಿ ಮುಚ್ಚಿಸಿದರು ಆದರೆ ಇಂದು ತಿಂಗಳಂದಲೂ ಕೊಡಗಿನ ಎಲಾ ಭಾಗಗಳಲ್ಲಿಯೂ ಹರಿತೀರ್ತನೆಯನ್ನು ನೂಡಿ ಕಿಗ್ಗುಟ್ಟಿನಾಡು ತಾಲೋಕಿಗೆ ಮಾತ್ರ ಬರುವಾಗ ಅವರನ್ನು ಜಾರಿ ಮುಚ್ಚಿಸಿದ್ದು ಆ ನಾಡಿನವರಿಗೆ ಅತೀವ ಭಂಗವನ್ನುಂಟುಮಾಡಿದೆ. ಆದರೆ ಅವರ ಕೀರ್ತನೆಯನ್ನು ಆ ನಾಡಿಗೆ ಹೋಗುವಾಗ ಬಾಯಿ ಮುಚ್ಚಿಸಿದರೂ ಆ ನಾಡಿನವರು ಸರ್ಕಾರದ ನರ್ತನೆಯನ್ನು ಖಂಡಿಸುವುದ ಕ್ಕೋಸ್ಕರವೋ, ಅಥವಾ ಯಾರ ಕೀರ್ತನ ಬೋಧನೆಗಳಲ್ಲದೆ ತಾವು ತಮ್ಮಷ್ಟಕ್ಕೆ ಸ್ವಾತಂತ್ರ್ಯವನ್ನು ಸಂಪಾದಿಸಲು ಶಕ್ತರೆಂಬುದನ್ನು ತೋರಿಸುವುದಕ್ಕೋ ಎಲ್ಲರೂ ಖಾದಿ ಖಾದಿಯನ್ನು ಧರಿಸಿದರು.

ಇದರಿಂದ ಸರಕಾರದವರಾಗಲೀ ಅಧಿಕಾರಿಗಳಾಗಲೀ ತಿಳಿಯತಕ್ಕದ್ದೇನೆಂದರೆ—ಒನರು ತಾವಾಗಿ ಸ್ವಾತಂತ್ರ್ಯಕ್ಕೆ ಹೋರಾಡುವ ಕಾಲದಲ್ಲಿ ಒಬ್ಬರ ನೀರ್ತನೆಯಿಂದ ಮತ್ತೊಬ್ಬರ ಭಾಷಣದಿಂದ ಹೋರಾಡುವದೆಂಬುದನ್ನು ಮೊರೆಯ ಕೇಶವ ದಾಸರ ಬಾಯಿ ಮುಚ್ಚಿಸಿದ ಕೈ ವ್ಹೋ, 1412 ಮಾರು ಖಾದಿಗಳನ್ನು ತೆಗೆದು, ಅವರಿಗೆ ಭಾಷಣ ಸ್ವಾತಂತ್ರ್ಯವನ್ನು ಕೊಡಗಿನಲ್ಲಿ ಕೊಡುವರಾಗಿ ನಂಬಿದ್ದೇನೆ.

'ಇಪ್ಪೂ ಯಾತ್ರಿಕ'

ಕುರುಳಿ ಅಂಬಲ ವಾಚನಾಲಯದ ವಾರ್ಷಿಕೋತ್ಸವ.

ತಾರೀಕು 31—3—30 ರಲ್ಲು ಕಡಗದಾಳು ಕುರುಳಿ ಅಂಬಲ ವಾಚನಾಲಯದ ವಾರ್ಷಿಕೋತ್ಸವ ನುತ್ತು ಯೊಗಾದಿ ಮಧ್ಯಾಹ್ನದ ಮೇ ಬಿದ್ದಂಡ ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ಬಹು ವೈಭವಿಕೆಯಿಂದ ನಡೆಯಿತು. ನೂರಾರು ಮಂದಿ ಪ್ರೇಕ್ಷಕರು ನೆರೆದಿದ್ದರಲ್ಲದೆ ಮಡಿಕೇರಿ ಹೈಸ್ಕೂಲಿನ ವಿದ್ಯಾರ್ಥಿಗಳನ್ನೇಕರು ಪಾಧ್ಯ ಪಾಠದಲ್ಲಿ ಭಾಗಿಗಳಾದರು. ಆ ಬಳಿಕ ಓಟಗಳಾದನಂತರ ಇನಾಮುಗಳು ಹಂಚಲ್ಪಟ್ಟವು, ವಾಚನಾಲಯದ ವರದಿ ಓದಲ್ಪಟ್ಟಿತು. ಮೆ ಬಾಚಿರಣ್ಣಂಡ ಗಣಪತ್ಯಿಯವರು ಮತ್ತು ಮೆ. ಸಾಂಡಂಡ ಚಂಗಪ್ಪನವರು ಗ್ರಾಮೊಭಿವೃದ್ಧಿಯ ವಿಷಯ ಸಭಿಕರಿಗೆ ಮನೋಲ್ಲಾಸವಾಗುವಂತೆ ಮಾತಾಡಿದರು.

ಅಪ್ಪೆರಿಗೆ ಅಧ್ಯಕ್ಷರು ಮಾಡಿದ ಭಾಷಣದ ಸಾರಂಶವೇನೆಂದರೆ—ಆಟ ಓಟಗಳಲ್ಲಿ ಗೆದ್ದವರನ್ನು ಅಭಿನಂದಿಸಿ, ಸೋತವರು ಎದೆಗುಂದದೆ ಬರುವ ವರ್ಷ ಪ್ರಯತ್ನಿಸಬೇಕೆಂದರು. ಈ ವಾಚನಾಲಯವನ್ನು ಸ್ಥಾಪಿಸಿದವರನ್ನು ತನಗೆ ಗೊತ್ತಿದ್ದರೂ ಅವರ ಹೆಸರನ್ನು ಹೇಳುವುದಿಲ್ಲ, ಹಾಗೆ ಅವರನ್ನು ಹೊಗಳದಲ್ಲು ಬೇರೆಯವರಿಗೆ ಅಸೂಯೆ ಹುಟ್ಟಿ ವಾಚನಾಲಯಕ್ಕೆ ಪೊ"ತ್ಸಾಹ ದೊರಯದೆ ಹೋದಿತು. ವಾಚನಾಲಯದಿಂದ ಹಳ್ಳಿಗರ ಸೊನಸಿಕ ಮತ್ತು ಶಾರೀರಕ ಅಭಿವೃದ್ಧಿಯಾಗುವುದು ಕೊಡಗಿನ ಎಸ್ಟೋ ಸಂಸ್ಥೆಗಳಂತೆ ಇದು ಸೋಮೂರಿತನದಿಂದ ಅರಿ ಜೀವದಲ್ಲಿರದೆ ಆಡಿನಾಯಿ ಭದ್ರವಾಗಬೇಕು. ಗ್ರಾಮಾಂತರಗಳ ಸ್ಥಿತಿಯು ಮಲೇರಿಯ ಜ್ವರದಿಂದಲೂ, ಸೋಮೂರಿತನದಿಂದಲೂ ಹಾಳಾಗುತ್ತಿದೆ ಹುಳ್ಳಿಗಳನ್ನು ಬಿಟ್ಟು ಪಲ್ಲವಾಸಕ್ಕೆ ಹೋಗುವುದು ಸರಿಯಲ್ಲ ಮಲಗುವಾಗ ನಿಸ್ಟು ಕೈಕಾಲು, ಮುಖ (ಸೊಳ್ಳೆ) ಜೀಲಗಳನ್ನು ಉಪಯೋಗಿಸಿಕೊಂಡು ಸೊಳ್ಳೆಯ ಕಾಟವನ್ನು ನಿವಾರಿಸಿಕೊಂಡರೆ ಮಲೇರಿಯದ ಹಾವಳಿಯು ಕಡಿಮೆಯಾಗುವುದು. ಬರೇ ಆಕ್ಯಿಯ ಅನ್ನ ಮತ್ತು ಪೊಟ್ಟಿಯಿಂದ ತಕ್ಕ ನತ್ವವು ದೊರೆಯುವುದಿಲ್ಲ. ಯೂರೋಪಿಯನರಂತೆ, ಗ್ರಾಮಗಳಲ್ಲಿ ಸುಲಭವಾಗಿ ಸಿಕ್ಕುವ ಕೋಳಿಮೊಟ್ಟೆ, ಮೀನು ಮತ್ತು ಹಾಲು ಹಂಪಲುಗಳನ್ನ ತುಂಬಾ ಉಪಯೋಗಿಸಬೇಕು. ತರಕಾರಿಗಳನ್ನು ಸಾಧ್ಯವಾದಷ್ಟು ಹಸುಯಾಗಿ ತಿನ್ನುವುದು ಒಳ್ಳೇದು. ಕಿತ್ತಳೆ ಹಣ್ಣು ಉತ್ಕೃಷ್ಟವಾದ ಫಲ ಹಣವಂತರಾಗಲು ಪ್ರತಿಯೊಬ್ಬನೂ ಪ್ರಯತ್ನಿಸಬೇಕು. ತೋರದ ಆರೋಗ್ಯವನ್ನು ಜೆನ್ನಾಗಿ ನೋಡಿಕೊಳ್ಳಬೇಕು. ಈ ದೇಶದ ಗಾಳಿ ಮಣ್ಣೆರು ತೆಲಸವೆಂಡುವುದು ವರ್ಷದಲ್ಲಿ ಬಹು ಸಲ್ಪ ಕಾಲ. ಸತತ ತೆಲಸ ಮಾಡಿದರೆ ಜಡತೆನವು ಹೋಗುವುದು. ಡಿಗ್ರಿ ಪಡೆದಾತ್ನಣ ಜಿಜ್ಞಸು ಗಟ್ಟಿಗನಲ್ಲ. ಅನುಭವವಿದ್ದರೇ ಗಟ್ಟಿಗನಾಗುವುದು. ನನಗೆ ಇನ್ನೂ ಅನುಭವ ಸಾಲದು. ಗ್ರಾಮದ ಶ್ರೇಯೋಭಿವೃದ್ಧಿಯನ್ನು ಬಯಸಿ, ಮತಕನ್ನು ಮುಕ್ತಾಯಗೊಳಿಸುತ್ತೇನೆ. ನಂತರ ನೇರಿದವರಿಗೆ ತಿಂಡಿ ತೀರ್ಥಗಳು ಹಂಚಲ್ಪಟ್ಟವು.

"ಹಾಜರಿದ್ದವ"

ಕೌನ್ಸಿಲು ಜುನಾವಣೆ

ಮಾನ್ಯರೆಯರೆ,

ಬೇರೆ ಎತ್ತಾಂತ್ಯಗಳಲ್ಲಿ ಸೈಮನ್ ಕಮಿಶನ್ ರಿಪೋರ್ಟು ಪ್ರಕಟವಾಗುವ ವರೆಗೆ ಅಂದರೆ ಹೊಸ ಸುಧಾರಣೆಯ ರಿಪೋರ್ಟು ಹೊರಬೀಳುವ ವರೆಗೆ ಕೌನ್ಸಿಲ್ ಜುನಾವಣೆಯನ್ನು ನಿಲ್ಲಿಸುವಾಗ್ಯೆ ಈ ಕೊಡಗು ಕೌನ್ಸಿಲಿನ ಹೊಸ ಜುನಾವಣೆಯನ್ನು ಇದೇ ಏಪ್ರಿಲ್ 3ಂಗಳ 25ರಂದು ನಡಿಸಲು ನಿಶ್ಚಿಸಿರುವುದು ಆಶ್ಚರ್ಯಕರವಾಗಿದೆ

ಸೆಟ್ಲಲ್ (ನಾಯರ್) ಕಮಿಟಿಯ ರಿಪೋರ್ಟಿನಲ್ಲು ಕೊಡಗಿನ ಸುದ್ದಿಯೇ ಕಾಣಲಿಲ್ಲ. ಆದರಂತೆಯೇ ಹೊಸ ಕೌನ್ಸಿಲ್ ಜುನಾವಣೆಯೊಳಗೆ ಯಾವುದೊಂದು ಹೊಸ ಸುಧಾರಣೆ ಸಿಕ್ಕುವ ಸಂಭವವು ಕಾಣುವದಿಲ್ಲ. ಹೀಗಾದರೆ ನಮ್ಮ ವಿಪಾರ್ಥವಾದ ರಾಒಭಕ್ತಿಗೆ ಸರಕಾರದವರೂ, ವೈಸರಾಯು ಪ್ರಭುಗಳೂ ತಕ್ಕ ನ್ಮತಿಫಲವನ್ನು ಕೊಟ್ಟಂತೆ ಆಯಿತಲ್ಲಾ! ವಿದ್ಯೆಯಲ್ಲಯೂ, ನಾಗರೀಕತೆಯಲ್ಲಿ ಯೂ ಬೇರೆ ಪ್ರಾಂತ್ಯಗಳಿಗೆ ಬಿಗಿಲಾಗಿರುವ ನಮ್ಮ ಈ ಪುಟ್ಟ ದೇಶವನ್ನು ಕಳೆದ ರಾಜಕೀಯ ಮೂರ್ವಾಡಿನಲ್ಲಿಯೂ ಸರಕಾರದವರು ಗಣನೆಗೆ ತೆಗೆದುಕೊಳ್ಳಲಿಲ್ಲ. ವೈಸರಾಯರು ತಾವೇ ಖುದ್ದಾಗಿ ದೇಶದ ಸ್ಥಿತಗತಿಗಳನ್ನು ಅಜಮಾಯಿಸಿಯೂ ಕೂಡ ಯಾವದೊಂದು ಮೊರ್ವಾಡಿನ ಸುದ್ದಿಯೇ ಇಲ್ಲದಿರುವದು ನೋಡಿದರೆ ದೈತರ ಪಾಲು ಹವಾಲುಗಳನ್ನು ಸರಿಸರಿಯಾಗಿ ತಕ್ಕ ರೀತಿಯಿಂದ ತೀರಿಸಿದೆ ಮೂಡಭಕ್ತಿಯಿಂದಲೂ, ಅಂಜಿಕೆಯಿಂದಲೂ ಇಲ್ಲವೇ ಸ್ವಾರ್ಥತೆಯಿಂದಲೋ ಎಂಬಂತೆ ವರ್ತಿಸುವ ನಮ್ಮ ಮುಂದಾಳುಗಳನ್ನು ಎಷ್ಟು ಕೊಂಡಾಡಿದರೂ ಕೊಂಡಾಡೇ!

ಈ ಜುನ ಕೌನ್ಸಿಲಿನ ಮೇಲಿರುವ ವ್ಯೇಮವು ನಮ್ಮ ತಲೆಕೆಲವು ಮುಂದಾಳುಗಳಿಗೆ ಇನ್ನೂ ತಪ್ಪಿರುವದಿಲ್ಲ. ದೇಶಕ್ಕೆ ಕೌನ್ಸಿಲ್‌ನಿಂದ ಏನೊಂದೂ ಪ್ರಯೋಜನವಿಲ್ಲವೆಂದು ಅಷ್ಟು ಸಾಕ್ಷ್ಯಯಾಗಿ ತಮಗೆ ಈ ೦ ವರ್ಷಗಳ ಅನುಭವವಿಂದ ತಿಳಿದಿದ್ದರೂ ಅದೇ ಕೌನ್ಸಿಲಿಗೆ ಹೊಸ ಜುನಾವಣೆಯಲ್ಲು ನಾವು ಮುಂದೆ, ನಾವು ಮುಂದೆ ಎಂದು ನಿಲ್ಲಲು ಓಡಾಡುವ ಈ ಮಹಾನ್ಕಾಯರಿಗೆ ಇರುವ ಭ್ರಮೆಗೆ ಏನನ್ನ ಬೇಕೆಂದೂ ದೇಶದವರೇ ಯೋಚಿಸಬೇಕಾಗಿದೆ.

ವೈಸರಾಯ ಪ್ರಭುಗಳು ಬಂದಿದ್ದಾಗ್ಯೆ ನನ್ನು ಹಳೆ, ಹೊಸ ಕೋವಿಗಳನ್ನು ಉಜ್ಜಿ ತಳಕ ಮಳಕ ನೊಡಿಕೊಂಡು ಬಿಸಲಲ್ಲಿ ಒಣಗಿ ಬಡವಾಗಿ ಸಾಲದ್ದಕ್ಕೆ ಸುಗ್ಗಿ ಕುಣಿತ ಕುಣಿದು ತೋರಿಸಿದ ರಾಜಭಕ್ತಿಯಿಂದ ನನಗೆ ಕೊಟ್ಟ ಆ ಮಹಾ ಪ್ರಭುಗಳವರ ದಾನವೇನು ಎಂಬದನ್ನು ವಾಚಕರು ಯೋಚಿಸಬೇಕಾಗಿದೆ ಈ ಕುಣಿತ ಕುಣಿಸಿಕೊಂಡು ಈ ರಾಜ್ಯವನ್ನು ಯುಗ ಯುಗಾಂತರಕ್ಕೂ ರಕ್ಷಿಸಿ ಪಾಲಿಸಿ ಸಾಯ

ನಿಗೆ 'ಕೂರ್ಗ್' (Coorg) ಎಂದೂ ಮರಿಕೇರಿಗೆ Mercara) ಎಂದೂ ಇರುವ ಇಂಗ್ಲಿಷ್ ಹೆಸರುಗ ಳ್ಳ. ಇಂಥಾ ಇಂಗ್ಲಿಷ್ ಹೆಸರುಗಳನ್ನು ಇ ಲೆ ಇನ್ನು ಒಂದೆರಡು ತಕ್ಕೂಸನಗಳು ಕಳೆದ ನಂತರ ಕಂದ ಪೆಂಶ್ಗೆಗಳನ್ನು ಪರಿಶೋಧಿಸುವ ಚಾಣಾಕ್ಷ ವಾಗಿ ಈ ಇಂಗ್ಲಿಷ್ ಹೆಸರುಗಳನ್ನು ಕೂ ಹಾಕುವುದಕ್ಕೆ ನೋಡಬೇಕು

'ವರ್ಮ

ಹುಡುಗರ ಸಲುವಾಗಿ

ಿಂಗಂ

ಇವರ

ಾಲಾಲಯ್ಯಂ.

ವನ್ನು

ಕೊಡುವುದರಿಂದ

ತಕ್ಕರೂ, ಪುಷ್ಪರೂ ಮತ್ತು

ತೋಷ ಚಿತ್ತರೂ ಆಗುವರು.

ಿ. ಟಿ. ಜೋಂಗರೆ ಕಂಪೆನಿ,

ಗಿರಿಗಾಂವ, ಮುಂಬಯಿ.

High Bonus! Cheap Premium!! Reliable Payment!!!

THE

GREAT EASTERN LIFE ASSURANCE COMPANY LTD.

(Incorporated in Straits Settlement)

LONDON OFFICE
27, Old Jewing Lond n E C

REGISTERED HEAD OFFICE
Winchester House Singapur S S

BRANCH OFFICE
Didy House 50–52, Churchgate Street, Fort Bombay

Authorised Capital
$ 250 000

Paid up Capital
$ 142 010

Funds Exceed
Rs 1 40 00 000

Amount Assured Exceeds
Rs 3 00 0 000

Claims Paid Exceed
Rs 70 00 000

Bonus given last time is as high as Rs 30 to 36 per 1000 per year
Required able and energetic young men or retired officials to take up our agency in every village and town all over Coorg on handsome pay or liberal commission

ಕೊಡಗಿನ ಎಲ್ಲಾ ಗ್ರಾಮಗಳಲ್ಲಿಯೂ ಸಬ್ಬಗುಲ್ಲಿಯೂ ನಮ್ಮ ಏಜಿಂಟರಾಗಲು ಗಟ್ಟಿಗರಾದ ಯುವಕರು ಇನ್ನೂ ವಿಲಯವಾದ ಉದ್ಯೋಗಗಳ್ಳರು ಬೇಕಾಗಿದ್ದಾರೆ ಒಳ್ಳೇ ಸಂಬಳ ಯಾ ಹೆಚ್ಚು ಕಮಿಷನು ಕೊಡುವಂಗುರು ಹೆಚ್ಚಿನ ಮಾಹಿತಿಗೆ ಕೆಳಗಿನವರನ್ನು ಮಿದ್ದು ನೋಡಿ ಒಹ ದು

Apply for further particulars and Prospectus in person, to —

Messers. R. Wallia & Co.,
Chief Agents, G E L A & Co, Ltd.
C/o C P C & Co, Ltd office
MERCARA

4–2



ತಾರ್ಕೂ ಒಂದರೆ ಅಗಿನ
ತ್ಕಾಲಿಕಾಗು ಮೊಘವಗಿ
ಕಲುಸಿಸ್ಕುಡುವದು

ಕೋವಿಗಳೆ., ಕತ್ತಿಗಳು, ಬರ್ಚಿಗಳು, ತೋಟಗಳು, ಕೇತ್ತಗಳು, ಮದ್ದು ಗುಂಡು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ಬರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India
24–7 210 Abdul Rehman Street BOMBAY.

ಎಂ. ಎಸ್. ಶಿವಪ್ಪಾಜಿರಾವ್ ಅಂಡ್ ಸನ್ಸ್.

ಎಂಬ ಪೈಕಿನಿಯಂ ಮಾಲೀಕರಾಗಿರುವ ನಾವು

ಟಿ ಥಂಗಾರಿನಿಯ್ಯಿಂದ ಹೊಸತಾದ ಪಾತ್ರಿಯುವ
ಕೊಂಬಸೂ ಆದ ಪೌಂಟಿನ್‌ಪೆನ್‌ಗಳು.

ನಂಡರ್ ಪೌಂಟಿನ್‌ಪೆನ್ 1ಕ್ಕೆ ರೂ 3 0 0
, ವಿಗ್ ಎಕ್ಸ್‌ಟ್ರಾ ಪೆನ್ 1ಕ್ಕೆ 3 3 0
, ಸೆಲ್ಫ್ ಕ್ಲೀನರ್ ಪೆನ್ 1ಕ್ಕೆ 3 8 0
, ಎಗ್ ಬ್ಯಾರೆಲ್ ಸೆಲ್ಫ್ ಕ್ಲೀನರ್
ಸೂಪರ್ ಪೌಂಟಿನ್‌ಪೆನ್ 1ಕ್ಕೆ 5 14 0
ಪರ್ಫೆಕ್ಟ್ ಕಲರ್ ಸೆಲ್ಫ್ ಕ್ಲೀನರ್
ಪೌಂಟಿನ್‌ಪೆನ್ 1ಕ್ಕೆ 4 2 0
, ಸಿಲ್ವರ್ ಫಿಲ್ಲಿಂಗ್ ನೂತನ್ ಅಧಿಕ
ಪ್ರಭುವಸ್ ಕಲರ್ ಪೌಂಟಿನ್‌ಪೆನ್ 1ಕ್ಕೆ 5 8 0
ಟಿ ಪೌಂಟಿನ ಪೆನ್ 1ಕ್ಕೆ 10 8 0
ಪೆನ್ 1ಕ್ಕೆ 11 6 0, & 20 10 0
ಡ್ ಪೌಂಟಿನ್‌ಪೆನ್ 1ಕ್ಕೆ 3 ಗ 0, & 3 12 0
ಂಟಿನ್ ಪೆನ್ 1ಕ್ಕೆ 6 4 0, & 6 12 0
ನ್ ಪೌಂಟಿನ್ ಪೆನ್ 1ಕ್ಕೆ 8 2 0 & 8 10 0

ಟ್ರಿಂಪಿಕ್ಸ್‌ಗಳು.

ಸ್ಟ್ಯಾಂಡರ್ಡ್ ಸಿಲ್ವರ್ ಸೆಟ್ಟ್ ಟ್ರಿಂಪಿಕ್ಸ್ 1ಕ್ಕೆ 3 6 0
ಜರ್ಮನ್ ಸಿಲ್ವರ್ ಸೆಟ್ಟ್ ಟ್ರಿಂಪಿಕ್ಸ್ 1ಕ್ಕೆ 2 2 0
ಲಿಗಿಯೊ ಅಲಾಯ್ ಟ್ರಿಂಪಿಕ್ಸ್ 1ಕ್ಕೆ 6 9 0, & 6 14 0
ಲಿಗಿಯೊ ಸ್ಟ್ಯಾಂಡರ್ಡ್ ಅಲಾಯ್ ಟ್ರಿಂಪಿಕ್ಸ್ 1ಕ್ಕೆ 7 2 0
ಲಿಗಿಯೊ ಅಲಾಯ್ ಸೆಟ್ಟ್ ಟ್ರಿಂಪಿಕ್ಸ್
ಪ್ಲೇಟಿನಮ್ 1ಕ್ಕೆ 8 10 0
ಎಗಾಟೆಕ್ ಅಲಾಯ್ ಟ್ರಿಂಪಿಕ್ಸ್ 1ಕ್ಕೆ 9 6 0
ಬಿಗಾಟೆಕ್ ಎಕ್ಸ್‌ಟ್ರಾ ಇರತಕ್ಕ ಖಾತ್ರಿ
ಯಿಂದ ಟ್ರಿಂಪಿಕ್ಸ್ 1ಕ್ಕೆ 13 4 0
ಖಾತ್ರಿಯೂ ಒಂದೋಟಿನ್ನ ಆದ ಪಾಕೆಟ್
ವಾಚ್ 1ಕ್ಕೆ 5 10 0
ಡಿಟೋ ನಮೂನೆಯೆಲ್ಲಿ ಎಬ್ಬಹಾರ್ಡ್ ಕಂಪೆನಿಯ
ವಾಚ್‌ಟು ವಾಚ್ 1ಕ್ಕೆ 12 4 0
ನಿಕ್ಕಲ್ ಕೇಸ್ ಎಂಡರ್ ಮುಮೆಂಟ್ ಸಾಧಾರಣ ತರಹ
ರಿಸ್ಟ್ ವಾಚ್ 1ಕ್ಕೆ 5 4 0, 7 8 0, 10 0 0 & 12 8 0

ಜಾಹಿರಾತಿನಿಯಮಗಳು.

ಎಲ್ಲಾತ್ರಿಯೂ ಬಂದ ತಿಂಗಳ ಸಪ್ಲೆರ ಒಳಗೆ
ಅಚ್ಚಿಕ ಕಾಲದ ವರೆಗೆ ಬಾಕಿ ಬಹಳ ಇರ ಇದ್ದ
ಬಿಸ್ ಸೂಚನೆ ಬಂದ್ದು ಸಿಂಗಲ್ ಕಾಲಂ ಇಂಚ್
ಹಗಲಿಕ್ಕಾಗಿ ಮಾಸಿಕ ಚಂದಾ ಇಲ್ಲ
ಕಳುಹಿಸಿದ ಸ್ಥಳ ಬಿಲ್ಲಿಗೆ ಅಡ್ವಾನ್ಸ್ ಇರಬೇಕು
ಕ್ಕೆ ಇಲ್ಲಿ ಬಿ/–ರೂ ಕೃಷಿ ಶಾಸನಾಯಿತು ಎಬಿ/– ರೂ
ಗಳ ವರೆಗೆ ಒಳಕ್ಕ ನಮೂನೆ ಜಾಹಿರ್ಕೃತಿಯಾಗಿ ಹೆಚ್ಚಿಗಿ
ಬೈತಿಕ್ಕುವ ಅಪೇಕ್ಷೆಯುಳವರು ಅದರು ಇಪ್ಪತ್ತೈದು
ದಿವಸಲ್ಲಿ ಉತ್ತಮ ಪಾತ್ರೆನ್ನು ಕಳುಹಿಸಿ ರವಾನೆಯ
ಗುವ್ದೆ ಅಡ್ಡ ಕೊಡುವರು 5/—ರೂ ಅಡ್ವಾನ್ಸು ರ
ವಾನಿಸೇ ಕಾದನ್ನು ಅವಶ್ಯಕ
ಪಿಟ್ಟಿಲಗಳು 5/—ರಿಂ ಮಾಸಾಯಿಕ 15/ರೂ
ಗಳ ವರೆಗೆ ಸ್ವಾತಿಕೆ ಫಲಿಂಗೆ ಸಮ್ಬಂಧಪಟ್ಟ ವಿಷಯ
ದವಾರ್ತೆಗಳೂ ಮತ್ತು ಸ್ವಾತಿಕೆಯ

ಇಂತಿಯವರ್ ದಯವಿಟ್ಟು ವಿಳಾಸ.—ಎಂ ಎಸ್ ಶಿವಪ್ಪ ಅಂಡ್ ಬ್ರದರ್ಸ್,

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರ್ ಆಗಿದೆ.

	ರೂ.
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಲಗು	21,310
ಒಮ್ಮೊಬಂದ ರೇವಣಾತಿ	2,16,271

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಬೇಕಾದಷ್ಟು ಹಣವನ್ನು ಕೊಡಲಾಗುವುದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0 ರಂತೆ ದರದಲ್ಲಿ ಬಡ್ಡಿ ಕೊಡಲಾಗುವುದು. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ಕೊಡಲಾಗುವುದು.

ವರ್ಷಕ್ಕೊಂದಾವರ್ತಿ ಕೊಲ ಪರೀಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪೈಸಾರಿ ಮೆಂಟರು, ಕೆ. ಜೆ. ಜರ್
ಕೋದಂಡ ಅಯ್ಯಪ್ಪನವರು, ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್, ನವರು.
ಸೆಕ್ರೆಟರಿ
ಸಿ. ಯಸ್. ವೆಂಕಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1-2-1930

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಬಾಬತ್ತಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಆವರನ್ನು ವಿಜ್ಞಾಪಿಸಿಕೊಳ್ಳುವುದಕ್ಕಾಗಿ ನೀಡಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ವಿಜಿಟರ್ ಜಂಗಡಿಂ ಕುಟ್ಟಪ್ಪನವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಜಂಡಾದಾರರ್ಲರೂ ಲವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ತಾವತಿ ಮೂತಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು,

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಜಂಗಂಡ ಕುಟ್ಟಪ್ಪನವರು.
ಮರೆನಾಡು—ಮೆ. ಕೀಕೇರಿ ಅಯ್ಯಯ್ಯನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮೆಯ್ಯನವರು, (ಖಾದಿಭಂಡಾರ.)
ನಾಪೋಕ್ಲು—ಎಸ್. ಆರ್. ವೆಂಕಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮಾಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ ಮುದ್ದಮೆಯ್ಯನವರು,
ಮತ್ತು, ಆರಮಣಮೂಡ ಪಿ ಕಾರ್ಯಪ್ಪನವರು,
ಪುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಮೆಯ್ಯನವರು,
ಸುಂಟಿಕೊಪ್ಪ—ಮೆ ಅಪ್ಪಚಟ್ಟೀಳಂಡ ಮಾಚಯ್ಯನವರು,

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮೊರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉದ್ದೇಶಗಳಿಗೆ ಬದ್ಧವಾಗಿರುವಿಕೆ, ಪಾವ ಬಡಿದು ರಿಜಿಸ್ಟ್ರಾರ್ರವರ ಆಪೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಟ್ಟಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ಕೆಲಸ ಮತ್ತು ಆಡಮಿನಿಷ್ಟ್ರೇಷನ್ ಕೆಲಸಗಳಿಗೆ ಸಂಬಂಧಪಟ್ಟ ಫಾರಮ್ಸುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿದ್ದರ್ ಸ್ಟೋರಿನಲ್ಲಿಯೂ ಮೊರಾಟಕ್ಕಿವೆ.

ಮೇನೇಜರ್,
'ಕೊಡಗು" ಮಡಿಕೇರಿ.



12 bore Victor Cartridges Rs 10/- Per 100

Mahomedally-Noorbhoy.

ARMS & AMMUNITION MART.

321 Abdul Rahman Street.

BOMBAY. 3.

ಭರತಖಂಡದ್ದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ ಇಂಡಿಯದಲ್ಲಿ ಯೋಜಿಸಲ್ಪಟ್ಟಿದ್ದು 1874ರಲ್ಲಿ

ಅ ಭಿ ವೃ ದ್ಧಿ.

ಹೊಸ ವಿಮೆಗಳು.			ಪ್ರೀಮಿಯಂ ಆದಾಯ.		
1925.	296	ಲಕ್ಷ ರೂಪಾಯಿ.	1925.	93	ಲಕ್ಷ ರೂಪಾಯಿ
1926	391	,, ,,	1926.	106	,,
1927	468	,, ,,	1927.	122	,,
1928	585	,, ,,	1928.	140	,,

ಜನಪ್ರೀತಿಯು ಹೆಚ್ಚಿಚ್ಚು ಲಾಭವನ್ನು ಕೊಡುತ್ತದೆ.

ಜೀವಾತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1921ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ | 1927ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 25 ರೂ
1924ರಲ್ಲಿ ,, ,, ,, 22½ ,,

ಆದಕಾರಣದಿಂದ ನೀವು ಮೊದಲನೆಯ ಸಾರಿ ಏಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಹೆಚ್ಚಿನ ವಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿಗೆ ಬಂದರೆ ನಿನುಗೆ ಅದರಿಂದ ಲಾಭ ಖುಂಟಾಗುವುದು. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು—

ಓರಿಯಂಟಲ್ ಬಿಲ್ಡಿಂಗ್ಸ್, ಯಂ. ವಿ. ಮುತ್ತುಕೃಷ್ಣ ನಾಯಡು,
ಸೌತ್ ಪೇರೇಡ್, ಬೆಂಗಳೂರು. 52—13 ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.

ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳು ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಲು ಬಾಲಗ್ರಹ ದೋಷನಿವಾರಕವೆಂಬ ಮಂತ್ರ ಯಂತ್ರದ ತಾಯಿತ.

ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ, ಪ್ರತಿ ತಿಂಗಳೊಳು ಸಂಯೋಗಿ ಮುಟ್ಟಾಗುವ ಸಮಯದೊಳು ಕೈಕಾಲು ಹಿಡಿಯುವಿಕೆ ಮುಸ್ಸಪ್ಪ ಬೀಳುವಿಕೆ, ಹೊಟ್ಟೆ ಕೂಲಿ, ಬಿಳುಪು-ಕೆಂಪು ಹೋಗಿ ಗರ್ಭ ಪಕ್ವವಾಗುವಿಕೆ, ಪಾಂಡಿ, ಸೆಗರಾವ, ವಿಶಾಚಬಾಧೆಯಿಂದ ನರಳುವಿಕೆ, ದಿನ ಹುಂಬತೆ ಹಡಿಯೋಜಮೆ ದರೆ ಹಲವೆತ್ತಿಯು ವಿಕೆ, ಇವೇ ಮೊದಲಾದವುಗಳು ಸಂತಾನ ಭಂಗಕ್ಕೆ ಕಾರಣಗಳು. ಚಿಕ್ಕ ಮಕ್ಕಳಿಗೆ ೧೨ ವರ್ಷದ ವರೆಗೆ ಬಾಲಾರಿಷ್ಟ ದೋಷದಿಂದ ಆಕಸ್ಮಾತ್ ಸಂಪ್ರಯೋಗ, ಮುಟ್ಟುಜೋಷ, ಕಾಮಿಲೆ, ಗ್ರಹಪೀಡೆ, ದೃಷ್ಟಿದೋಷ, ಮುಟಕೆಬ್ಯಾಸಿ ವಿಲೇಸ ಆಳೋಣ ಹೊಟ್ಟೆಯೊಳಗಿಂದ ಏಳೋಡ, ಭಯದಿಂದ ಜ್ವರಪೀಡೆ, ಕ್ಷೀಣ ಹೊಂದುವಿಕೆ ಮೊದಲಾದವುಗಳಂದ ಕಾಡುತ್ತಿರುವಮು, ಗರ್ಭರಕ್ಕಾಕರ ವಿಧಿಯಲ್ಲಿ ಸರ್ಮಾರ ರಕ್ಕಾಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ, ಹೇಳಿದ ಪ್ರಕಾರ ವಂಡಿತರೊಡನೆ ವಿಶೇಷವಿಧಿ ಗ್ರಹ ಕಾಲದಲ್ಲಿ ಸಾಧು ಸತ್ಪುರುಷರ ಸಹಾಯದಿಂದ ಮಂತ್ರದ ಯಂತ್ರವನ್ನು ಕುಡಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಧರ್ಮಪಡಿಸಿರುತ್ತದೆ ಇದನ್ನು ತರಿಸಿ ಧರಿಸಿದರೆ ಹೆಣ್ಣು ಮಕ್ಕಳಾಗುವ ಸಂತಾನ ಭಂಗವೂ, ಚಿಕ್ಕಮಕ್ಕಳಿಗೆ ಬರುವ ಬಾಲಗ್ರಹವೂ ಯಾವತ್ತೂ ಪರಿಹಾರವಾಗುತ್ತದೆ ಹೆಣ್ಣು ಮಕ್ಕಳಿಗೆ ಸಂತಾನ ದೆಸೆಯಿಂದ ಕ್ಷ ರಷಾಯ. ಚಿಕ್ಕಮಕ್ಕಳಿಗೆ ೧೯೪ ತಿ—೮—೦ ಪೋ ಪ ಬೇರೆ ಪ್ಲೇಟಲ್ ವಾ ಜಾಗ್ರತೆ ಗುಣ ಕೊಡುವ ತಾಯಿತಕ್ಕೆ ಪೋ ಪ ಸೇರಿ ೫ ರೂ. ಆಗುತ್ತ ಪ ಕಾರಗಳನ್ನು ಸ್ಪಷ್ಟ ಬರೆಯಿರಿ ಈತಾಯಿತ ಧರಿಸಿಕೊಂಡು ಗುಣವಿಲ್ಲದವರಿಗೆ 100 ರೂ ಬಹುಮಾನ ಒಂದು ಸಲ ತರಿಸಿ ಅನುಭವ ತಕೆಯ್ಕಿರಿ

ಸ್ಥಳ ಸಂಕೋಚ ನಿಮಿತ್ತ ಮೂಲಕ ಮೂದರಿಗಾಗಿ ಬಹುಮೂಲ ಪತ್ರಿಕೆ ಒಂದೇ ಕೊಟ್ಟಿದೆ.

ನನ್ನ ಹೆಂಡತಿಯ ಶ್ರಕ್ಯತೆಯನ್ನು ತಾವೂಂಕಿತ ವೈದ್ಯ ಡಾಕ್ಟರುಗಳೂ ತೋರಿಸಲು ಗುಣವೊಂದೆವರಿಲು ತನ್ನು ಆಶ್ಚರ್ಯಕರವಾದ ತಾಯಿತವನ್ನು ಪಸ್ಸೆ ಹೆಂಡತಿಯು ಈಗಾಗ್ಲೆ ೨ ವಾರಗಳ ವರೆಗೆ ಧರಿಸಿದ ಪಶ್ಚಾತ್ ಮೈಚಿಳಿಗಿನ ಯಾವಕ್ಕೂ ಕಾಯಿಲೆಗಳು ನಾಶವಾಗಿ ಸೂರ್ಣ ಆರೋಗ್ಯ ಸ್ಥಿತಿಯಲ್ಲಿರುತ್ತಾಳೆಂಬುದನ್ನು ತಿಳಿಸಲು ಅತಿ ಸಂತೋಷವೆನಿಸುತ್ತೆ

ತಮ್ಮ ನಿ ಕೆ. ರಾಮಸ್ವಾಮಿ, ಸುದಾಮ ಆಸ್,
ಪ್ರಲ್ಹಾದ ಎಸ್ಟೇಟ್, ಮುಂಬೈ.

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,
52—37 ಮು. ಪೋ. ಆಕಳೆ, ಜಿ. ಬೆಳಗಾಂವ.

೫೦ ವರ್ಷಗಳ ಅನುಭವಸಿದ್ಧ ನುತ್ತು ಸಾವಿರಾರು ಜನರಿಂದ ಉಪಯೋಗಿ ಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ನ್ಪಷ್ಟದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ವೀರ್ಯ, ಪಿತ್ತದ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲ ಬದ್ಧತೆ, ಕೈಕಾಲು ಒಣ್ಣುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.—ಕ್ಯಾಯ ಡಬ್ಬಿ 1ಕ್ಕೆ ೭—೫—೦ ಮೂರು ಡಬ್ಬಿಗಳಿಗೆ ರೂ 7-0-0.

೨. ಅಶೋಕಾರಿಷ್ಟ ನುತ್ತು ಮೂತ್ರ.

ಹೆಂಗಸರ ನುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಶ್ವೇತಕಾಲು ನೆಳಕ ಮತ್ತು ಗರ್ಭಾಕಯದ ಎಲ್ಲಾ ರೋಗಗಳನ್ನೂ ಅತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮತ್ರೆಗಳು ಸಾವಿರಾರು ಹೆಂಗಸರಿಗೆ ಅಂತರಿಕ ಆರೋಗ್ಯವನ್ನು ಒದಗಿಸಿ, ಮನೋಭಿಲಾಷೆಯನ್ನು ಪೂರೈಸಿರುವುವು. ಕ್ಯಾಯ 1 ಬಾಟ್ಲಿ ಔಷಧ, 1 ಡಬ್ಬಿ ಮಾತ್ರೆ ರೂ 2 ಅ. 4, 3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಅ 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಮಲೆ ಜ್ವರ, ೭ ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ತರಗಿಸಿ ಶಕ್ತಿಯನ್ನು ಖುಂಟು ಮಾಡುತ್ತದೆ. ಬಾಟ್ಲಿ 1ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಮೇಹ ಕುಠಾರ. ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದ, ಹುಳಿಯಂತೆ ಹೋಗಡಕ್ಕೆ ಕೇವನ್ನೂ ವ್ರಣವನ್ನೂ ಉರಿಯನ್ನೂ ಗುಣಪಡಿಸುತ್ತದೆ ಡಬ್ಬಿ 1ಕ್ಕೆ ರೂ. 2—8—0 3ಕ್ಕೆ ರೂ. 7.

೫. ಇಛ್ಛಾ ಭೇದಿ ಗುಟಿಕೆ. ಅಜೀರ್ಣವನ್ನು ಉಂಟುಮಾಡುವ ಸುಖ ವೀರೇಚಕ ಬಾಟ್ಲಿ 1ಕ್ಕೆ 0—12—0 ಆಣೆ 3 ಬಾಟ್ಲಿಗಳಿಗೆ 2—2—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಯಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್,
12—12 ರಥಬೀದಿ, ಮಂಗಳೂರು, ದ. ಕನ್ನಡ.

ಭಂಗಾರದ ಉಂಗುರಗಳು.

ಕೈಯ 12 ಆಣೆ ಮಾತ್ರ.

ಈ ಉಂಗುರಗಳನ್ನು ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್‌ಗೋಲ್ಡ್ ಭಾಗಾರದಿಂದ ಕಟ್ಟಡ ಕಟ್ಟಿದೆ. ಇದು ಬಣ್ಣವು ಕೆಡದಂತೆ ಎಲಕಾಟ್ರಿಕ್ ಪವರಿನಿಂದ ಗಿಲಿಟ್ ಭಂಗಾರದ ಬಣ್ಣ ಕೊಟ್ಟಿದೆ. ಇವು ಸಾಚಾ ವಜ್ರದ ಉಂಗುರಗಳಿಗೆ ಸರಿಸಮವಾಗಿವೆ. 1ಕ್ಕೆ 12 ಆಣೆ, 3 ಉಂಗುರಗಳಿಗೆ ಒಂದು ಟೇಬಲ್ ಕ್ಲಾಕ್‌ನ್ನೂ, 6 ಉಂಗುರಗಳಿಗೆ ಒಂದು ಭಂಗಾರದ ಪಾಕೆಟ್ ವಾಚನ್ನೂ, 12 ಉಂಗುರಗಳಿಗೆ ಒಂದು ಬಂಗಾರದ ಕೈಯಲ್ಲಿ ಕಟ್ಟುವ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುತ್ತೇವೆ.



ವಿಳಾಸ:—ಸಿಟಿ ಮಾರ್ಟ್,
52—37 168 ಬೈತಾಖಾನ ಬಜಾರ್, ಮದ್ರಾಸ್.

Printed & published by P. I. Bellappa, at "Kodagu" Press, Mercara for "Kodagu" Ltd.

Reg. No. M. 1550.

First delivery please return to
"KODAGU" OFFICE, MERCARA.

ಕೊಡಗು.

ಸರ್ವೇಷಾ ಧೂತದಯಯೂ ವಿದ್ಯಾ ನೀತಿ ಪ್ರಯುಕ್ತತಾಃ ॥ ಏಕೈನುಷ್ಕೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ॥

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಸಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೯ | ಮಡಿಕೇರಿ, ಸನ್ ೧೯೩೦ನೇ ಇಸವಿ ಏಪ್ರಿಲ್ ತಾರೀಕು ೧೧ ನೇ ಶುಕ್ರವಾರ. | ಸಂಚಿಕೆ ೪೭

Telephone – 3145

By Appointment to H E The Governor of Madras.

Telegrams :– "PRECIOUS",

Guarantee of Satisfaction throughout in every order large or small !

PROMPTEST EXECUTION

CATALOGUE ON APPLICATION

HIGH CLASS WORKMANSHIP

GOLDSMITH SILVERSMITH

V. Subramaniayer

GEMSET JEWELLER

POST BOX—423 TRIPLICANE MADRAS.

Excellent Quality Chaste Designs Moderate Prices.

Brooch.

Ice Tumbler.

"Green Hills"
VIRARAJENDRAPET
7th Decr., 26.

Sir,

.....I am glad to note that the Jewels have a good finish.....

(Sd.) Mrs. A. B. CHENGAPPA

SUNTICOPPA,
Nellore Estate.
7th April, 28

Dear Sir,

I received the parcel and I am very glad to see the workmanship. I must say it is excellent I appreciate your workmanship and skilful handling. They were praised by one and all of my friends.

(Sd.) Miss K. SUBBIAH.

MERCARA,
20th May, 27

Dear Sir,

I am quite satisfied with the Jewels you sent on the 16th instant

(Sd.) Mrs K. S. CARIAPPA.

52–29 ***Illustrated Catalogue Free on Application.***

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

"ಬೋರಿಕ್ ಹುಳದ ದೆಸೆಯಿಂದ್ದ ಕಿತ್ತುತೆಗೆದ ಕಾಫಿಗಿಡಗಳ ಸಂಖ್ಯೆಯು ಧಾತುಗುಣದ (Mineral) ಗೊಬ್ಬರಹಾಕಿದ ಸ್ಥಳಗಳಿಗಿಂತಲೂ ಸಾರಜನಕ (Nitrogenous) ಗೊಬ್ಬರ ಹಾಕಿದ ಸ್ಥಳಗಳಲ್ಲಿ ಕಡಿಮೆಯೆಂದು ಸಿದ್ಧಾಪುರ ಪರೀಕ್ಷಾ ಕ್ಷೇತ್ರ (Experiment station) ದಲ್ಲಿ ಕಂಡು ಬಂದಿದೆ ಆದುದರಿಂದ ರೋಬಸ್ಟ ಕಾಫಿ—ಹೋಲ್ ಬೋಲಿಗೆ ಸಾರಜನಕ ಗೊಬ್ಬರವು ಪ್ರಯೋಜನಕರವಾಗುವದೆಂದು ತೋರುತ್ತದೆ" (ಡಿ ಜಿ ಮನ್ಸ್ಕೋಪನರಲ್, ಸುಂಬಷ್ಟಿಕ್ ಆಫೀಸರ್, ಯುನಿಯನ್ ಕಮರ್ಷಿಯಲ್ ಡಿಪಾರ್ಟ್‌ಮೆಂಟ್.)

ಹೆಚ್ಚಿನ ಮಾಹಿತಿ, ಎವಿಧ ಬೆಳೆಗಳ ವಿಷಯ ಧರ್ಮೋದ್ಗಾರಾಗಿ ಹುಟಿನ ಪತ್ರಿಕೆಗಳು ವನ್ನೆಯೆಗಳಿಗೆ ಈ ಕೆಳಗಿನ ವಿಳಾಸದಾರರಿಗೆ ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ,
ಇಂಡಿಯನ್ ಡೆಲಿಗೇಶನ್,
ಫೋ. ಬಾ. ನಂ. 469, ಕಲ್ಕತ್ತಾ.

(2) ಮಿಸ್ಟರ್ ಯಂ. ಯು ಬೆಳ್ಯಪ್ಪ,
ಚಿಲಿಯನ್ ನೈಟ್ರೇಟ್ ಕಮಿಟಿ,
ಮಡಿಕೇರಿ.

24—22

ಕಟ್ಟುಕತಾಲಾ ಮಾಚಿಸ್ಟರ ಸೈ:—ಇದು ತಾಜಕ್ಕನ ಮತ್ತು ಸ್ವೀಪನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ ದಿನಾ ಬಿಟ್ಟು ಬರುವ ಜ್ವರ, ೩—೪ ದಿವಸಕ್ಕೊಮ್ಮೆ ಇಂದು ಬರುವ ಜ್ವರ ಮತ್ತು ಜ್ವರಗಳಿಗೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—೨—0, ೩ಕ್ಕೆ ರೂ 4—೦—0 6ಕ್ಕೆ ರೂ 7—೫—0 12ಕ್ಕೆ ರೂ 14



ಚಿಂದನಾಸವೆ:—ಇದು ಪ್ರಮೇಹ ರೋಗ ಕ್ಕೆಲ್ಲ ಮುಖ್ಯ ಹಸಿವನುಂಟು ಮಾಡುವುದು, ಮೂತ್ರಕೃಚ್ಛ್ರ ಉರಿ, ಮೂತ್ರ ಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ದಾಗ ಉರಿಯುವುದು, ಮೂತ್ರ ನಾಳದಿಂದ ಕೀವು ಬರುವುದು ಮೂತ್ರದಲ್ಲಿ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ಕಡಿಮೆಯಾಗಿ ಸಾಮರ್ಥ್ಯವಿಲ್ಲದಿರುವದು ದೇಹವೆಲ್ಲ ಉರಿ, ಬಾಯಾರಿಕೆ ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವೆಲ್ಲಾ ರೋಗಗಳಿಗೆ ಉತ್ತಮ ಔಷಧಿ ಬೆಲೆ ಬಾಟಲಿ 1, 3, 6ಕ್ಕೆ ರೂ 1—೫—0 3—೫—0, 5—12—0

ರೋಮನಾಸಿನಿ:— ಈ ತುಪ್ಪವು ಕೀಗಳಲ್ಲಿ ಕೆಲವು ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವದು ಸೀಸೆ 1ಕ್ಕೆ 6 ಆಣೆ 3 ಸೀಸೆಗಳಿಗೆ ರೂ 1, 1 ಡಜನಿಗೆ 3—೦—0

ಮನೋಲ್ಲಾಸಿನಿ ಪೈಲ:—ಕಲೆತೀತ್ತ, ಕಲೆಯಿರುವುದು, ಕಲಿವು, ಕಪ್ಪುರ, ಕಲೆಯಿಂದ ತೀಸಿ ಸೇರುವುದು ಕಲೆಯು ಕಪ್ಪು, ಕೆಲ್ಲು ಸೋತ, ಅಪಸ್ಮಾತ ಕಪ್ಪೆ ಬಾರದಿರುವದು, ಕೆನವು ಕಪ್ಪೆ ಕುಂದಿಹೋಗುವುದು ಇವಕ್ಕೆಲ್ಲ ಖಂಡಿತ ಗುಣವಾಗುವುದು ಕಪ್ಪು ಸೋತ, ಅಪಸ್ಮಾತ ಕಪ್ಪೆ ಬಾರದಿರುವದು, ಕೆನವು ಕಪ್ಪೆ ಕುಂದಿಹೋಗುವುದು ಇವಕ್ಕೆಲ್ಲ ಖಂಡಿತ ಗುಣವಾಗುವುದು ಮುಂಜಾನೆ ಗಸ್ಥವಾಗಿರುವ ಕಫವನ್ನು ಬೆಳಿಯಿ ಕೆಡಿದಲಿಗೆ ಸಾಂದ್ರಮುವನ್ನು ಹೊಳಪನ್ನು ಆಕಾಲಕ್ಕೆ ಹಸ್ತಾನು ಮುಂಜಾನೆ ಕಫವು ಕಫದಲ್ಲಿ ಅಲ್ಲುರ ಸ್ಥಳದಲ್ಲಿ, ಹೊಸ ಕಫದಲ್ಲಿ ಹುಟ್ಟುಶಕ್ತಿ ಬೆಲೆ ಸೀಸೆಗೆ ರೂ. 1, 3 ಸೀಸೆಗೆ 2—10—0 ಒಂದು ಡಜನ್ ಸೀಸೆಗೆ ರೂ 2, 3 ಸೀಸೆಗಳಿಗೆ 5—೫—0

ನಮ್ಮ ಔಷಧಾಗಳು ಕರಿನಿ ನೋಡಿರಿ.

ವಿಳಾಸ—ಮನೋಲ್ಲಾಸಿನಿ ಕಂಪೆನಿ,
೨. ಮಂಗಳೂರು.

ಬಾಲಾರ್ಕಮದು.

ನಮ್ಮ ಮಕ್ಕಳ ಸೌಂದರ್ಯವನ್ನು ಸೋತಪೀಕಾವಲಿ ಉಪ್ಪುಕ ಗುಣವುಳ್ಳ ಬಾಲಾರ್ಕಮಧುವನ್ನು ಕೊಂಡು ಮಕ್ಕಳು ರೋಗ



ಬರದಿಂ ಎದ್ದು ಕ್ಷೀಣವಾಗಿದ್ದರೂ ಇದರಿಂದ ಬಹು ಬೇಗ ಪುಷ್ಟಿ ಬುಂ, ಬಿಸ್ಪಾ ಬರುವದು ದಿನಕ್ಕೆ ಅರೌನ್ಸ್‌ಸ್ಪೂ. ಪೂರ್ತಿಯ ಹೆ ಚ್ಚುವದು ಇದು ಮಧುರವಾಗಿ ಚಕ್ಕ ವಸ್ತುಗಳು ಆಹಂದಿಂದ ಸೇವಿಸುವಾಗ ಬೆಲೆ 1 ಕ್ಕೆ 12 ಆಣೆ. ೮ ಕ 9 ಆಣೆ

52—20 ಯಂ. ವಿ. ಪ್ರಸಾದಿಕ್ಕ
ಔಷಧಾಲಯ,
ಶಿವಮೊ ಗ
(ಮೈಸೂ ರು)

ಕೊಡಗು.

ಸರ್ ೧೯೬೦ನೇ ಇಸವಿ

ವಿಪ್ರಿಲ್ ಹಾ. ೧೫ನೇ ಶುಕ್ರವಾರ.

ಸ್ವಾತಂತ್ರ್ಯದ ಪೋರಾಟ.

ಒಂದು ಜನಾಂಗವು ಇನ್ನೊಂದು ಜನಾಂಗದ ಐಶ್ವಿಕ ಯಲ್ಲಿ ಇರುವಂಥಾದ್ದು ಬಹಳ ಅಸ್ವಾಭಾವಿಕವಾದ ಸ್ಥಿತಿ ಯಾಗಿದೆ. ಸ್ವಾತಂತ್ರ್ಯವನ್ನು ಸಂಪಾದಿಸಲು ಪ್ರಯತ್ನಿಸ ಬೇಕಾದ್ದು ಅಧೀನ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯ ಕರ್ತ ವ್ಯವಾಗಿದೆ. ಹಿಂದೂಸ್ಥಾನವು ಒಂದೂವರೆ ಶತಮಾನದಿಂದ ಬ್ರಿಟಿಷರ ಅಧೀನದಲ್ಲಿರುವದರಿಂದ ಹಿಂದುಸ್ಥಾನಕ್ಕೆ ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ತಾತ್ವಿಕ ಭಾಗಗಳಲ್ಲೂ ಹಾನಿಯಾಗಿರುವದನ್ನೂ ಮತ್ತು ಆಗುತ್ತಿರುವದನ್ನೂ ಸ್ವಾತಂ ತ್ರ್ಯ ದಿನವಾಗಿ ಆಚರಿಸಿದ ತಾ. 26—1—1950ರಲ್ಲಿ ಹಿಂದುಸ್ಥಾ ನದ ಎಲ್ಲಾ ಕಡೆಗಳಲ್ಲೂ ಒಟ್ಟಿಗೆ ಪಡೆದ ರಣವಿನಲ್ಲಿ ಒಪಿ ವಿಷದವಾಗಿ ನಿರ್ಣಯಿಸಿದೆ. ಹಿಂದುಸ್ಥಾನಕ್ಕೆ ಸಾಮಂತ ಸ್ವ ರಾಜ್ಯ ದೊರೆತರೆ ಪರವಾಸ್ಯಿಂದ ಹಿಂದುಸ್ಥಾನಕ್ಕೆ ಆಗುತ್ತಿ ರುವ ಹಾನಿಗಳನ್ನು ತಪ್ಪಿಸಿಕೊಳ್ಳಬಹುದಂತೆ ಒಳ್ಳುತ್ತೇವೆ. ಬ್ರಿಟಿಷರು ಸಂಬಂಧವೇ ಇರಬಾರದೆಂತ ನಾವು ವಾದಿಸುವವ ರಾಗಿಲ್ಲ.

ಹಿಂದುಸ್ಥಾನದವರಿಗೆ ಸ್ವಾತಂತ್ರ್ಯ ಸಂಪಾದನೆಯ ಆತು ರವು ಬಹಳ ಹೆಚ್ಚಾಗಿದೆ ಸ್ವಾತಂತ್ರ್ಯವನ್ನು ಮೆಟ್ಟು ಮೆ ಟ್ಟು ವಿಶುತ್ತಾ ಹೋಗಿ ಪಡೆಯಬೇಕೆಂಬ ತತ್ವವನ್ನಾಗಲೀ, ಯಾವ ಮೆಟ್ಟನ್ನು ಯಾವಾಗ ವಿಶಬೇಕೆಂಬದನ್ನು ನಿರ್ಣಯಿ ಸುವ ಹಕ್ಕು ಬ್ರಿಟಿಷ್ ಪಾರ್ಲಿಮೆಂಟಿಗೇ ಇರತಕ್ಕದ್ದು ಎಂ ಬ ತತ್ವವನ್ನಾಗಲೀ ಹಿಂದೀಯರು ಒಪ್ಪುವದಿಲ್ಲ. ಹಿಂದೀ ಯರ ಬನ್ನಿಸಿದ್ದ ಹಕ್ಕಾದ ಸ್ವಾತಂತ್ರ್ಯವು ಕಂತುವಾರಾ ಗಿ ಇನ್ನೊಬ್ಬರು ಕೊಟ್ಟು ಒರತಕ್ಕದ್ದಲ್ಲ. ಹಿಂದೀಯರ ಸ್ವ ಪ್ರಯತ್ನದಿಂದಲೇ ಒರತಕ್ಕದ್ದು. ಹಿಂದೀಯರು ದೃಢನಿಶ್ಚ ಯಮಾಡಿದರೆ ಹಿಂದೀಯರ ಸ್ವಾತಂತ್ರ್ಯ ಸಂಪಾದನೆಗೆ ಯಾ ರೂ ಅಡ್ಡಿಬರಲಾರರೆಂಬದನ್ನೂ ಹಿಂದೀಯರು ನಂಬಿದ್ದಾರೆ.

ಬ್ರಿಟಿಷ್ ಅಧಿಕಾರಿಗಳ ಈ ವರೆಗಿನ ವರ್ತನೆಯಿಂದ ಬರೀ ವಾದಗಳಿಂದಲೂ, ನ್ಯಾಯವಾದ ಸಬಬುಗಳನ್ನು ತೋರಿಸಿ ಕೊ ಡುವದರಿಂದಲೂ ಹಿಂದೀಯರ ಕೂಲಂಕಷವಿಲ್ಲದೆ ಬ್ರಿಟಿಷರು ಲಂಗಿಕರಿಸಿಕೊಟ್ಟಾರೆಂತ ನಬಲು ಅವಕಾಶವಿಲ್ಲದೆ ಹೋಗಿ ದೆ ಆದ್ದರಿಂದಲೇ ನೇತಾಜಿ ಕಾಂಗ್ರೆಸಿನವರು ಖಾನೂನು ಭಂಗದ ಕಾರ್ಯಕ್ರಮವನ್ನು ಕೈಕೊಂಡಿರುವದಾಗಿಸಿ. ಸ್ವಾ ತಂತ್ರ್ಯದ ಪ್ರೇಮವು ಅತ್ಯಂತವಾಗಿ ಹೆಚ್ಚಿತ್ತಿರುವದರಿಂದ ಲೇ ಉತ್ತರ ಹಿಂದುಸ್ಥಾನದಲ್ಲಿ ರಾಜಕೀಯ ಕೊಲೆವಾತಕಗಳು, ಅವಕ್ಕೆ ಬೇಕಾದ ವಿರ್ವಾಹಗಳೂ ನಡೆಯುತ್ತಿದ್ದುದಾ ಗಿದೆ. ಈ ದಾರಿಯು ಯುಕ್ತವಾದದ್ದಲ್ಲ, ಅದರಿಂದ ಜಯ ವಾಗುವ ಸಂಭವವೂ ಇಲ್ಲ. ಮಹಾತ್ಮಗಾಂಧಿಯವರು ಆ ಜನ್ಮ ಅಹಿಂಸಾವಾದಿಗಳಾಗಿದ್ದಾರೆ. ಇವರು ಹಿಂದುಸ್ಥಾನದ ಮುಂದಾಳುತನಕ್ಕೆ ಬೊರೆಯಿದ್ದರೂ ಹಿಂದೀಯರು ಆ ಹಿಂಸಾ ದಾರಿಯಲ್ಲಿ ಮುಂದರಿಸಿಯೇ ಸ್ವಾತಂತ್ರ್ಯವನ್ನು ಪ ಡೆಯಲು ನಿಶ್ಚಯಿಸಿರಬೇಕೆಷ್ಟು. ಅಹಿಂಸೆಯನ್ನು ಸಂಪೂರ್ಣವಾ ಗಿ ನಂಬಿರುವ ಮಹಾತ್ಮಗಾಂಧಿಯವರು ಅಹಿಂಸಾಯುಕ್ತ ವಾದ ಖಾಯಿದೆ ಭಂಗವನ್ನು ಕೈಕೊಂಡಿದ್ದರಿಂದ ಸ್ವರಾಜ್ಯ ಸಂಪಾದನೆಗೆ ಕೂಲೆನಾಕರವೆ ದಾರಿಯನ್ನು ಹಿಡಿದ ಕೂಟದವ ರು ಸಹ ಮೂರು ವರ್ಷಗಳ ಒರೆಗೆ ತಮ್ಮ ಕಾರ್ಯಗಳನ್ನು ನಿಲ್ಲಿಸಿ ಮಹಾತ್ಮ ಗಾಂಧಿಯವರ ಅಹಿಂಸಾ ಯುಕ್ತವಾದ ಕಾರ್ಯಕ್ರಮದ ಫಲಿತಾಂಶವನ್ನು ನೋಡಲು ಒಪ್ಪಿರು ತ್ತಾರೆ.

ಮೋಜರೇಟ್ ಪಕ್ಷದವರು ಅಂದರೆ ಸ್ವರಾಜ್ಯ ಸಂಪಾ ದನೆಯನ್ನು ಖಾನೂನಿಗೆ ವಿರೋಧವಾಗದ ಚಳವಳಿಂದಲೇ ಸಂಪಾದಿಸಬಹುದೆಂತ ನಂಬಿರುವವರು ಸಹ ಮಹಾತ್ಮ ಗಾಂ ಧಿಯವರ ಈಗಿನ ಖಾಯಿದೆ ಭಂಗದ ಹೋರಾಟವನ್ನು ಖಂಡಿ ಸಿರುವದಿಲ್ಲ. ಮಧ್ಯಗಾಮಿಗಳಾಗಿದ್ದ ಪಂಡಿತ ಮದನಮೋ ಹನ ಮಾಳವೀಯ ರಂಥವರೇ ಮಹಾತ್ಮ ಗಾಂಧಿಯವರ ಚಳ ವಳದಲ್ಲಿ ಭಾಗಿಗಳಾಗಿದ್ದಾರೆಂದ ಮೇಲೆ ಹಿಂದುಸ್ಥಾನದ ಈಗಿನ ಚಳವಳಿಕ್ಕೆ ಸರ್ವಸಮ್ಮತಿ ದೊರಕುತ್ತಿರುವದು ಆಗಿದೆ.

ಈಗ ಮಹಾತ್ಮ ಗಾಂಧಿಯವರು ನಡಿಸುತ್ತಿರುವ ಚಳವ ಳವು ಎಂಟು ಅಂಶಗಳಿಂದಿರುವಾಗಿದೆ. ಹಿಂದೂಸ್ಥಾನದಲ್ಲಿ ವಿ ಶೇಷ ಶ್ರಮವಿಲ್ಲದೆ ಧಾರಾಳವಾಗಿ ದೊರೆಯುವ ಉಪ್ಪಿಗೆ ಸ ರಕಾರವು ಸಂಕಿ ರಪನಲ್ಲಿ ಹಾಕಿರುವ ಕಂದಾಯವನ್ನು ರಾಯಿನ ಕಂದಾಯ ಹಾಕುವದು ಅನ್ಯಾಯವಾಗಿದೆ ಇ ದನ್ನು ಸರಕಾರವು ತೆಗೆದು ಹಾಕಲೇ ಬೇಕು. ಈ ಸುಂಕವ ನ್ನು ತೆಗೆದು ಹಾಕಬೇಕೆಂತ ಶ್ರೀ ಗೋವಾಲಕೃಷ್ಣ ಗೋಕಲೆ ಯವರು ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ 1898 ರಂದಲೇ ಹೋರಾಡುತ್ತಿದ್ದರು. ಆಗಿಂದಾಗ್ಗೆ ಅಲ್ಲಿ ಸ್ವಲ್ಪ ಕ ಡಿಮೆ ಮಾಡಿದರೇ ಹೊರತು ಪೂರ್ತಿ ತೆಗೆಯಲು ಇನ್ನೂ ಒಪ್ಪಿ ರುವದಿಲ್ಲ. ಲವಣ ಸಾರಿ ರೂ. ೭—೮—೦ ಗೆ ಹೆಚ್ಚಿಸಿಯೂ ಇದ್ದಾರು ಧರ್ಮಕ್ಕೆ ವಿರುದ್ಧವಾದ ಈ ಕಂದಾಯವನ್ನು ಕಿತ್ತು ಹಾಕಿ ಒಡವರಿಗೆ ಸಹಾಯ ಮಾಡುವದೇ ಮೊದಲನೇ ಉದ್ದೇಶವಾಗಿದೆ ಈ ಜಳವಳದಿಂದ ಸರಕಾರವು ಉಪ್ಪಿನ ಕಂದಾಯವನ್ನು ತೆಗೆದು ಹಾಕಿದರೆ ನಿಷಾಪದಾರ್ಥಗಳಿಂದ ಸ ರಕಾರವು ಮೂಡಿಕೊಳ್ಳುತ್ತಿರುವ ಉತ್ಪತ್ತಿ ಮುಂತಾದ ಇತರ ಧರ್ಮಕ್ಕೆ ವಿರೋಧವಾದ ಕಂದಾಯಗಳನ್ನು ರದ್ದು ಪಡಿಸಲು ಮಹಾತ್ಮರು ಯೋಚಿಸುತ್ತಿದ್ದಾರೆಂಕ ತಿಳಿಯಬಂದಿದೆ.

ಮಹಾತ್ಮರು ಕೈಕೊಂಡ ಈ ಧರ್ಮ ಯುದ್ಧಕ್ಕೆ ಹಿಂ ದೂಸ್ಥಾನದ ಎಲ್ಲಾ ಪ್ರಾಂತ್ಯಗಳಿಂದಲೂ ಜೊಲು ದೊರೆತಿದೆ. ಈ ಖಾಯಿದೆ ಭಂಗವು ಮೊನ್ನೆ 6 ನೇ ತಾರೀಕಿನಿಂದ ಪ್ರಾರಂಭ ವಾಗಿದೆ. ಏಕ ಕಾಲದಲ್ಲಿ ಅನೇಕ ಪ್ರಾಂತ್ಯಗಳಲ್ಲಿ ನಿರ್ಧಾರಿಸಿ ರುತ್ತಾ ಸರ್ಕಾರದವರು ಜನಪ್ರೀಯರಾದ ಅನೇಕ ಮಂದಿ ಯ ಳುಗಳನ್ನು ನೆರೆಹಿಡಿದು ಸಜಕ್ಕೆ ಗುರಿಪಡಿಸಿರುತ್ತಾರೆ ಮಹಾ ತ್ಮ ಗಾಂಧಿಯವರ ಒಬ್ಬ ಮಗನಿಗೆ 6 ತಿಂಗಳು ಸಜ ವಿಧಿಸಲ್ಪ ಟ್ಟಿದೆ. ಕರ್ನಾಟಕದ ಮುಖಂಡರಾದ, ಮಹಾತ್ಮ ಗಾಂಧಿಯವ ರ ಭೋದನೆಯನ್ನು ಪಾಲಿಸುವವರಲ್ಲಿ ಒಬ್ಬರಾದ ಗಂಗಾಧರ ರಾವ್ ದೇಶಪಾಂಡೆಯವರಿಗೆ ಖಾನೂನಿಗೆ ವಿರೋಧವಾಗಿ ಶ ರಿಸಿದ ಉಪ್ಪನ್ನು ಮಾರಿದ್ದಕ್ಕೆ ನಾಲ್ಕು ವಾರ ಸಜವಾಗಿದೆ ಬೊಂಬಾಯಿ ಸಬ್ಲದ ಪ್ರಸಿದ್ಧ ವಕೀಲರಾದ ಪಾರ್ಸಿ ಜಾತಿಗೆ ಸೇರಿದ ಮೆ ಸಂಘೂನ್ ಎಂಬವರಿಗೆ ಉಪ್ಪು ಮಾಡಿದ್ದಕ್ಕಾಗಿ ಒಂದು ತಿಂಗಳು ಸಜವಾಗಿದೆ. ಒಕ್ಕ ಸತಿಗಳಾಗಿದ್ದು ಈಗ ಆರ ನೇ ವರ್ಷಗಳಿಂದ ಗಾಂಧಿಯವರನ್ನು ಹಿಂಬಾಲಿಸುತ್ತಿರುವ ಜಮು ನಾ ಲಾಲ್ ಬಜಾಜರನ್ನು 2 ವರ್ಷ ಕಠಿಣ ಸೆಜೆಗೆ ಗುರಿಪಡಿಸಿರು ವರು. ಉಪ್ಪಿನ ಖಾನೂನಿಗೆ ವಿರೋಧವಾಗಿ ವರ್ತಿಸಲು ಹತ್ತು ಒನರಿಗಿಂತ ಹೆಚ್ಚು ಜನರಿಗೆ ಉತ್ತೇಜನ ಕೊಟ್ಟರೆಂಬ ತಕ್ಕೀರಿಗೆ ಕ ಲವರಿಗೆ ಒಂದು ವರ್ಷ, ಎರಡು ವರ್ಷ ಸಜ ಸಜ ಆಗಿದೆ. ಸೆಜ ಮಾಡಿದ್ದಕ್ಕೆ ಈ ಖಾನೂನು ಭಂಗಕ್ಕೆ ಇಳಿದ ಸತ್ಯಾಗ್ರಹಿಗಳು ಅಕ್ಕೇಪಿಸುವದಿಲ್ಲ ತಾವು ಕಷ್ಟಪಟ್ಟನುಭವಿಸಿ ಸರ್ಕಾರದವರ ಅಧರ್ಮದ ಕಾರ್ಯವನ್ನು ನಿಲ್ಲಿಸಿ ದೇಶಕ್ಕೆ ಕಶ್ಯಾಣ ಮಾಡ ಬೇಕಾದದ್ದೇ ಸತ್ಯಾಗ್ರಹಗಳ ಉದ್ದೇಶವಾಗಿದೆ. ಆದರೆ ಖಾ ನೂನು ಭಂಗಗೊಡಿಸುವೆಂಬ ಕಾರಣದಿಂದ ಸರ್ಕಾರವು ಸಿಟ್ಟಿಗೆ ದ್ದು ಪದ ತಪ್ಪಿ ತನ್ನ ಕೈಕೊಡುಬಾರದು. ಖಾನೂನು ಭಂಗ ಪ್ರಾ ರಂಭಿಸಿದ ದಿನ ಪೋಲೀಸಿನವರು ಬಹಳ ತಾಳ್ಮೆಯಿಂದ ವರ್ತಿಸಿ ದರಿಂತ ಮಹಾತ್ಮ ಗಾಂಧಿಯವರು ಹೊಗಳಿದ್ದಾರೆ. 6, 7 ನೇ ತಾರೀಕುಗಳಲ್ಲಿ ಪೋಲೀಸಿನವರ ವರ್ತನೆಯು ಎಲ್ಲಿಯೂ ಅಕ್ಷೇಪಣೆಗೆ ಗುರಿಯಾದಂತೆ ಕಾಣುವದಿಲ್ಲ. ಆದರೆ ಕೆಲವು ವೇಜಿಸ್ಲೇಟರುಗಳು ಎರಡು ವರ್ಷ ಸಜ ಕೂಟ್ಟದ್ದು ದ್ವೇ ಷವನ್ನು ತೋರಿಸಿದಂತೆ ಕಾಣುತ್ತದೆ. ಖಾನೂನಿಗೆ ವಿರೋ ಧವಾಗಿ ಉಪ್ಪು ಮಾಡಿದರೆ ಬರೀ ಆರು ತಿಂಗಳು ಮಾತ್ರ ಸಜ ವೆಂತ ಖಾನೂನಿನಿರುವಾಗ ಉಪ್ಪು ಮಾಡಲು ಹುಮ್ಮಸ್ಸು ಕೊ ಟ್ಟವರಿಗೆ ಎರಡು ವರ್ಷ ಸಜ ವಿಧಿಸಿದ್ದು ಸರಿ ತೋರುವದಿಲ್ಲ. ಸತ್ಯಾಗ್ರಹಿಗಳು ಹೆಚ್ಚಿನ ಸಜ ವಿಧಿಸಿದ್ದಕ್ಕೆ ಅಕ್ಕೇಪಿಸುವವರಲ್ಲ. ಅವರು ತಮ್ಮ ಜೀವನ್ನೇ ದೇಶಕ್ಕಾಗಿ ಒಪ್ಪಿಸಲು ಹೊರಟ ವರಾಗಿರುತ್ತಾರೆ. ಆದರೆ ಯುದ್ಧದಲ್ಲಿ ಶಿಕ್ಷೆ ಹಿಡಿದವರನ್ನು ಸಹ ಧರ್ಮ ರೀತಿಯಿಂದ ನೋಡಿಕೊಳ್ಳಬೇಕೆಂತ ಇರುವಾಗ ಅಹಿಂಸಾ ಯ ದ್ಧದಲ್ಲಿ ಶಿಕ್ಷೆ ಬಿದ್ದವರಿಗೆ ಕ್ರೂರ ದಂಡನೆಯ ನ್ನು ವಿಧಿಸುವದನ್ನು ಸಮರ್ಥಿಸಲು ಸಾಧ್ಯವಿಲ್ಲ.

ಈ ಅಹಿಂಸಾತ್ಮಕ ಯ ದ್ಧದಲ್ಲಿ ಸೇರಲು ಎಲ್ಲರಿಗೂ ಸಾಧ್ಯವಿಲ್ಲದಿದ್ದರೂ, ಪರದಾಸ್ಯದ ಅವಮರ್ಯಾದೆಯನ್ನು ತಿ ಳಿದುಕೊಂಡ ಪ್ರತಿಯೊಬ್ಬನೂ ಚಳವಳಿಕ್ಕೆ ಸಹಾಯಕರಾಗು ತ್ತಲಿದ್ದಾರೆ. ತಮ್ಮ ಬಂಧುಮಿತ್ರರನ್ನು ಈ ಹೋರಾಟದಲ್ಲಿ ಭಾಗಿಗಳಾಗಲು ಕಳುಹಿಸಲು ಉತ್ತೇಜನಕೊಡುವದು ಒಂದು ವಿಧದ ಸಹಾಯವಾಗಿದೆ. ಇದಕ್ಕೆ ತಂಡಾಲ್ಲದವರು ಈ ಹೋ ರಾಟಕ್ಕೆ ಬೇಕಾದ ಧನ ಸಹಾಯವನ್ನಾದರೂ ಮಾಡುತ್ತಿರುವ ರು. ಇದೂ ಸಾಧ್ಯವಿಲ್ಲದವರು ಮಹಾತ್ಮರ ರಚನಾತ್ಮಕ ಕಾ ರ್ಯಗಳಿಗಾದರೂ ಸಹಾಯಕರಾಗುತ್ತಿರುವರು. ಖಾದಿ ಬಟ್ಟೆ ಟ್ಟಿಯನ್ನೇ ಧರಿಸಬೇಕಾದದ್ದೂ, ನಿಷಾಸೇವನೆಯನ್ನು ಬಿಡುವ ದೂ, ಅಸ್ಪೃಶ್ಯತಾನಿವಾರಣೆ—ಈ ಕೆಲಸಗಳನ್ನು ಮಡಿಲು ಯಾ ವ ಅಡ್ಡಿಯೂ ಇಲ್ಲ ನಿಷಾಸೇವನೆಯನ್ನು ನಿಲ್ಲಿಸಲು ಸರ್ವ ಪ್ರ ಯತ್ನ ಮಾಡುವ ಅವಶ್ಯಕತೆ ಈ ದೇಶದಿಲ್ಲಿ ತುಂಬಾ ಇನೆ. ಇದಕ್ಕಾದರೂ ಸರ್ವ ಪ್ರಯತ್ನ ಮಡಿಲು ದೇಶೀಯರು ಮುಂ ದು ಬರಬೇಕೆಂತ ಆಸಿಸುತ್ತೇವೆ.

ಜಮಿನ್ದಾರರ ಸಂಘದ ಪ್ರಚಾರ ಕೆಲಸ.

ಗೋಣಿಕೊಪ್ಪಲು ವಿಷಯಂಗ.

ಈ ಮೊದಲೇ ಹುಚ್ಚಿದ್ದ ಜಮಿನ್ದಾರರ ಸಂಘದ ಒನರ ಲ್ ಸೆಕ್ರೆಟರಿಯವರ ನೋಟೀಸು ಮೇರೆ ಈ ತಾ. ೦ನೇ ಆದಿ ತ್ಯವಾರ ಮಧ್ಯಾಹ್ನದ ಮೇಲೆ 3 ಗಂಟೆಗೆ ಗೋಣಿಕೊಪ್ಪಲು (ಹೊಸ) ಪಂಚೆ ವಳದ ಬಳಿ ಸಾರ್ವಜನಿಕ ವಿಷಯಂಗ ನಡೆಯತು. ಸ್ಥೇಗಿನ ವೆಶಭೂಂದ ಸಂತಯು ಪೇಟೆಯಲ್ಲಾ ನಡಿ ಸ್ಪಡನೆ ಬಾಷ್ಪಕುಟ್ಟಿ ಮೇಸ್ತ್ರಿಯವರ ಗದ್ದೆಯು ಬಳಿ ನಡಿಸಲ್ಪ ಟ್ಟ ಕಾರಣ ವಿಷಯಂಗಿನ ಸ್ಥಳ ಬದಲಾಯಿಸಲ್ಪಟ್ಟಿದ್ದರಿಂ ಮಿಟಿಂಗು ಸ್ವಾರಂಭಿಸಲು ಸ್ವಲ್ಪ ಸಾನಕಾಶವಾಯಿತು. ಸ ದರೂ ನೂರಕ್ಕಿಂತ ಹೆಚ್ಚು ಜನರು ನೆರೆದಿದ್ದರು. ಮೆ. ಕೂ ಗಂಡ ಗಣಪತ್ತಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು

ಸಂಘದ ಜನರಲ್ ಸೆಕ್ರೆಟರಿಯಾದ ಮೆ. ಪಂಡ್ಯಂಡ ಕ ಳ್ಳಪ್ಪನವರು ವಿಷಯಂಗನ್ನು ಸ್ವಾರಂಭಿಸಿದಾಗ ಮಾಡಿದ ಭಾ ಷಣದ ಸಾರಾಂಶ—ಈಗ ಇಡೀ ಭೂಲೋಕದಲ್ಲೆಲ್ಲಾ ಆ ದೊಡ್ಡ ಮನುಷ್ಯನೆಂದು ಅನ್ನಿಸಿಕೊಂಡಿರುವ ಮಹಾತ್ಮ ಗಾಂ ಧಿಯವರ ಮುಂದಾಳತನಿಂ ನಿಂತು ಹಿಂದೂದೇಶದ ಬಡ ಗ್ರಾನ ವಾಸಿಗಳ ಉದ್ಧಾರ ಸಲುವಾಗಿ ಸ್ವರಾಜ್ಯವನ್ನು ಪಡೆಯಲು ಹೂಡಿರುವ ಚಳವಳಿಯನ್ನು ಸಂಕ್ಷಿಪ್ತವಾಗಿ ವಿವರಿಸಿ, ಹಿಂದೀಯ ರ ಹುಟ್ಟು ಹಕ್ಕಾಗಿರುವ ಸ್ವರಾಜ್ಯ ಸ್ಥಾಪನೆಗಾಗಿ ಪ್ರತಿಜ್ಞೆ ಮಾ ಡಿ ಹಿಂದೀಯರೂ-ಕಾನೂಯಣದಲ್ಲಿ ಹೇಳಿರುವಪ್ರಕಾರ ಅ ಕಾ ಪ್ರೀಪಕ್ಕೆ ಸೇರುವೆ ಕಟ್ಟಲು ಅಳಿಲೂ ಸಹ ರಾಮನೆಡ ರಿಗೆ ತನ್ನ ಕೈಯ್ಯಲ್ಲಾದ ಸಹಾಯ ಮಾಡಿದಂತೆ-ತನ್ನ "ಅ ಳಿ ಭಕ್ತ ಮಳಲು ಸೇನೆ" ಯನ್ನು ಮಾಡಬೇಕಾದದ್ದು ಆ ನ ಕರ್ತವ್ಯವೆಂದು ಹೇಳಿದರು. ಇಂದಾ ಸೇವೆಯಲ್ಲಿ ಭಾ ವಿ ಬಟ್ಟೆಯನ್ನು ಧರಿಸುವುದು ಒಂದಾಗಿದೆ. ಬ್ರಿಟಿಷರಂತೆ ಯೇ ನಾವೂ ತುಂಬಾ ಸ್ವದೇಶ ಪ್ರೀತಿಯುಳ್ಳವರಾಗಬೇಕ. ಅವರು ಎಲ್ಲಿ ಹೋದರೂ ಅದಷ್ಟು ಮಟ್ಟಿಗೆ ತಮ್ಮ ದೇಶ ದಿಂದ ಬರುವ ಪದಾರ್ಥಗಳನ್ನೇ ಕೊಂಡುಕೊಳ್ಳುವಂತೆ ನಾ ವು ನಮ್ಮ ದೇಶದಲ್ಲಾಗುವ ಕೈಸೂಲಿನ, ಕೈವುಗದ ಬಟ್ಟೆ ಯನ್ನೇ ಉಪಯೋಗಿಸಿ ನಮ್ಮ ಸ್ವದೇಶ ಪ್ರೀತಿಯನ್ನು ತೋ ರಿಸಬೇಕೆಂ. ಇದರಿಂದ ಬಡ ಹಿಂದೂಸ್ಥಾನದಿಂದ ಪರ ದೇಶ ಗಳಿಗೆ ವರ್ಷಂಪ್ರತಿ ಸು.ಮೂರು 63 ಕೋಟಿ ರೂಪಾಯಿ ಬ ಟ್ಟೆಗಾಗಿ ಹೋ ಗು ವುದು ನಿಂತು, ಹೊಟ್ಟೆಗೆ ಒಂದು ಹೊತ್ತೂ ಕೂಡ ಅನ್ನವಿಲ್ಲದೆ ಸಾಯುತ್ತಿರುವ ನಿರಿಯ ಗಟ್ಟಿ ಒಡ ಹಿಂದೀಯರಿಗೆ (ಚರಕಾದಿಂದ ನೂಲು ಮಾಡುವ ಧನರಿಗೆ) ಅನ್ನ ಕೊಟ್ಟಾಂತಾಗುತ್ತದೆ. ತನ್ನ ಮಗುವು ಕ ಪ್ಪಾಗಿಯೂ, ಕುರೂಪಿಯಾಗಿಯೂ ಇದ್ದರೂ ಕೂಡ ಅದ ನ್ನು ಯುರೋಪಿಯನರ ಬಳೇ ಮತ್ತು ಅಂದವಾಗಿ ತೋ ರುವ ಮಗುನಿಗಿಂತ ಹೇಗೆ ಹೆಚ್ಚಾಗಿ ಪ್ರೀತಿಸುತ್ತೀವೋ ಹಾ ಗೆಯೇ ನಮ್ಮ ದೇಶದಲ್ಲಾಗುವ ಖಾದಿ ಬಟ್ಟೆಯು ಒಂಟಾಗಿ ಯೂ, ಸ್ವಲ್ಪ ಹೆಚ್ಚಿನ ಬೆಲೆಯುಳ್ಳದಾಗಿಯೂ ಇದ್ದರೂ ಆದ ನ್ನು ವರದೇಶಿ ಬಟ್ಟೆಗಿಂತ ಹೆಚ್ಚು ಪ್ರೀತಿಸಿ ಅದನ್ನೇ ಉಪ ಯೋಗಿಸ ಬೇಕಾದದ್ದು ನಮ್ಮ ಕರ್ತವ್ಯವಾಗಿದೆ. ಆದರ ಲ್ಲೂ ಈಗೀಗ ಅಂದವಾದ ಖಾದಿ ಬಟ್ಟೆಯು ಬೊರೆಯುವ ದಲ್ಲದೆ ಕ್ರಯವೂ ಕಡಿಮೆಯಾಗುತ್ತಿದೆ. ರಾಜ ಭಕ್ತಿಗಿಂತ ವಿಶೇಷವಾದ ದೇಶ ಭಕ್ತಿಯುಳ್ಳವರೆಲ್ಲರೂ ಸ್ವದೇಶಿ ಬಟ್ಟೆಯ ನ್ನೇ ಉಪಯೋಗಿಸಬೇಕಾದದ್ದು ತಪ್ಪು ಧರ್ಮವಾಗಿದೆ.

ನಿಷಾ ಪದಾರ್ಥದ ಸೇವನೆಯನ್ನು ನಿಲ್ಲಿಸಬೇಕಾದದ್ದು ಎರಡನೇ ಕರ್ತವ್ಯವಾಗಿದೆ ಆಮಲು ಪದಾರ್ಥದ ದೆ ಯಿಂದ ವರ್ಷಕ್ಕೆ ಸುಮಾರು 27 ಕೋಟಿ ರೂಪಾಯಿ ಇಂಡಿ ಯಾದಿಂದ ಸುಲುಗೆಯಾಗಿ ಹೋಗುತ್ತಿದೆ. ಇಡಿಯಾದ ಕ ಷ್ಟ ಬಾತನಕ್ಕೆ ಇದೊಂದು ಮುಖ್ಯ ಕಾರಣವಾಗಿದೆ. ಆ ದರಲ್ಲೂ ಕೊಡಗಿನಲ್ಲಿ ಈ ಡುರ್ವ್ಯಸನದ ಕೆಟ್ಟ ಪರಿಣಾಮಗ ಳನ್ನು ಹೇಳಿ ಮುಗಿಸಲಾಗುವುದಿಲ್ಲ. ಇದು ಎಲ್ಲರಿಗೂ ತಿ ಳಿದ ವಿಷಯವಾಗಿದೆ. ಕುಡಿತನದಿಂದ ಮೆದುಳಿಗೆ ಉಂ ಟಾಗುವ ಕೆಡಕನ್ನೂ ಅನುಭವದ ಉಪಾಧ್ಯಾಯರುಗಳೂ, ದೇಹಕ್ಕೆ ಉಂಟಾಗುವ ದುಷ್ಪರಿಣಾಮವನ್ನು ದೇಶ ಹಿತಚಿಂತ ಕರಾದ ಡಾಕ್ಟರುಗಳೂ ಹೇಳಿಕೊಡುವರು. ಇನ್ನು ಮುಂ ದೆ ಹುಟ್ಟುವ ಮಕ್ಕಳು ಒಳ್ಳೇಯವರಾಗಬೇಕಾದರೆ ತಂದೆ ತಾ ಯಿಗಳು ಕುಡಿದ ಸನುಮದಲ್ಲಿ ಸಂಭೋಗ ಮಾಡಬಾರದು. ಹುಟ್ಟಿದ ಮಕ್ಕಳು ಉತ್ತಮರಾಗಬೇಕಾದರೆ ಕುಡಿತದ ನಾಶ ಕ್ಕೆ ಸಿಕ್ಕಿ ನಿದ್ದು ಅದರಿಂದ ತಪ್ಪಿಸಿಕೊಳ್ಳಲಾರದವರು ಯಾ ರೂ ಕಾಣದಂತೆ ಬಹು ಗುಟ್ಟಿನಲ್ಲಿ ಕುಡಿಯಬೇಕು, ಮದವೆ ಮುಂಜೆಗಳಲ್ಲಿಯೂ, ಹಬ್ಬ ಹುಣ್ಣಿಮೆಗಳಲ್ಲಿಯೂ, ಆಗಾಗ ಗಳಲ್ಲಿಯೂ, ಬಹಿರಂಗವಾಗಿಯೂ ಕುಡಿಯ ಬಾರದು ಯುವಕರು, ಹೆಂಗಸರು, ಮಕ್ಕಳು ಮತ್ತು ತಿಳುವಳಿಕೆ ಇಲ್ಲ ದ ಅಳುಗಳು ಕುಡಿತನಕ್ಕೆ ಸಿಕ್ಕಿದಿಲ್ಲದಂತೆ ಮೊದಲು ಗ್ರಾ ಮಗಳಲ್ಲಿ ಸೇಂದಿ ಇಳಿಸ ವುದನ್ನು ಸಂಪೂರ್ಣ ನಿಲ್ಲಿಸಬೇಕು ಸೇಂದಿ ಗುತ್ತಿಗೆಯಿಂದ ದೊರಯುವ ಉತ್ಪತ್ತಿಯು ಬಹು ಹೀನವೂ, ಪಾಪಕರವೂ ಆದುದರಿಂದ ಅದನ್ನು ಎಲ್ಲೂ ಬಿಡ ಬೇಕು. ಸೂಳೆಗಾರಿಕೆಯು ನಂವಾದನೆಗೂ, ಸೇಂದಿ ಉತ್ಪ ತ್ತಿಗೂ ಭೇದವಿಲ್ಲ. ಮನುಷ್ಯ ಮಾತ್ರದವನು ಹಣಕ್ಕಿಂತ ಹೆಚ್ಚಾಗಿ ಒನರನ್ನು ಪ್ರೀತಿಸಬೇಕು. 1922—23ರಲ್ಲಿ ಗ್ರಾ ಮಂತರಗಳಲ್ಲಿ ನಡಿಸಿದ ಚಳವಳದ ಅನುಭವವನ್ನು ಉಪ ಯೋಗಿಸಿಕೊಂಡು ನಿಷಾ ನಿಷೇಧನನ್ನು ಸಾಧಿಸಲು ಪ್ರತಿ ಯೆ ಂದು ಗ್ರಾಮದಲ್ಲಿಯೂ ಕಮಿಟಿಗಳನ್ನು ನಿರ್ಮಾಣಿಸಬೇಕು.

ಗ್ರಾಮೋಧ್ಧಿಗಾಗಿ ಯೋಗಬೇಕಾದದ್ದು, ಗ್ರಾಮಸ್ಥರು ಸಮ ಯದ ಬೆಲೆಯನ್ನೂ, ಕೆಲಸದ ಗಾರವನ್ನೂ, ಎಲ್ಲಾ ವಿಷ ಯಗಳಲ್ಲಿಯೂ ಸಹಕಾರದ ಸ್ಫೂರ್ತಿಯನ್ನ

ಉಪ್ಪಿನ ಕಟ್ಟಳೆಯನ್ನು ಮುರಿಯುವ ವಿಧಾನ.

ಮಹತ್ಮಗಾಂಧಿಯವರು ಸರಕಾರದ ಕಾಯದೇ ಭಂಗವನ್ನು ಮೊದಲು ಮಾಡುವ ಕುರಿತು ಸೆಬರಮತಿ ಆಶ್ರಮದಿಂದ ಹೊರಟಂದಿನಿಂದ ಜನರ ಕಣ್ಣೆದುರಿಗೆ ಉಪ್ಪಿನ ಕಾಯದೆಯು ಪತ್ರಿಮುಖತೆಗೆ ಬಂದಿದೆ ನಮ್ಮ ಗಾಂಧಿಯವರೂ, ಅವರ ಸ್ವಯಂ ಸೇವಕರೂ ಸಮುದ್ರದ ದಡವನ್ನು ಮುಟ್ಟುವ ಪೂರ್ವದಲ್ಲಿಯೇ ಅವರನ್ನು ಬಂಧಿಸಬಹುದೆಂದು ಅನೇಕರು ಯೋಚಿಸಿದ್ದೆವು. ಆದರೆ ಮಹಾತ್ಮರನ್ನು ಬಂಧಿಸದೆ ಸರಕಾರದವರು ಹಾಗೇ ಬಿಟ್ಟು ಬೇರೆ ಕೆಲವು ಮುಂದಾಳುಗಳನ್ನು ಜೈಲಿಗೆ ಕಳಿಸಿರುವರು. ಈಗ ಹಳ್ಳಿಪಳ್ಳಿಗಳಲ್ಲಿ ಈ ಕಾಯದೆಯನ್ನು ಹೇಗೆ ಮುರಿಯುತ್ತಿರುವರೆಂಬದನ್ನು ವಾಚಕರ ಮುಂದೆ ಇಡುವೆವು:—

೧. ಭರತಿಯ ಕಾಲವಲ್ಲಿ ಸಮುದ್ರದ ನೀರು ಉಕ್ಕೇರುತ್ತದೆ ಆಗ್ಗೆ ದಡದಲ್ಲಿಯ ನೆಲವು ನೀರಿನಿಂದ ಮುಚ್ಚಿ ಹೋಗುತ್ತದೆ. ಮುಂದೆ ಆ ನೀರು ಇಳಿಯಲು ಭೂವಿಯಲ್ಲಿ ಹೆಪ್ಪು ಉಳಿಯುವದು. ಅದನ್ನು ಬಡ ಜನರು ಗಡಿಗೆಯಲ್ಲಿ ತುಂಬಿಕೊಂಡು ಮನೆಗೆ ತರುವರು ಮುಂಬೆ ಒಂದು ದೊಡ್ಡ ಅಂಡೆಯಲ್ಲಿ ಅವನ್ನು ಹಾಕಿ ಮೇಲೆ ನೀರು ಸುರಿದು ಜಿನ್ನಾಗಿ ಕಲೆವಾಡುವರು. ಇದರಿಂದ ಹೆಪ್ಪಿನಲ್ಲಿದ್ದ ಉಪ್ಪೆಲ್ಲ ನೀರಿನಲ್ಲಿ ಬೆರೆಯುವದು. ಮತ್ತು ಆ ಅಂಡೆಯನ್ನು ಸ್ವಲ್ಪ ಹೊತ್ತು ಹಾಗೆ ಇಡಲು ಕೆಸರು ಕೆಳಗೆ ಕೂತು ಉಪ್ಪಿನ ಸ್ವಚ್ಛ ನೀರು ಮೇಲೆ ಉಳಿಯುವದು. ಪುನಃ ಕೆಸರಿನಲ್ಲಿ ಬೆರೆಯದಂತೆ ಆ ನೀರನ್ನು ಬೆಲ್ಲನೆ ಎರಡನೇ ಪಾತ್ರೆಗೆ ಸುರಿಯುವರು. ಎರಡನೇ ಪಾತ್ರೆಯನ್ನು ಹಾಗೇ ಬಿಸಿಲಿನಲ್ಲಿ ಇಡಲು ಅದರಿಂದ ತನ್ನಷ್ಟಕ್ಕೆ ತಾನೇ ಉಪ್ಪಾಗುವದು. ಅನಕಾಶವಿಲ್ಲದಿದ್ದರೆ ಆ ನೀರನ್ನು ಕುದಿಸುವರು. ಅಂದರೆ ಕೂಡಲೇ ಉಪ್ಪಾಗುವದು.

೨ ಸಮುದ್ರದ ಭರತಿಯು ಹುಣ್ಣಿಮೆ, ಅಮಾವಾಸ್ಯೆಗಳಲ್ಲಿ ಹೆಚ್ಚಿರುವದು. ಆಗ್ಗೆ ದಡದಲ್ಲಿರುವ ಕಲ್ಲಿನ ಭಿಡಿಗಳು ನೀರಿನಿಂದ ಮುಚ್ಚಿಹೋಗುವವು ಮುಂದೆ ಇಳಿತವು ಸುರುವಾಗಲು ಆ ಕಲ್ಲುಗಳ ಹೊದರುಗಳಲ್ಲಿಯ ನೀರು ಹಾಗೆಯೇ ಉಳಿದು ಮುಂದೆ ಬಿಸಿಲಿನಿಂದ ಕಾಯ್ದು ತಾನೇ ಉಪ್ಪಾಗುವದು. ಇದು ನಿಜವಾಗಿ ಉಕ್ಕರ ನಿರ್ವಿಕವಾದ ಉಪ್ಪು. ಇದು ಜನರಿಗೆ ಹಾಗೇ ದೊರೆಯಬಹುದೆಂದು ಸುಂಕದ ಖಾತೆಯವರು ಮುಂದೆ ಎರಡು ಮೂರು ದಿನಗಳ ವರೆಗೆ ಎಲ್ಲ ಕಡೆಯಲ್ಲಿಯೂ ತಿರುಗಿ ಅಂಥ ಉಪ್ಪನ್ನು ಸಮುದ್ರದಲ್ಲಿ ಚೆಲ್ಲಿಬಿಡುವರು. ಅವರನ್ನೂ ತಪ್ಪಿಸಿ ಆ ಉಪ್ಪು ತಂದು ಒಡೆ ಜನರು ತಮ್ಮ ಕೆಲಸವನ್ನು ಸಾಗಿಸುತ್ತಿರುವರು.

೩. ಉಪ್ಪು ತಯಾರಿಸುವ ಇನ್ನೊಂದು ಕ್ರಮವೇನೆಂದರೆ. ಉಪ್ಪಿನ ಕಾಠಾರತನೆಯಲ್ಲಿ ಉಪ್ಪು ಮೂಡುತ್ತಿರುವಂಕಿಯೇ ಉಪ್ಪಿನ ಮೇಲೆ ಕರವನ್ನು ಹೇರುವ ಪೂರ್ವದಲ್ಲಿ ಹಲವರು ಸಮುದ್ರದ ದಡದಲ್ಲಿರುವ ತಮ್ಮ ಹೊಲಗಳಲ್ಲಿ ಉಪ್ಪು ತಯಾರಿಸುತ್ತಿದ್ದರು. ಆ ಜವಿಸಾನುಗಳಲ್ಲಿ ಪರಿಶ್ರಮ ಮಾಡಿದರೆ, ಕನಿಷ್ಟ ಪ್ರತಿಯ ಭತ್ಯ ಮತ್ತೆ ಬೆಳೆಯಬಹುದು. ಇಂಥ ಜವಿಸಾನುಗಳಲ್ಲಿಯ ಸಂತ ನೀರನ್ನು ಹಾಗೆಯೇ ಬಟ್ಟರೆ ಬಿಸಿಲಿನಲ್ಲಿ ಸ್ವಲ್ಪ ಉಪ್ಪು ಆಗುವದು.

೪. ಭರತಿಯ ಕಾಲದಲ್ಲಿ ಸಮುದ್ರದ ನೀರು ಏರಿ ಬರುತ್ತಿರುವ ಸ್ಥಳದಲ್ಲಿ ಒಂದು ಗುಂಡಿ ತೆಗೆದು ಇಡುವರು. ನೀರು ಇಳಿದ ಮೇಲೆ ಆ ಗುಂಡಿಯಲ್ಲಿಯ ನೀರು ಆವಿಸಿ ಹತ್ತುವದು. ಮುಂದೆ ಅಲ್ಲಿ ಅದು ಉಪ್ಪಾಗುವದು.

೫. ಸಮುದ್ರವು ಸವಿಾಪದಲ್ಲಿಲ್ಲದ ಪ್ರದೇಶಗಳಲ್ಲಿ ಸವಳು ನೀರಿನಿಂದ ತೂಡಿದ ಹೆಪ್ಪನ್ನು ತಂದು ಉಪ್ಪು ಮಾಡುವದೊಂದು ರೀತಿಯುಂಟು. ಅದು ಉಪ್ಪಿನ ಕಾಯದೆಯು ಬಂದಂದಿನಿಂದ ಬಂದಾಗಿರುವದು

ತವೆ, ನೀರು, ಬಿಸಿಲು, ಬೆಳದಿಂಗಳುಗಳಂತೆ ಪುಕ್ಕಟೆಯಾಗಿ ದೊರೆಯಲು ಯೋಗ್ಯವಾದ ಸಮುದ್ರದ ನೀರಿನಿಂದಾಗುವ ಉಪ್ಪಿನ ಮೇಲೆ ಕರ ಹೇರಿ ಆ ವಿಷಯವಾಗಿ ಕಾಯದೆ ಕಾನೂನುಗಳನ್ನು ಮಾಡಿ ಕೇವಲ ಧನಲೋಭದಿಂದ ಕರವನ್ನು ವಸೂಲು ಮಾಡುತ್ತಿರುವ ಸರಕಾರವೇ ನಿಜವಾದ ಅಪರಾಧಿ ; ಅಗುವದು.

೬. ವ್ಯಾಪಾರದ ಸಲುವಾಗಿಯೂ ಅಲ್ಲ, ಸ್ವಂತದ ಉಪಯೋಗದ ಸಲುವಾಗಿಯೂ ಅಲ್ಲ; ಕೇವಲ ಈ ದುಷ್ಟ ಕಾಯದೆಯನ್ನು ಮುರಿಯಲಿಕ್ಕೆ ಉದ್ದೇಶದಿಂದಲೇ ಯಾರಾದರೂ ಅದನ್ನು ಮುರಿಯಲೆಣಿಸಿದರೆ ಅವಂ ಅಷ್ಟೊಂದು ಗಶಪಾಗಿರುವದಿಲ್ಲ. ಯಾಕಂದರೆ, ಒಂದು ಗಡಿಗೆಯಲ್ಲಿ ಸಮುದ್ರದ ನೀರಿನ್ನು ತಂದು ಕುದಿಸಿ ಉಪ್ಪು ಮಾಡುವ ಸತ್ಯಾಗ್ರಹಿಯು ತೂಡಾ ಈ ಕಾಯದೆಯಿಂದ ಅಪರಾಧಿಯಾಗುವನು.

೭. ಹಿಂದುಸ್ಥಾನದಲ್ಲಿರುವ ವೋರ್ತುಗೀಸರ ವೆಗಾತಿ ತುಗಳಲ್ಲಿ ಉಪ್ಪಿನ ಮೇಲೆ ಕರವಿರುವದಿಲ್ಲ. ಅಲ್ಲಿಂದ ಉಪ್ಪು ತರುವವರೂ, ಅದನ್ನು ತೆಗೆದುಕೊಳ್ಳುವವರೂ ಈ ಕಾಯದೆಯಿಂದ ದೋಷಿಗಳಾಗಗು ವರು.

" ಕರ್ಮವೀರ "

ಮಡಿಕೇರಿನಾಡಿನ ಜನ್ಮ ಮತ್ತು ಸಾಗು ಓ ಟ ರು ಗ ಳ ಲ್ಲಿ,

ಲಾಯರ್ ಐಚಿಟ್ಟಿರ ಸುಬ್ಬಯ್ಯನ ವಿನಂತಿ.

ಮಹಾಶಯರೇ,

ಇದೇ ಏಪ್ರಿಲ್ ತಾರೀಕು 25 ನೇ ಶುಕ್ರವಾರ ಮಡಿಕೇರಿ ನಾಡಿನ ವರವಾಗಿ ಕೊಡಗು ಡಿಸ್ಟ್ರಿಕ್ಟ್ ಬೋರ್ಡಿಗೆ ಹೊಸ ಸೆಂಬರನ್ನು ಚುನಾಯಿಸುವ ಚೇಕಾಗಿರುವುದರಿಂದ, ಸರಕಾರ ಚುನಾವಣೆಯಲ್ಲಿ ನಾನು ಒಬ್ಬ ಉಮೇದುವಾರನಾಗಿ ನಿಂತಿರುತ್ತೇನೆ. ಡಿಸ್ಟ್ರಿಕ್ಟ್ ಬೋರ್ಡಿಗೆ ಹೆಚ್ಚಿನ ಅಧಿಕಾರವನ್ನು ಪಡೆಯುವುದೂ, ಬೋರ್ಡಿಗೆ ಬೈತಾಂದ ಬರುವ ಹುಟ್ಟುವಳಿಯನ್ನು ಸಂಪೂರ್ಣವಾಗಿ ಗ್ರಾಮಾಭಿವೃದ್ಧಿಗೆ ವಿನಿಯೋಗಿಸುವುದೂ, ಅಸ್ಪತ್ರೆ, ವಿದ್ಯೆ, ರಸ್ತೆ ವಗೈ ಇತರ ಜಾಖಲುಗಳಿಗೆ ಸಾಕಷ್ಟು ಹಣ ಒದಗಿಸುವುದೂ, ಇವೇ ನನ್ನ ಮುಖ್ಯ ಉದ್ದೇಶಗಳಾಗಿರುವುವೆ ಆದ್ದರಿಂದ ಈ ದಿನದೆ ನೀವು ಮಡಿಕೇರಿಗೆ ಬಂದು, ನಿಮಗಿರುವ ಅಮೂಲ್ಯವಾದ ಒಂದು ಓಟನ್ನು ನನಗೆ ಕೊಟ್ಟು, ನನ್ನನ್ನು ಜಯಶೀಲನನ್ನಾಗಿ ಮಾಡಿ ದೇಸೇವೆಗೆ ಅನುಕೂಲತೆ ಮಾಡಿಕೊಡಬೇಕಾಗಿ ಕವೆ ಬೆಲ್ಲರನ್ನು ವಿನಯದಿಂದ ಕೇಳಿಕೊಳ್ಳುತ್ತೇನೆ

ಮಡಿಕೇರಿ, ತಮ್ಮ ಕ್ಷೇಮಚಿಂತಕ,
ತಾ. 1—4—1930. ಐಚಿಟ್ಟಿರ ಪಿ. ಸುಬ್ಬಯ್ಯ.

ನಮ್ಮನ್ನು ಯಾರು ಆಳುವರು ?

ಬ್ರಿಟಿಷ್ ಸರ್ಕಾರದ ಆಳಿಕೆಯು ಇಲ್ಲಿ ಹೇಗೆ, ಯಾವ ಪ್ರಕಾರವಾಗಿ, ಯಾರ ಬಲದಿಂದ ನಡೆಯುತ್ತಿದೆ ಎಂಬದನ್ನು ಚೆನಾಗ್ಗಿ ವಿಚಾರಿಸಿದರೆ ಹಿಂದು ಮತು ಸ್ಪಷ್ಟವಾಗುವದು. ಬ್ರಿಟಿಷರು ನಮ್ಮಲ್ಲಿಯ ರಾಜಸಿಪ್ಪ ಒನರ ದ್ವಾರ ನಮ್ಮನ್ನಾಳುತ್ತಿರುವರು. ಪೋಲಧಿಕಾರಿಗಳು ಮತ್ತೆ ಬ್ರಿಟಿಷರು ಆಗಿರುವರೇ ಹೊರತು ವಿಶ್ವವೆಲ್ಲರೂ ನಮ್ಮ ಜನರೇ ಆಗಿರುವರು.

ನಮ್ಮಲ್ಲಿ ಕೆಲವು ಜನರು ಹೊಟ್ಟೆಯ ಸಲುವಾಗಿ, ಇಲ್ಲವೆ ಮೊನದೆ ಸಲುವಾಗಿ ಇಲ್ಲವೆ, ಸರ್ಕಾರದ ಭಯದಿಂದ ಸರ್ಕಾರದವರು ಹೇಳಿದಂತೆ ನಮ್ಮನ್ನು ಆಳುತ್ತಿರುವರು. ತಾವು ಹೀಗೆ ಮಾಡುವುದರಿಂದ ದೇಶವ ಹಿತವಾಗುವದೋ, ಅಹಿತವಾಗುವುದೋ ಎಂಬದರ ವಿಚಾರವನ್ನೇ ಅವರು ಮಾಡುವುದಿಲ್ಲ. ತಮ್ಮ ಹೊಟ್ಟೆಬೊಂಡು ತುಂಬಿದರಾಯಿತು; ತಮಗೆ ರಾವ್ ಸಾಹೇಬ್, ರಾವ್ ಬಹದ್ದೂರ್ ಸಿಕ್ಕಿದರಾಯಿತು ಎಂದು ಸರ್ಕಾರದ ನೌಕರಿ ಮಾಡುವವರೇ ಬಹಳ. ಆ ಜನರು ಈಗ ವಿಚಾರ ಮಾಡುವ ಪ್ರಸಂಗ ಬಂದಿದೆ. ಯಾಕಂದರೆ—ಅವರು ಸರ್ಕಾರದವರ ಕೂಡ ಮಾಡುತ್ತಿರುವ ಸಹಕಾರದಿಂದಲೇ, ಅವರು ಸರ್ಕಾರಕ್ಕೆ ಮಾಡುತ್ತಿರುವ ಸಹಾಯದಿಂದಲೇ ಹಿಂದೂಸ್ಥಾನದ ಗತಿಯು ಹೀನಪಡಗಿರುವುದು. ಈ ರಾಜ್ಯ ಪದ್ಧತಿಯು ನಮ್ಮನ್ನು ಹಾಳು ಮಾಡುತ್ತಿರುವುದು ಎಂಬ ಮಾತು ಈಗ ಸಿದ್ಧವಾಗಿದೆ ಆಂದ ಮೇಲೆ ಈಗ ಸರ್ಕಾರಿ ನೌಕರರು ವಿಚಾರ ಮಾಡುವುದು ಅವಶ್ಯವು.

ಈಗ ಮಹಾತ್ಮಗಾಂಧಿಯವರು ತಮ್ಮ ದಂಡ ಯಾತ್ರೆಯನ್ನು ಪ್ರಾರಂಭ ಮಾಡಿದಂದಿನಿಂದ ಗುಜರಾಥದಲ್ಲಿಯ ಮತೆದಾರರು, ಮುಖಿಗಳು, ಪಟೇಲರು ಸೂರು-ಗಟ್ಟೆ ರಾಜಿನಾಮೆಗಳನ್ನು ಕಳಿಹಿಸಿರುವರು. ಇದರ ಅರ್ಥವೇನು? ಸರ್ಕಾರದ ಬಲ್ಲೆಗೆ ತಾವು ಸಹಾಯ ಮಾಡುವುದು ವಾಪವೆಂದು ಪಟೇಲರು ಈಗ ನಿಸರಗಂಡಿರುವರು. ಆದುದರಿಂದ ಇಂಥ ಸರ್ಕಾರದ ನೌಕರಿಯಿಂದ ಅನಂಗಿಗೆ ಸಹಾಯ ಮಾಡುವದಕ್ಕಿಂತ ಬೇಕೆ ರೀತಿಯಿಂದ ರುಡಿದು ಹೊಟ್ಟೆ ತುಂಬಿಸಿಕೊಳ್ಳುವುದು ಯೋಗ್ಯವೆಂದು ಅವರು ತಮ್ಮ ತಮ್ಮ ಕೆಲಸಗಳನ್ನು ಬಟ್ಟು ಬಿಟ್ಟಿರುವರು

ಸರ್ಕಾರ ನೌಕರಿ ಬಿಟ್ಟರೆ ನಮ್ಮ ಹೊಟ್ಟೆ ಹೇಗೆ ತುಂಬಬೇಕು ಎಂದು ಕೆಲವರು ಚಿಂತೆಮಾಡುತ್ತಿರಬಹುದು. ಆದರೆ ಈ ಚಿಂತೆಯು ವ್ಯರ್ಥವಾದದ್ದು. ಯಾಕಂದರೆ—ಹಿಂದೂಸ್ಥಾನದಲ್ಲಿಯ ೩೧ ಕೋಟಿ ಜನ ಸಂಖ್ಯೆಯಲ್ಲಿ ಎಷ್ಟು ಜನರು ಸರ್ಕಾರಿ ನೌಕರಿಯಲ್ಲಿರುವರು? ಇದನ್ನು ನೋಡಿದರೆ ಆ ಸಂಖ್ಯೆಯು ೨—೩ ಲಕ್ಷಕ್ಕಿಂತ ಹೆಚ್ಚು ಇಲ್ಲ! ಅಂದ ಮೇಲೆ ಆತರಿಗೆ ಬೇರೆ ರೀತಿಯಿಂದ ಹೊಟ್ಟೆ ತುಂಬಿಕೊಳ್ಳುವಿಕ್ಕೆ ಸಾಧ್ಯವಿದೆ. ಆದುದರಿಂದ ಸರ್ಕಾರಕ್ಕೆ ಯೂ ವೆ ತಂತಹ ಸಹಾಯ ಮಾಡದೇ ಇರುವ ನಿಶ್ಚಯವನ್ನು ಎಲ್ಲರೂ ಮಾಡಿಯುದು ಅವಶ್ಯವು. ಹೀಗೆ ಎಂದೆ ಸತ್ಯಾಗ್ರಹ ಸಮರಕ್ಕೆ ಅತ್ಯಂತ ಸಹಾಯವಾಗಿ ಈ ಸ್ವಾತಂತ್ರ್ಯ ಯುದ್ಧವು ತೀವ್ರವೇ ಮುಗಿದು ಸತ್ಯಕ್ಕವಾದ ನಮ್ಮ ವಿಜಯಕ್ಕೆ ಜಯವಾಗುವದು.

ಇನ್ನು ಹಿಂದೂಸ್ಥಾನದಲ್ಲಿ ಸರ್ಕಾರಿ ನೌಕರಿಯಲ್ಲಿ ಎಷ್ಟು ಜನರು ತೊಡಗಿರುವರು ನೆಟ್ಟು, ಇಂಗ್ಲೆಂಡಿನಿಂದ ಬಂದು ಇಲ್ಲಿ ಆಳಬೇಕೆಂದಿರುವ ನಾಹೇಬರು ಎಷ್ಟು ಜನರು ಇರುವರು; ಇದನ್ನು ನೋಡಿದರೆ ನಾವು ಮೇಲೆ ಹೇಳಿದಮಾತುಗಳ ಅರ್ಥ ಮನವರಿಕೆಯಾಗುವದು.

ಇಡೀ ಬ್ರಿಟಿಷ್ ಹಿಂದೂಸ್ಥಾನದಲ್ಲಿ ೩ ಲಕ್ಷ ಜನರು ಮಾತ್ರ ಸರ್ಕಾರಿ ನೌಕರಿಯಲ್ಲಿರುವರು. ಅಂದರೆ ನೂರರಲ್ಲಿ ಒಬ್ಬನು ಮಾತ್ರ ಸರ್ಕಾರಿ ನೌಕರಿಯಿಂದ ಹೊಟ್ಟೆಹೊರ ಕೊಳ್ಳುತ್ತಿರುವನು. ಆವನು ಈ ಆಡಳಿತೆಗೆ ಸಹಾಯ ಮಾಡುವುದಕ್ಕಿಂತ ಸಹಜವಾಗಿ ಬೇರೆ ೯೯ ಜನರು ತಮ್ಮ ಹೊಟ್ಟೆ ತುಂಬಿಕೊಳ್ಳುತ್ತಿರುವಂತೆ ಹೊಟ್ಟೆ ತುಂಬಿಕೊಳ್ಳಬಹುದು.

ಹಿಂದೂಸ್ಥಾನದಲ್ಲಿದ್ದ ನಾಹೇಬರ ಸಂಖ್ಯೆಯನ್ನು ನೋಡಿರಿ. ಸೈನ್ಯದಲ್ಲಿ ೮೩,೦೦೦ ಜನರು ಮತ್ತೆ ಇರುವರು. ಎಕ್ಕ ಸರ್ಕಾರಿ ನೌಕರಿಗಳಲ್ಲಿ ೨೬,೦೦೦ ನಾಹೇಬರನ್ನು ಇರುವೆಂದು ಕಲ್ಪಿಸಿದರೂ ಒಟ್ಟು ಒಂದು ಲಕ್ಷ ನಾಹೇಬರು ಮತ್ತೆ ಇಲ್ಲಿರುವೆಂದು ಲೆಕ್ಕವಾಯಿತು. ಆದರೆ ೩೦೦ ಕ್ಕೆ ಒಬ್ಬ ನಾಹೇಬನಾದನು!

ಇದನ್ನೆಲ್ಲಾ ತಿಳಿದು ನೋಡಿದರೆ ನಮ್ಮ ಜನರೇ ಪರಕೀಯರಾದ ನಾಹೇಬರ ನೌಕರಿ ಮಾಡುತ್ತಿರುವುದೆಂದು ಅವರ ರಾಜ್ಯವು ಇಲ್ಲಿ ನಡೆದಿದೆ. ಸರ್ಕಾರದ ಕೂಡ ನಮ್ಮ ಜನರು ಮಾಡುತ್ತಿರುವ ಈ ಸಹಕಾರವನ್ನು ನಾವು ನಿಲ್ಲಿಸಿದರೆ ನಮಗೆ ಸ್ವರಾಜ್ಯವು ಆವತ್ತೇ ಸ್ವಾಧೀನವಾಗಬಹುದು

" ಕರ್ಮವೀರ."

ಯೆಡೆನಾಲ್ಕುನಾಡು=ಪೆಪ್ಪುನಾಡು ಓಟರುಗಳಲ್ಲಿ ವಿನಂತಿ.

ಮಹನೀಯರೇ,

ಬರುವ ಏಪ್ರಿಲ್ ತಾ. 25 ರಲ್ಲಿ ನಡೆಯಲಿಕ್ಕಿರುವ ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆಗೆ ನೀಲಿನ ನಾಕಗಳ ವರವಾಗಿ ನಾನಿಲ್ಲಿ ಉಮೇದುವಾರನಾಗಿ ನಿಂತಿದ್ದೇನೆ. ಕೊಡಗಿನ ರಾಜಕೀಯ ವಿಚಾರದಲ್ಲಿ ಕೊಡಗಿನವರೆಲ್ಲರೂ ಒಗ್ಗಟ್ಟಾಗಿ ವರ್ತಿಸಬೇಕು ಜಮಿನಾರರು ಸಂಘದ ಕಕ್ಷವನ್ನು ಸಮರ್ಥಿಸುವವನಾಗಿದ್ದೇನೆ. ಡಿಸ್ಟ್ರಿಕ್ಟ್ ಬೋರ್ಡಿನ ಮುಖಾಲಕ ದೇಶ ಸೇವೆ ಆಂದರೆ ನಿಮ್ಮೆಲ್ಲರ ಸೇವೆ ಮಾಡಲು, ಆತ್ಯಾಪಭರಿತ ಯುವಕನಾದ ನನಗೆ ನಿಮ್ಮೆಲ್ಲರ ಓಮಿಗನ್ನು ಕೊಟ್ಟು, ನನ್ನು ಜಯಿಸಲು ಮೊತೆ ಮಾಡಬೇಕಾಗಿ ಕೋರುತ್ತೇನೆ

ಕುಂಬಲಗೇರಿ ಗ್ರಾಮ, ತಮ್ಮ ಸೇವಕ,
ತಾ 27—3—'30 ಮುಕ್ಕಾಟಿರ ಕರುಂಬಯ್ಯ.
4—2

ಪ್ರತಿಜ್ಞಾ ಪತ್ರಿಕೆಗಳ ಮೇಲೆ ಸಹಿ ಮಾಡಿತ ಸ್ವಯಂ ಸೇವಕರಿಗೆ.

ಪ್ರಿಯಬಂಧುಗಳೆ,

ನೀವು ಸತ್ಯಾಗ್ರಹದ ಪ್ರತಿಜ್ಞಾ ಲೇಖದ ಮೇಲೆ ಸಹಿ ಮಾಡಿ ಆದರಂತೆ ನಡೆಯಲು ಒಪ್ಪಿರುವಿರಿ. ಕರ್ನಾಟಕ ಸತ್ಯಾಗ್ರಹ ಮಂಡಳದವರು ಕಾರವಾರ ಜಿಲ್ಲೆಯ ಉತ್ತರೋತ್ತರ ಉಪ್ಪಿನ ಕಾಯದೆ ನುರಿಯ ಎದ್ದಂಶಕ್ಕಾಗಿ ಸ್ವಯಂ ಸೇವಕರ ಪೊಡಲಸಿಮ ಗುರಿಯ ಇದೇ ೧೩ನೇ ತಾರೀಕಿನ ದಿನದ ಬೆಗಿನ 7 ಗಂಟೆಗೆ ಹುಬ್ಬಳ್ಳಿಯಿಂದ ವಾಪಡಾಗಿಯಾಗಿ ಹೊರಡ ಬೇಕೆಂದು ನಿಶ್ಚಯಿಸಿದ್ದಾರೆ.

ಪ್ರತಿಜ್ಞೆಪತ್ರ ಸತ್ಯಾಗ್ರಹಿಗೆ ಕೆಲವು ದಿವಸಗಳ ವರೆಗೆ ನಾವು ಶಿಕ್ಷಣವನ್ನು (ತುಬ್ಬಳ್ಳಿಯಲ್ಲಿ) ಕೊಟ್ಟು ಮುಂದೆ ಕಳಿಸಿಕೆಕ್ಕಗುವುದ್ದೇವೆ. ನೀವು ಎಂದೂ ಹಾಜರಾಗತಕ್ಕದ್ದೆಂಬ ವಿಷಯವಾಗಿ ನಿಮಗೆ ಮುಂಚಿತವಾಗಿಯೇ ತಿಳಿಸಿವೆವು. ಕೂಡಲೆ ನೀವು ಕೆಳಗೆ ಕೊಟ್ಟ ಸಾವಮಾನುಗಳನ್ನು ತೆಗೆದು ಕೊಂಡು ಬರಕಕ್ಕದ್ದು. ನೀವು ಯಾವದೇ ವೇಳೆಗೆ ಹೊರಡ ಬೇಕಾದರೂ ನಿಸ್ಸರಾಗಿರಬೇಕು.

(೧) ೨ ಜೊತೆ ಸದು ವಸ್ತ್ರಗಸು (ಯುನಿಫಾರ್ಮ್) (೨ ಶರ್ಟ್, ೨ ಉದ್ದ ಚೊಣ್ಣಗಳು, ೨ ಟೊಪ್ಪಿಗಳು, ೨ ಲಂಗೋಟಿಗಳು, ೧ ಒಳ ಅಂಗಿ) (ಎಶ್ಟಾ ಆವಿಗೆಳು ಖಾದಿಯವೇ ಆಗಿರತಕ್ಕದ್ದು) (೩) ೧ ಬಗಲ ಥೈಲಿ, (೩) ೧ ನೀಲಿನ ಪಾತ್ರೆ ಅಥವಾ ಲೋಟ ಅಲ್ಯುಮಿನಿಯಮ್ ಅಥವಾ ಪಿತ್ತಾಳೆ ಪಾತ್ರೆ (ಕುಡಿಯುವ ನೀರಿನ ಬಗ್ಗೆ) (೪) ಚಪ್ಪಲಿ (Shoes) (೫) ೧ ಜಮಖಾನ, (೬) ೧ ಕಪ್ಪ ಕಾಟಿಗೆ, (೭) ೧ ಚಾಪೆ, (೮) ೧ ಥೈಕತ್ರ, (೯) ೧ ಟವೆಲ್, (೧೦) ೧ ಸಣ್ಣ ಪ್ಲೇಟು, ಅಲ್ಯುಮಿನಿಯಮ್ (೧೧) ಒಂದು ೧೫ ಅಡಿ ಉದ್ದ ಹಗ್ಗ.

ಈ ಸಾಮಾನುಗಳು ವೈಯಕ್ತಿಕ ಆರಿವೆಗಳನ್ನು ಬಿಟ್ಟು ೧೫ ಪೌಂಡ್‌ಗಿಂತ ಹೆಚ್ಚಿಗೆ ಭಾರವಿರಕೂಡದು. ಸತ್ಯಾಗ್ರಹದಿಂದಲೆ ಹಿಂದೂಸ್ಥಾನಕ್ಕೆ ಪೂರ್ಣ ಸ್ವತಂತ್ರ್ಯ ದೊರಕುವದೆಂಬ ದೃಢ ಭಾವನೆಯಿಂದಲೂ, ಅತ್ಯ ವಿಶ್ವಾಸದಿಂದಲೂ ಮತ್ತು ಸ್ವ ಸಂತೋಷದಿಂದಲೂ ಪ್ರತಿಯೊಬ್ಬ ಸ್ವಯಂ ಸೇವಕನು ಇದರಲ್ಲಿ ಜಾಗ ತೆಗೆದುಕೊಳ್ಳುವನೆಂದು ನಂ ಪೂರ್ಣ ನಂಬಿದ್ದೇವೆ.

ಹುಬ್ಬಳ್ಳಿ, ನಾ. ನಿಜಲಿಂಗಪ್ಪ,
೨೮—೪—೩೦. ಕಾರ್ಯದರ್ಶಿ ಕರ್ನಾಟಕ ಸತ್ಯಾಗ್ರಹ ಸಮಿತಿ)

ಜಮಾನ್ದಾರರ ಸಂಘದ ಪ್ರಚಾರ ಕೆಲಸ.

(೭ನೇ ಪುಟದಿಂದ ಮುಂದುವರಿದದ್ದು)

ಮೆ. ಗಳಾದ ಸಿ. ಯಸ್. ಮೆಂಕಪ್ಪಯ್ಯನವರು, ಕೊಳ್ಳಿಮಾಡ ಕರುಂಬೈಯ್ಯನವರು ಮತ್ತು ಚಮ್ಮಂಡ ಮಾದಪ್ಪನವರು ಹಿಂದೂದೇಶದ ಈಗಿನ ರಾಜಕೀಯ ಚಳವಳಿಯನ್ನು ವಿವರಿಸಿ, ನಿಷಾಪದಾರ್ಥಗಳ ಸೇವನೆಯನ್ನು ಬಿಟ್ಟು ಸ್ವದೇಶಿ ಬಟ್ಟೆಯ ಉಪಯೋಗಕ್ಕೆ ಉತ್ತೇಜನ ಕೊಡದೆ ಹೋದರೆ ದೇಶವು ಉದ್ಧಾರವಾಗಲಾರದೆಂದು ಮುಂತಾಗಿ ಮಾತಾಡಿದರು. ಮೆ. ಕೂಡಂದಿರ ಚಂಗಪ್ಪನವರು ಈಗಿನ ಅಬ್ಕಾರಿ ಇಲಾಖೆಯ ನಿಬಂಧನೆಗಳ ಕಠಿಣತೆಯನ್ನು ವಿವರಿಸಿ, ನಿಷಾ ನಿಷೇಧಕ್ಕೆ ಒತ್ತಾಸೆಯಾಗಿ ಮಾತಾಡಿದರು.

ಬೆಟ್ಟಗೇರಿ ನಾಡಿನ ಗ್ರಾಮಾಂತರಗಳಲ್ಲಿ ಸುತ್ತಿ ವಿಷಯಗಳನ್ನು ನಿಷಾ ನಿಷೇಧವನ್ನು ಸಾಧಿಸಲು ಗ್ರಾಮಸಂಚಾರ ಕಮಿಟಿಗಳನ್ನು ನೇಮಿಸಲು ಈ ಕೆಳಗಿನ ಮಹನೀಯರು ಆರಿಸಲ್ಪಟ್ಟರು ಮೆ ಗಳಾದ 1. ಚಮ್ಮಂಡ ಮಾದಪ್ಪನವರು, 2. ಚಮ್ಮಂಡ ಅಚ್ಚಯ್ಯನವರು, 3 ಕಾಳಿಯಂಡ ಚಿಣ್ಣಪ್ಪನವರ, 4. ಪಂದಿರ ಸೋಮಯ್ಯನವರು, ೨ ಕೊಡಂದೆರ ಚಂಗಪ್ಪನವರು

ಮೇಲ್ಕಂಡ ಎಲ್ಲರೂ ಮೇಲಿನ ಎರಡು ಸಂಗತಿಗಳನ್ನು ಎಲ್ಲರೂ ಬಾರಿಗೆ ತರಲು ಪ್ರಯತ್ನಿಸಬೇಕೆಂದು ಹೇಳಿದರು

ಹುದಿಕೇರಿ ವಿಂಟಿಂಗು.

ಈ ತಾ. 7ರಲ್ಲಿ ಹುದಿಕೇರಿ ಶಾಲೆಯ ಬಳಿ ಮೆ ಇಟ್ಟಿರ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಪಬ್ಲಿಕ್ ವಿಂಟಿಂಗು ನಡೆಯಿತು 150 ಕ್ಕಿಂತ ಹೆಚ್ಚು ಜನರು ಸೇರಿದ್ದರು

ಸ್ವಾ ಬಾದಿ ಉಪಯೋಗದ ಪ್ರಯೋಜನ, ನಿಷಾ ನಿಷೇಧವು ಅಂತಾದ ಗ್ರಾಮಾಭಿವೃದ್ಧಿಯ ಕೆಲಸಗಳನ್ನು ಕುರಿತು ಸಂಘದ ಜನರಲ್ ಸೆಕ್ರೆಟರಿಯವರು ಭಾಷಣ ಮಾಡಿದರು ಮೇಲಿನ ವಿಷಯಗಳನ್ನು, ಈಗಿನ ರಾಜಕೀಯ ಪರಿಸ್ಥಿತಿಯನ್ನೂ ಕುರಿತು ಮೆ. ಗಳಾದ ಕೆ. ಸಿ. ಕರುಂಬೈಯ್ಯನವರು, ಕೆ. ಪಿ. ಚಿಣ್ಣಪ್ಪನವರು ಮತ್ತು ಚಿಪ್ಪುಡಿರ ಪೂಣಚ್ಚನವರು ಮಾತಾಡಿದರು.

ನಿಷಾ ನಿಷೇದದ ಪ್ರಚಾರ ಒಗ್ಗೆ ಈ ಕೆಳಗಿನ ನಾಡು ಕವಿ ಬೆಗಳು ಸೇವಿ ನೆಲ್ಲಟ್ಟವು ಆ ಮೇಗೇರಿನಾಡಿಗೆ—ಮೆ. ಗಳಾದ 1. ಕೊಳ್ಳಿಮಾಡ ಕರುಂಬೈಯ್ಯನವರು, 2. ಕಳ್ಳಿಚಂಡ ಮುದ್ದಯ್ಯನವರು, 3 ಕಾಕಮಾಡ ಗಣಪತಿಯವರು, 4 ವಂಡಿಮಾಡ ದೇವೈಯ್ಯನವರು, 5. ಕೇಕರಿ ಅಚ್ಚಿಯ್ಯನವರ, 6. ಜೋಡುಮಾಡ ಪೂದಯ್ಯನವರು, 7 ಕೋಳೆರ ನಂಜಪ್ಪನವರು ಮತ್ತು 8. ಅಚ್ಚಿಕುಟ್ಟಿರ ಬೋಪೈಯ್ಯನವರು.

ಪೊನ್ನಂಪೇಟೆ ನಾಡಿಗೆ—ಮೆ ಗಳಾದ 1. ಪುತ್ತಮನೆ ವದ್ದಿಯಂಯ್ಯನವರು, 2. ಚಿಪ್ಪುಡಿರ ಪೂವೈಯ್ಯನವರು, 3 ಅಮಣಮಾಡ ನಂಜಪ್ಪನವರು, 4. ಮೂಕಂಗಡ ಕರುಂಬೈಯ್ಯನವರ., 5 ಚಿರಿಯಪಂಡ ಪೊನ್ನಪ್ಪನವರು ಮತ್ತು 6 ಕಾಂಡೇರ ಅಚ್ಚಯ್ಯನವರು

ಶ್ರೀಮಂಗಲ ವಿಂಟಿಂಗು

ಶ್ರೀಮಂಗಲ ಪಬ್ಲಿಕ್ ಬಳಿ ತಾ 8ರಲ್ಲಿ ವಿಂಟಿಂಗು ನಡೆಯಿತು ಮೆ ಮೂಡಚಂಡ ಅಯ್ಯಪ್ಪನವರು ಅಧ್ಯಕ್ಷರಾಗಿದ್ದರು ನಿಷಾ ನಿಷೇಧ, ಖಾದಿ ಪ್ರಚಾರ ಮೊದಲಾದ ಗ್ರಾಮಾಭಿವೃದ್ಧಿಯ ಕಾರ್ಯಗಳನ್ನು ಕುರಿತು ಮೆ ಗಳಾದ ಪಾಲ್ಯಂಡ ಬೆಳ್ಯಪ್ಪನವರು, ಕೊಳ್ಳಿಮಾಡ ಕರುಂಬೈಯ್ಯನವರು, ಚಿಪ್ಪುಡಿರ ಪೂವೈಯ್ಯನವರು, ಪುತ್ತಮನೆ ಮುದ್ದಮ್ಮಯ್ಯನವರು, ಅಜ್ಜಮೂಡ ಮಾದಪ್ಪನವರು ಮತ್ತು ಅಯ್ಯಮಾಡ ಸುಬ್ಬಯ್ಯನವರು ಮಾತಾಡಿದರು ತಾವೆಗೇರಿ ಮಾರ್ಕಾಟಿನಲ್ಲಿ ನಿಷಾ ನಿಷೇಧ ಸ್ವಯಂಸೇವಕ ಕೆಲಸ ನಡಿಸಲು ಈ ಕೆಳಗಿನ ಕಮಿಟಿಯನ್ನು ನೇಮಿಸಲಾಯಿತು. ಮೆ ಗಳಾದ 1. ಅಜ್ಜಮಾಡ ಮಾದಪ್ಪನವರು, 2 ಅಜ್ಜಮಾಡ ಮುದ್ದಪ್ಪನವರು, 3 ಅಯ್ಯಮಾಡ ಸುಬ್ಬಯ್ಯನವರು, 4 ಚೊಟ್ಟೆಯಂಡಮಾಡ ಗಣಪತಿಯವರು ಮತ್ತು 5. ಬಾದುಮಾಡ ಕರುಂಬೈಯ್ಯನವರು

ಪಿ. ಐ ಒಳ್ಳಪ್ಪ,
(ಜನರಲ್ ಸೆಕ್ರೆಟರಿ)

THE NEW CAR!!

The new model A Ford.

The most economical car in the market
Accelerates 5 to 25 M P H in 8½ seconds
Petrol consumption 20–30 miles per Gallon Performance 5 to 60 miles per hour in top 40 M P H in second gear

A Wonderful Hill climber !!!

Easy instalment terms if you prefer
Free demonstration & other particulars
Dealers apply to :—

Mahomedsha Sunder Rau,
ARMS & AMMUNITION Ford Dealer for Coorg,
Siddapura MERCARA

52-38

ಪೊನ್ನಂಪೇಟೆ-ಶ್ರೀಮಂಗಲ ನಾಡುಗಳ ಜಮ್ಮ ಓಟರುಗಳಲ್ಲಿ ಕೊಂಡ ಗಣಪತಿಯು ವಿಜ್ಞಾಪನೆ.

ಒರುವ ಏಪ್ರಿಲ್ ತಿಂಗಳು 25ರಲ್ಲು ನಡೆಯಲಿಕ್ಕಿರುವ ಕೌನ್ಸಿಲ್ ಜುನಾವಣೆಯಲ್ಲಿ ಮೇಲಿನ ಎರಡು ನಾಡುಗಳ ಜಮ್ಮ ಓಟರುಗಳ ಪರವಾಗಿ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರುತನಕ್ಕೆ ನಾನು ಒಟ್ಟು ಉಮೇದುವಾರನಾಗಿ ನಿಂತಿರುತ್ತೇನೆ. ನೀವು ಮಗುಳೆಲ್ಲರು ನಿಮ್ಮ ಓಟುಗಳನ್ನು ನನಗೆ ಕೊಟ್ಟು ನನ್ನನ್ನು ಜಯಶೀಲನನ್ನಾಗಿ ಮಾಡಿ, ಆ ಮೂಲಕ ಡಿಸ್ಟ್ರಿಕ್ಟ್ ಬೋರ್ಡಿನಲ್ಲು ದೇಶದ ಜನರ ಹಿತ ಕಾಪ್ಪಾಡಿಗಾಗಿ ಹೋರಾಡಲು ಅವಕಾಶವನ್ನುಂಟುಮಾಡಿ ಕೂಡಬೇಕಾಗಿ ಕೋರುವ,

ಬಲ್ಲಮಾವಟಿ ಗ್ರಾಮ, ತಮ್ಮ ವಿಧೇಯ.
ತಾ 1–4–'30 3–2 ಬಿ. ಪಿ. ಮೊಣ್ಣಪ್ಪ.

ಪ್ರಕಟಣೆ.

ಅಮ್ಮತ್ತಿ—ತಿತಿಮತಿ ಬಸ್ಸ್ ಸರ್ವಿಸು.

ಸುಬ್ರಮಣ್ಯ ಮೋಟಾರು ಸರ್ವಿಸು ಬೆಳಿಗ್ಗೆ 7—30 ಗಂಟೆಗೆ ತಿತಿಮತಿಯಿಂದ ಹೊರಟು 8—30 ಕ್ಕೆ (ತಾವೆಲ ಮೋಟಾರು ಸರ್ವಿಸು ಪುಡಿಕೇರಿಗೆ ಹೋಗುವ ಹೊತ್ತಿಗೆ ಸರಿಯಾಗಿ) ಅಮ್ಮತ್ತಿಗೆ ಬಂದು, ಅಮ್ಮತ್ತಿಯಿಂದ 11 ಗಂಟೆಗೆ (ಅಂದರೆ ಮಡಿಕೇರಿಯಿಂದ ವೀರರಾಜಪೇಟೆಗೆ ಹೋಗುವ ಕಾವೇರಿ ಸರ್ವಿಸೂ, ಮೈಸೂರು ಮೋರ್ಡನ್ ಸರ್ವಿಸೂ, ಪ್ಯೇಜರ್‌ಪೇಟೆ ಲಕ್ಷ್ಮಣ ಸರ್ವಿಸೂ ವೀರರಾಜಪೇಟೆಗೆ ದಾಟಿದ ನಂತರ) ಹೊರಟು 12 ಗಂಟೆಗೆ ತಿತಿವತಿಗೆ ತಿಗ, ತಿತಿಮತಿಯಿಂದ ಪುನಃ 2½ ಗಂಟೆಗೆ ಹೊರ್ಟಟ 3½ ಗಂಟೆಗೆ ಅಮ್ಮತ್ತಿಗೆ ತಲಪಿ, ಅಮ್ಮತ್ತಿಯಿಂದ ಪುನಃ (ಸೇಲಿನ ಎಲ್ಲಾ ಬಸ್ಸುಗಳು ದಾಟಿದ ನಂತರ) 5 ಗಂಟೆಗೆ ಹೊರಟು 6 ಗಂಟೆಗೆ ತಿತಿಮತಿಗೆ ತಲಪುವೆವು.

ತಾ ೫–3–'30 ಚೇಂಡಂಡ ಪೂಣಚ್ಚ,
4–3. (ಪ್ರೊಪ್ರೈಟರ್)

"ವೇದ ಸಂದೇಶ"

ವಾರ್ಷಿಕ ಚಂದಾ ರೂ 1–8–0.
ಹಾಸಲು ಸಮೇತ ಬಿಡಿ ಸಂಚಿಕೆ 3 ಆಣೆ

ಸಂಪಾದಕರು—ಪಂಡಿತ ಧರ್ಮಾನಂದ ವಿದ್ಯಾವಾಚಸ್ಪತಿ.

ಪ್ರತಿಮಾಸದ ಅಂತ್ಯಮವಾರದಲ್ಲಿ ಪ್ರಕಟವಾಗುವ ಸರ್ವಾಂಗ ಸುಂದರವೂ, ಸರ್ವಜನ ಸುಲಭವೂ ಆದ ಅಖಿಲ ಕರ್ನಾಟಕದಲ್ಲಿ ಏಕಮಾತ್ರ ತಿಳಿಗೆನ್ನಡ ಧಾರ್ಮಿಕ ಸಾಹಿತ್ಯ ಪತ್ರಿಕೆ.

ಪ್ರತಿ ಸಂಚಿಕೆಯಲ್ಲಿಯೂ ೧ ವೇದೋಕ್ತ ಪ್ರಾರ್ಥನೆ ೨ ವೇದೋಪದೇಶ ೩. ಬ್ರಹ್ಮಚರ್ಯ ತತ್ತ್ವ. ೪ ಸತ್ಯವಿಶ್ವಾಸದಾಸರ ಆತ್ಮಕಥೆ ೫ ಸಚಿತ್ರ ಯೋಗ ಸಾಧನಗಳು. ೬ ನೀತಿಕಥಾ ಕುಸುಮಾಂಜಲಿ ೭ ಮಹಾತ್ಮರ ನರ್ಮವಾಣಿ. ೮ ಆರ್ಯಮಹಿಳೆಯರ ಆದರ್ಶ. ೯. ಗುರುಕುಲ ಶಿಕ್ಷಣಕ್ರಮ. ೧೦. ಸಮಾಜ ಸುಧಾರಣಾ ವೃತ್ತಾಂತ. ಇವೇ ಮೊದಲಾದ ವಿಷಯಗಳು ಬರುತ್ತವೆ ಇದಲ್ಲದೆ ಆಗಾಗ್ಗೆ ಸಾಧು ವಾಸ್ವಾನಿ (ಸಿಂಧಿ), ಭಾಯಿ ಪರಮಾನಂದಜಿ, (ಲಾಹೋರು), ಸ್ವಾಮಿ ಸತ್ಯದೇವಜಿ (ಜಮ್ಮು), ಪ್ರೊ. ರಾಮದೇವಜಿ (ಗುರುಕುಲ-ಹರಿದ್ವಾರ), ಪ್ರೊ. ಇಂದ್ರವಿದ್ಯಾವಾಚಸ್ಪತಿ (ಶಾಸ್ತ್ರಾರ್ಥರು 'ಆರ್ಯಮಿತ್ರ', ದಿಲ್ಲಿ), ಮುಂತಾದ ಮಹನೀಯರ ಲೇಖನಗಳ ಭಾಷಾಂತರವೂ ಪ್ರಕಟವಾಗುವದು..

ವ್ಯವಸ್ಥಾಪಕ 'ವೇದಸಂದೇಶ'
5 ಮಂಗಳೂರು.

ರೋಲ್ಡ್ ಗೋಲ್ಡ್ ಭಂಗಾರದ ಗಡಿಯಾರಗಳು.

ಹಾಸಲು ಕ್ರಯ 17–12–0. ಕೆಲವು ದಿನಗಳ ವರೆಗೆ 8–12–0.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಫಿಡೋ ಲೀವರ್ ಮೂವೆಂಟ್ಸ್‌ಗಳಿಂದ (ಸ್ವಿಸ್ ಮೇಡ್) ತಯಾರಿಸಿದೆ



ಇವು ಬರಾರು ಗಂಟೆಯನ್ನು ತೋರಿಸುವುದು ಒಳಗಡೆ ಕಂಪ್ಲಾಸ್ ಇರುತ್ತದೆ. ಇದರ ಕೇಸು ಭಂಗಾರಕ್ಕೆ ಸಮಾನವಾಗಿದೆ. ಇದಕ್ಕೆ 5 ವರ್ಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು. 1 ಕೈಯಲ್ಲಿ ಕಟ್ಟುವ ರಿಸ್ಟ್ ವಾಚ್, 1 ಪಾಕೆಟ್ ವಾಚ್ ಮತ್ತು 1 ಟೇಬಲ್ ಟ್ರಿಂಫೀಸು ಈ 3 ನೇರ ರೂ. 8–12–0. ಮಾತ್ರ. ಈ ಕ್ರಯವು ಕೆಲವು ದಿನಗಳ ವರೆಗೆ ಮಾತ್ರ. ನಂತರ ಸಿಕ್ಕಲಾರದು ರಿಸ್ಟ್ ವಾಚ್ ಮತ್ತು ಟ್ರಿಂಫೀಸು ರೂ. 5–8–0; ರಿಸ್ಟ್ ವಾಚ್ ಮತ್ತು ಪಾಕೇಟ್ ವಾಚ್ ರೂ. 7–0–0.

ವಿಳಾಸ.—ಕೆ. ಎನ್. ಜೆನ್ಸನ್ ಅಂಡ್ ಕೊ.
52—38 ಪೋ. ಸ್ಥ. 1246 ಮದ್ರಾಸ್.

Mangalore Tiles.

Roofing, ridge and flooring Tiles etc will be supplied at my station in Coorg accessible to motor lorries For rates please apply to —

Siddeeka Aboobakar,
Proprietor—Siddeek's Manure Works.
Mercara

ಮಂಗಳೂರು ಪೇಂಚುಗಳು.

1ನೇ ಕ್ವಾಲಿಸ್ ಮೊದು ಹುಡಿ ಮತ್ತು ಸಿಲಿಕಂಡು ನಮ್ಮಲ್ಲಿ ದೊರಕುವದು. ಮೋಟಾರ್ ಶಾರಿ ಹೋಗುವ ಕಡೆಗಳಲ್ಲೆಲ್ಲಾ ಸಾಗಿಸಿ ಕೊಡಲಾಗುವದು. ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಒರಕೊಳ್ಳಿ.

ಸಿದ್ದೀಕ ಅಬ್ಬಬಕರ್,
24–15 ಮಡಿಕೇರಿ.

ನಾಪೋಕ್ಲುನಾಡಿನ ಓಟರುಗಳಲ್ಲಿ ಬೆಟ್ಟೋಳಂಡ ಮಾಚಯ್ಯನ ವಿನಂತಿ.

ಮಾನ್ಯರೇ,

ಇದೇ ಏಪ್ರಿಲ್ ತಾ. 25 ನೇ ಶುಕ್ರವಾರ ನಡೆಯುವ ಡಿಸ್ಟ್ರಿಕ್ಟ್ ಬೋರ್ಡ್ ಜುನಾವಣೆಗೆ ಈ ನಾಡಿನ ಪರವಾಗಿ ನಾನೊಬ್ಬ ಉಮೇದುವಾರನಾಗಿರುತ್ತೇನೆ. ಈ ನಾಡಿನವರು ಬಹುಮತದ ಅಧಿಕಾರ್ಯವಕ್ಕೆ ಅನುಸಾರವಾಗಿ ನಡಕೊಳ್ಳಲು ತಯಾರಾಗಿರುವ ನನಗೆ ನೀವುಗಳು ಆ ದಿನದ ದಯವಿಟ್ಟು ನಿಮ್ಮ ಓಟನ್ನು ಕೊಟ್ಟು ನನ್ನನ್ನು ಜಯಶೀಲನನ್ನಾಗಿ ಮಾಡಿ, ಆ ಮೂಲಕ ಡಿಸ್ಟ್ರಿಕ್ಟ್ ಬೋರ್ಡಿನಲ್ಲು ದೇಶದ ಜನರ ಹಿತ ಕಾಪ್ಪಾಡಿಗಾಗಿ ಹೋರಾಡಲು ಅವಕಾಶವನ್ನುಂಟುಮಾಡಿ ಕೂಡಬೇಕಾಗಿ ಕೋರುವ,

ಬಲ್ಲಮಾವಟಿ ಗ್ರಾಮ, ತಮ್ಮ ವಿಧೇಯ.
ತಾ 1–4–'30 3–2 ಬಿ. ಪಿ. ಮೊಣ್ಣಪ್ಪ.

ವರ್ತಮಾನ ಸಂಗ್ರಹ.

ಒಳದೇಶ.

ಸುಂಟಿಕೊಪ್ಪಲ್ಲಿ ಪುನಹ ಒಬ್ಬನಿಗೆ ಪ್ಲೇಗು ಆಂಟಿದೆ ಯೆಂದು ವರ್ತಮಾನ.

ಈ ತಾ. 7 ಮತ್ತು 10ರಲ್ಲಿ ಮಡಿಕೇರಿಯಲ್ಲಿ ಕುದುರೆ ಓಡೋಟವು ನಡೆಯುತು.

ವೀರಾಜಪೇಟೆ ಹೈಸ್ಕೂಲು ಬೇಸಿಗೆ ಕಾಲದ ರಜಕ್ಕಾಗಿ ಮೇ ತಾ. 25ರ ವರೆಗೆ ಈ ದಿನ ಮುಚ್ಚಲ್ಪಡುವುದು.

ಕೊಡಗಿನ ಉದ್ಯೋಗಸ್ಥರಿಗಾಗಿ ಸೈಕ್ಲಿಂಗ್ ಟಿಸ್ಟ್ ಪರೀಕ್ಷೆಯು ಮಡಿಕೇರಿಯಲ್ಲಿ ಈ ತಾ. 2 ಮತ್ತು 3ರಲ್ಲಿ ನಡೆಯಿತು.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ವಿಷಯಿಗೊಂದು ಈ ತಾ. 18ರ ಸಾಯಂಕಾಲ 6 ಗಂಟೆಗೆ ಜಮಿನ್ದಾರರ ಸಂಘದ ಹಾಲ್‌ನಲ್ಲಿ ನಡೆಯಲಿಕ್ಕಿದೆ.

ಗೋಣಿಕೊಪ್ಪಲಲ್ಲಿ ಪ್ಲೇಗಿನಿಂದ ಒಂದು ಮರಣ ಸಂಭವಿಸಿದರಿಂದ ಕಳೆದ ವಾರದಿಂದ ನೆಂತೆಯು ಜಾವುಕಟ್ಟಿ ಮೇಲ್ಯಯವರ ಗದ್ದೆ ಬಳಿ ನಡೆಸಬ್ಬಡುತ್ತಿದೆ.

ಜಮಿನ್ದಾರರ ಸಂಘದ ಎಗ್ಸಿಕ್ಯುಟಿವ್ ಕಮಿಟಿ ವಿಷಯಿಗೊಂದು ಈ ತಾ. 16ನೇ ಬುಧವಾರ ಮಧ್ಯಾಹ್ನ 2 ಗಂಟೆಗೆ ಮಡಿಕೇರಿಯಲ್ಲಿ ಸಂಘದ ಹಾಲ್‌ನಲ್ಲಿ ನಡೆಯುವುದು.

ನಾಂಗಾಲದ ಗುಡ್ಡಾಂಡ ಮನೆಯವರು ತಮ್ಮ ಮನೆಯಲ್ಲಿ ರಾಮನವಮಿ ದಿವಸವಾದ ಈ ತಾ. 7ರಲ್ಲಿ ರಾಮೋತ್ಸವವನ್ನು ವಿಜೃಂಭಣೆಯಿಂದ ನಡಿಸಿದರೆಂದೂ, ಸುಮಾರು 200ರಷ್ಟು ಜನರು ಸೇರಿದ್ದರೆಂದೂ ತಿಳಿಯುತ್ತೇನೆ

ಪಯ್ಯವಂಡ ಮಡಿಕೆವೀಡಿನಲ್ಲಿರುವ ಕುಂವಾರ ಬೀನಯಪ್ಪನವರ ಮನೆಯಲ್ಲಿ ಒಂದು ಹಸುವು ಹಾಕಿದ ಹೋರಿ ಕರಕ್ಕೆ ನೂಗಿನ ಮೂರು ಸೊಳ್ಳೆಗಳಿವೆಯೆಂದೂ, ಅದು ಆರೋಗ್ಯದಲ್ಲಿದೆಯೆಂದೂ ಒಬ್ಬರು ತಿಳಿಸಿರುತ್ತಾರೆ.

ಜಡ್ಜ್‌ಶಿಪ್ ಕಮಿಷನರವರ ಕೋರ್ಟ್ ಸಬ್ಜೇಕ್ಟ ಕೊಡಗಿನ ಎಂಟ್ಲಾ ಸಿವಿಲ್ ಕೋರ್ಟುಗಳು ಬೇಸಿಗೆ ಕಾಲದ ರಜಿಗಾಗಿ ಈ ತಾ. 22ರಿಂದ ಜೂನ್ ಎರಡರ ವರೆಗೆ ಮುಚ್ಚಲ್ಪಡುವು. ದವು. ರಜೆಯಲ್ಲಿ ತುರ್ತು ಕೆಲಸಗಳಿಗೆ ಎಂದಿನಂತೆ ವಿಚಾರಿಸು ಮಡಿಲಾಗುವುದು.

ಬ್ರೀಜ್ ಆಫ್ ಕಂಟ್ರಾಕ್ಟು ಕರಾರುಗಳಿಗೆ 'ಎಟಿಫ್' ಮೊಹರು ಅಧಿಕಾರವು ಸುಂಟಿಕೊಪ್ಪದ ಜಾಳೆಕಾಡು ತೋಟದ ಮೆ. ಯಂಗ್‌ವನ್ಯಸ್‌ರವರಿಗೆ ಕೊಡಲಾಗಿದೆ: ಸುಂಟಿಕೊಪ್ಪದ ಸಾಂತಗೇರಿ ತೋಟದ ಮೆ ಹುಫ್ಟೀಸ್‌ರವರಿಂದ ಸದರಿ ಅಧಿಕಾರ ತೆಗೆಯಲ್ಪಟ್ಟಿದೆ.

ಕಾಟಕೇರಿ ಸುತ್ತು ಹೊರಮಲೆನಾಡಿನ ಧರ್ಮಕಾಕ್ ದೇವಿ ಚಾತ್ರೆಯಲ್ಲಿ ವಾಣಿಕೆಯಂತೆ ಆರ್ಮಿಸುತ್ತಿದ್ದ ಕೋಣನ ಆಹುತಿಯನ್ನು ಈ ವರ್ಷ ಊರವರು ನಿಲ್ಲಿಸಿದ್ದಾರೆಂದು ಕೇಳಿ ಸಂತೋಷಪಡುತ್ತೇನೆ. ಬೇರೆ ಗ್ರಾಮಸ್ಥರೂ ಇವರ ಉದಾಹರಣೆಯನ್ನು ಹಿಂಬಾಲಿಸುವರಾಗಿ ಕೋರಲಾಗಿದೆ.

ತಾ. 5 ಮತ್ತು 6ರಲ್ಲಿ ನಡೆದ ಕೊಡಗು ಎತ್ಲೆಟಿಕ್ ಅಸೋಸಿಯೇಶನ್ನಿನ ಸ್ಕಿಕೆಟ್ ಟೂರ್ನಮೆಂಟಿನ ಆಟ್ಟರು ಆಟವಲ್ಲಿ ಉಪಾಧ್ಯಾಯರುಗಳ ಟೀಮಿಗೂ, ಮಡಿಕೇರಿ ಕ್ರಿಕೆಟ್ ಕ್ಲಬ್ಬಿನ ಟೀಮಿಗೂ ನಡುವಾಗಿ ರನ್ನುಗಳಾದುದರಿಂದ ಆಟವನ್ನು ಪುನಹ ಬರುವ ವಾರ ಆರುವರೆಂದು ತಿಳಿಯಬರುತ್ತದೆ

ಹುದಿಕೇರಿಯಲ್ಲಿರುವ ರಾಮದಾಸ ಆಶ್ರಮದಲ್ಲಿ ಈ ತಾ. 2ರಿಂದ 8ರ ವರೆಗೆ ಮೈಸೂರು ಪ್ರಾಂತ್ಯದ ಕೃಷ್ಣದಾಸರವರು ರಾಮಾಯಣವನ್ನು ತುತೆಯೆಯ ರೂಪದಲ್ಲಿ ಪಸ್ತಕ ನಡಿಸಿದರು. ಅವ್ಯೆರು ದಿನ ಪೇಟೆಯಲ್ಲಿ ಮೆರವಣಿಗೆಯೂ ಆಯಿತು. ಸುಮಾರು ಒಂದು ಸಾವಿರದಷ್ಟು ಜನರು ನೆರೆದಿದ್ದರು. ಸ್ತ್ರೀಯರ ಸಂಖ್ಯೆಯು ದೊಡ್ಡದಾಗಿತ್ತು.

ರೆಡ್ಡಾಕ್ರಾಸ್ ಸಂಘದವರ ಆಶ್ರಯದಲ್ಲಿ ಈ ತಾ. 5ರಲ್ಲಿ ವೀರಾಜಪೇಟೆಯಲ್ಲಿಯೂ, ತಾ. 10 ಮತ್ತು 11ರಲ್ಲಿ ಮಡಿಕೇರಿಯಲ್ಲಿಯೂ ತಿಕಿತ್ಸೆಗಳ ಪ್ರದರ್ಶನ ಮತ್ತು ಆರೋಗ್ಯ ಸ್ಪರ್ಧೆಗಳು ನಡೆಯಿತು. ಗೃಹಕೈರಿಯಲ್ಲಿ ಒಬ್ಬಾಡಿಗೆ, ತೆಂಗಿನ ಕಾಯಿ ಗುರಿ ಹೊಡೆಯುವುದು, ಟೀ ವಗೈರೆ ಸರಬರಾಯಿ ಅಸ್ತಿತೀಲೆ ಸವಾರಿ ಮುಂತಾದ ವಿಶೇಷ ತಮಾಷೆಗಳೂ ಇದ್ದವು.

ಕಳೆದ ಸೋಮವಾರ ರಾತ್ರಿ ಮಂಗಳೂರಿನ ಶ್ರೀ ಹರಿದಾಸ ಸಾಹಿತ್ಯ ಕರ್ನಾಟಕ ಸಂಗೀತ ಮಂಡಲಿಯವರು ಕೃಷ್ಣ ಲೀಲಾ ನಾಟಕವನ್ನಾಡಿ ಅದರಿಂದ ಬಂದ ಉಕ್ತಿಯಲ್ಲಿ ಖರ್ಚು ಕಳೆದು ಅರ್ಧವನ್ನು ಅಂದರೆ 307 ರೂಪಾಯಿಯನ್ನು ರೆಡ್ಡಕ್ರಾಸ್ ಸಂಘದವರಿಗೆ ಉಚಿತವಾಗಿ ಕೊಟ್ಟರೆಂತಲೂ, ಈ ದಿನ ರಾತ್ರಿ 'ಸಹಾಯಿಮೆ' ಎಂಬ ಕಥೇ ನಾಟಕವನ್ನು ಅಭಿನಯಿಸುವರೆಂದೂ, ಇಚ್ಛೆ ಮಡಿಕೇರಿ ಪಬ್ಲಿಕ್‌ನವರು ಈ ಸುದ್ದಿಯ ವ್ಯವಸ್ಥಾಪಕರಿಗೆ ಒಂದು ಪೆದಲನ್ನು ಕೊಡುವರೆಂದೂ ತಿಳಿಯಬರುತ್ತದೆ.

ಈ ಕೆಳಗಿನ ಮಹಿಳೆಯರು ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿಗೆ (ಎದುರಾಳಿಗಿಲ್ಲದೆ) ಮೆಂಬರುಗಳಾಗಿ ಆರಿಸಲ್ಪಟ್ಟಿರುವರೆಂದೂ ಗಜೆಟ್ಟಿನಲ್ಲಿ ಪ್ರಕಟವಾಗಿದೆ. ಯೂರೋಪಿಯನರಲ್ಲಿ ಪಾಂಬರಾಗಿ ಮೆ. ಎ. ಇ. ಜೆ. ನಿಕಾಲ್ಸನ್‌ರವರು ಮತ್ತು ಲೆಫ್ಟೆನೆಂಟ್ ಕರ್ನಲ್ ಹೆಚ್. ಯಫ್. ಮೂಲಿಚ್ಯಾಂಡ್‌ರವರು, ನಾಮಿನೇಶನ್ ತಾಲೂಕು ಬೋರ್ಡಿನ ಅಧ್ಯಕ್ಷರಾಗಿ ಮೆ. ಜಿ. ಪಿ. ತಿಮ್ಮಯ್ಯನವರು, ಸಂಜರಾಜಪೇಟೆ ತಾಲೂಕು ಸಭಾ ಸದಸ್ಯರಾಗಿ ಮೆ. ಹಂಡ್ಲಿ ಚನ್ನಮಲ್ಲಪ್ಪನವರು, ಮಡಿಕೇರಿ ತಾಲೂಕಿನ ನಾಮಿನಿಯರ ಪರವಾಗಿ ಮೆ. ನಿಡ್ಯಮಲೆ ಮುದ್ದಪ್ಪನವರು, ವಾಡಿವಿಡೆನಾಲ್ಕನಾಡು ನಾಮಿನಿಯರ ಪರವಾಗಿ ಮೆ. ಟಿ ಆರ್. ತಿರುವಂಗಡು ಪಿಳ್ಳೆಯವರು, ಕಿಗ್ಗಟ್ಟುನಾಡು ತಾಲೂಕು ನಾಮಿನಿಯರ ಪರವಾಗಿ ಮೆ ಗಿರಿಗೌಡನ ಸಂಜಪ್ಪಗೌಡರು.

ಹಿಂದೂದೇಶ.

ಏಪ್ರಿಲ್ ತಾ. 12 ಮತ್ತು 13ರಲ್ಲಿ ಮೈಸೂರು ಸಂಸ್ಥಾನದ ದೊಡ್ಡಲಸೆಯು ಕೊರಚರ ಮತ್ತು ಕೊರವರ ಮಹಾಸಭೆಯು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಾದ ಮೆ ಎ. ಸ್. ಅಬ್ದುಲ್ ಲತೀಫರವರ ಅಧ್ಯಕ್ಷತೆಯಲ್ಲಿ ನಡೆಯುವುದೆಂದು ತಿಳಿಯಬಂತ್ತೇವೆ

ಕೋಲಾರದ ಚಿನ್ನದ ಗಣಿಗಳಲ್ಲಿ ಕೂಲಿಕಾರರು ಮುಷ್ಕರ ಹಿಡಿದು ಕೆಲಸಕ್ಕೆ ಹೋಗದೆ ನಿರಾಶಯಪ್ಪಿರುತ್ತಾರೆಂದೂ, ಇದರಿಂದ ಎಲ್ಲಾ ಗಣಿಗಳಲ್ಲಿಯೂ ಮುಮ್ಮುಖವಾಗಿ ಮೈಸೂರು ಗಣಿಯಲ್ಲಿ ಕೆಲಸಕ್ಕೆ ತುಂಬಾ ಅಡಚಣೆಯೊಗಿಸೆಯೆಂದೂ, ಇದರ ಕಾರಣವು ಅಲ್ಲಿನ ವಿದ್ಯುಮೊಗಕ್ಕೆ ಸಂಬಂಧಪಟ್ಟದೇ ಹೊರತು ಜೀರೆಯಲ್ಲವೆಂದೂ ತಿಳಿದುಬಂದಿದೆ.

ಪಂಡಿತ ಮದನ ಮೋಹನ ಮಾಲವೀಯರು ಪರ ದೇಶೀ ಬಟ್ಟೆಗಳ ಬಹಿಷ್ಕಾರದ ಜೆಳವಣಿಗೆ ಮುಂದಾಳತನವನ್ನು ವಹಿಸಿಕೊಂಡಿರುವರು. ಜೊಂಬಾಯಿಯ ವಸ್ತ್ರ ವ್ಯಾಪಾರಿ ಸಂಘದವರು ಇನ್ನು ನೂರು ತಿಂಗಳ ವರೆಗೆ ಪರ ದೇಶೀಯ ಬಟ್ಟೆಗಳನ್ನು ತರುವುದಿಲ್ಲವೆಂದೂ, ಹಾಗೆ ತರುವವರನ್ನು ಬಹಿಷ್ಕರಿಸಬೇಕಂದೂ ತೀರ್ಮಾನ ಮಾಡಿಕೊಂಡಿರುವರು.

ಇಂಗ್ಲೆಂಡಿನ ಮತ್ತೆ ಬಟ್ಟೆಗಳಿಗೆ ರಿಜಿಸ್ಟರ್ಡ್ ಕರ್ಷಣ "ಬ್ರಿಟಿಷ್ ಬಲ್" ಎಂಬ ಬಿರುದನ್ನು ಪಡೆದಿರುವ ಸೇಕ ಸಲಿಸ್ಬರಿಯ ಸಕ್ಕದ ಮುಂದಾಳತನದಲ್ಲಿ ಪರಿತ ವಾಳುಳಿಯವು ಮತ್ತು ಅ ಪಕ್ಷದ 7 ಜನರು ಎಸೆಂಬ್ಲಿ ಮೆಂಬರುಗಳಾಗಿ ರಾಜೀನಾಮೆ ಕೊಟ್ಟಿರುವರು. ಮುಖಾತ್ಮಾ ಗಾಂಧಿಯವರ ಉಪ್ಪಿನ ಕರದ ಸತ್ಯಾಗ್ರಹಕ್ಕೆ ಸೇರುವ ಉದ್ದೇಶ್ಯ ಮೆ. ಯನ್. ಸಿ ಕೆಲ್ಕಾರನರೂ ಎಸೆಂಬ್ಲಿಯ ಮೆಂಬರುತನಕ್ಕೆ ರಾಜೀನಾಮೆ ತೊಟ್ಟಿರುವರು. ಈ ಮುಂದಾಳುಗಳ ರಾಜೀನಾಮೆಯಿಂದ ರಾಂಡ್ ಟೇಬಲ್ ಕಾನ್‌ಫರೆನ್ಸಿನ ಜಯದ ಸಂಭವವು ಒಹಳ ಮಟ್ಟಿಗೆ ಕಡಿಮೆಯಾಗುತ್ತಿದೆ.

ಸತ್ಯಾಗ್ರಹ ಸ್ವಾರಂಭೋತ್ಸವ.

ಮೈಸೂರ್ ಗಾಂಧಿಯವರು ಈ ತಾ. 6ನೆ ಆದಿತ್ಯವಾರ ಸತ್ಯಾಗ್ರಹದ ಕೆಲಸಕ್ಕೆ 81 ಸ್ವಯಂ ಸೇವಕರುಗಳಿಗೆ ವಿಳ್ಯದ್ದನ್ನು ಮುಟ್ಟಿಸಿಕೊಂಡು ದಂಡಿ ಸಮುದ್ರ ತೀರಕ್ಕೆ ಹೋದರು. ಸಾವಿರಾರು ಜನರು ಜಯಘೋಷ ಮಾಡುತ್ತಾ ದಕನ್ನು ಹಿಂಬಾಲಿಸಿದರು. ಅಲ್ಲಿ ಪೊಲೀಸಿನವರ್ಯಾರೂ ಇರಲಿಲ್ಲ. ಮಹಾತ್ಮರು ಮೊದಲು ಸಮುದ್ರದಲ್ಲಿ ಸ್ನಾನಮಾಡಿ, ನಂತರ ಸಂತ್ಯೆಯಲ್ಲಿ ನೀರನ್ನು ತುಂಬಿ, ನಿಮಿಶಕ್ಕೆ ಆಂತಿಪ್ಪಟ್ಟರು. ಇದೇ ಉಪ್ಪಿನ ಖಾಯಿದೆ ಭಂಗದ ಪ್ರಾರಂಭ. 'ಇನ್ನು ಇ ಪ್ರಪ್ಪಳ್ಳನವು ಬೇಕಾದ ಕಡೆ ಉಪ್ಪನ್ನು ತೆಗೆದು ಸಿಂಪ್ರಿ ಕಾಯಿದೆ ಬಿಗಡ ಮಾಡಬಹುದೆಂದು' ಮುಖಾತ್ಮರು ಹುಕುಂ ಕೊಟ್ಟರು. ಮಧ್ಯಾಹ್ನದ ಮೇಲೆ 4 ಗಂಟೆಗೆ ದಂಡಿ ತೀರದಲ್ಲಿ ನಡೆದ ವಿಚಿತ್ರಿಗಿನಲ್ಲಿ ಮುಖಾತ್ಮರು ವ್ಯಾತಃಕಾಲ ತೆಯಾರಿಸಿ ಸ್ವೆಹಸ್ತೆಂದ ದ ಶುದ್ಧೀಕರಿಸಿದ ಸುಮಾರು 2 ಕೆಲಾ ಉಪ್ಪು ಹರಾಜು ಹಾಕಲ್ಪಟ್ಟು ಬೊಂಬಾಯಿಯ ಒಬ್ಬ (೧೩) ವೋಲೀಕನಿಂದ 525 ರೂಪಾಯಿಗೆ ತೆಗೆದುಕೊಳ್ಳಲ್ಪಟ್ಟಿತು. ಗಾಂಧಿಜಿಯವರು ಸೆರೆಯಿಡಿಯಲ್ಪಟ್ಟ ನಂತರ ಕುಮಾರ್ಯಪ್ಪನವರೂ, ಅವರ ನಂತರ ನೆಹೋಜಿನ ದೇವಿಯವರೂ ಸದರಿ ದಳದ ಮುಂದಾಳುಗಳಾಗಲಿರುವರು.

ದಂಡಿಗೆ ಮೂರು ಮೈಲಿ ದೂರದಲ್ಲಿ ಆರ್ ಎಂಎಲ್ ಬಾರ್ಡೋಲಿ ತಾಲೂಕಿನ ನುನೂರು 150 ಸತ್ಯಾಗ್ರಹಿಗಳು ಉಪ್ಪನ್ನು ಮಾಡಿದರು ಅಂಥಾ ಸೆಮರಿಯಾ 30 ಮಣ ಉಪ್ಪನ್ನು ಪೊಲೀಸಿನವರು ಎಳೆದುಕೊಂಡು ಇಟ್ಟರು ಮಂತಾಕಾಗಿ ಇನ್ನೂ ಸುಮಾರು 300 ಸ್ವಯಂ ಸೇವಕರೊಂದಿಗೆ ಉಪ್ಪನ್ನು ತಯಾರಿಸಿದ ನುಹಾತ್ಮಗಾಂಧಿಯವರ ಮಗ ದೇವದಾಸ ಗಾಂಧಿಯವರನ್ನು ಸೆರೆ ಪಿಡಿದು ಆರರಿಗೆ ೦ತಿಂಗಳು ಕಠಿಣ ಸಜೆ ವಿಧಿಸಿರುವರು. ಅವರ ಸ್ನೇಹನನ್ನು ಅವರ ಸಹೋದರ ಮಣಿಲಾಲ್ ಗಾಂಧಿಯವರು ಮುಂದಿನವರು. ಇವರ ಇನ್ನೊಬ್ಬ ಸಹೋದರರು ಹೆಲ್ಲಿಯನ್ನಿ ಸತ್ಯಾಗ್ರಹಿಗಳೊಂದಿಗೆ ಉಪ್ಪನ ಖಾಯಿದೆ ಮುರಿಯುತ್ತಿರುವರು. ಇದೇ ದಿನ ಜೊಂಬಾಯಿಯಲ್ಲಿ ಸತ್ಯಾಗ್ರಹಿಗಳ ಒಂದು ದಳವನ್ನು ನಡಿಸಿದ ಜಮ್ನಲಾಲ್ ಬಜಾಜ್ (ಕೋಟ್ಯಾಧೀಶ್ವರರು) ರವರಿಗೆ 2 ವರ್ಷ ಕಠಿಣ ಸಜೆಯನ್ನು ವಿಧಿಸಿರುವರು; ಮತ್ತು ಅಲ್ಲಿ ಇನ್ನೊಂದು ದಳವನ್ನು ನಡಿಸಿದ ಜೊಂಬಲಾಯಿಯ ಯುವಕರ ಅಭ್ಯುದಿತಿಯ ಮುಂದಾಳತದ ಮೆ ನಾರಾಯಣ್‌ರವರಿಗೆ 1 ತಿಂಗಳ ಸಜೆಯಾಗಿದೆ. ವೀರಂಗನಾ ಎಂಬಲ್ಲಿ ಸತ್ಯಾಗ್ರಹ ಮಾಡಿದ ದಳದ ಮುಂದಾಳತದ ಮೆ ಮಣಿಲಾಲ್ ಕೊತಾರಿಯವರಿಗೆ 6 ತಿಂಗಳ ಸಜೆ, ೨೦೦ ರೂ. ಜುಲುಮಾನೆಯಾಗಿದೆ. ಗುಜರಾತಿನ ಬಟ್ಟ ತ್ರಿಮನ್ಲಿ ಧೂರಣಾಂತ ಮೆ. ಗೋಪಾಲ್‌ದಾಸ್ ದೇಸಾಯಿಯವರಿಗೆ 2 ವರ್ಷ ಕಠಿಣ ಸಜೆ ಮತ್ತು 500 ರೂ. ಜುಲುಮಾನೆಯಾಗಿದೆ. ಕರ್ನಾಟಕದ ಮುಂಬುರಾದ ಗಂಗಾಧರರಾವ್ ದೇಶಪಾಂಡೆಯವರು ಸತ್ಯಾಗ್ರಹಿಗಳು ಮಾಡಿದ ಉಪ್ಪನ್ನು ಮಾರಿದಕ್ಕೆ ಅವರಿಗೆ ನಾಲ್ಕು ವಾರ ಸಜೆ ವಿಧಿಸಲಾಗಿದೆ.

ಒಂಗಾಳ, ಪಂಜಾಬು, ಸಂಯುಕ್ತ ಪ್ರಾಂತ್ಯ, ಮಧ್ಯ ಪ್ರಾಂತ್ಯ ಬೊಂಬಾಯಿ ಸ್ವಾಂತ್ಯಗಳ ಹಲವು ಕಡೆಗಳಲ್ಲಿ ತಾ. ೬ರಲ್ಲಿ ಸತ್ಯಾಗ್ರಹವು ವ್ಯಾಪಾರವಾಗಿದೆ. ಆಂಧ್ರ, ತಮಿಳು ನಾಡು, ಕರ್ನಾಟಿ ನುತ್ತು ಮಲಬಾರು ಪ್ರಾಂತ್ಯಗಳ ಅನೇಕ ಕಡೆಗಳಲ್ಲಿ ತಾ. 13ರಲ್ಲಿ ಸುರುವಾಗುವುದು. ಒಂಗಾಳದಲ್ಲಿ 7000 ಸ್ವಯಂ ಸೇವಕರು, ಗುಜರಾತಿನಲ್ಲಿ 3000 ಜನರೂ, ಮಧ್ಯಪ್ರಾಂತ್ಯದಲ್ಲಿ 500 ಜನರೂ, ಕಾತಿಯಲ್ಲಿ 300 ಜನರೂ, ಜಾದೋಲಿಯಲ್ಲಿ 70 ಜನರೂ, ಸತ್ಯಾಗ್ರಹ ನಡಿಸಲು ಮುಂದೆ ಬಂದಿರ ವರು. ಬೇರೆ ಕಡೆಗಳಲ್ಲಿ ಹಲವರು ಉಪ್ಪಿನ ಖಾನೂನಿಗೆ ವಿರೋಧ ಸೂರಿಸಲು ತಯಾರಾಗುತ್ತಿರುವರು. ಎಲ್ಲಾ ಕಡೆಗಳಲ್ಲಿ ಜನರಲ್ಲಿ ಉತ್ಸಾಹವು ತುಂಬಿ ತುಳುಕುತ್ತಿದೆ.

ವಿದೇಶ.

ಆಯರ್ಲ್ಯಾಂಡಿನ ಪಾರ್ಲಿಮೆಂಟಿನ ಅಪ್ಪರ್ ಹೌಸಿನ ಅಧ್ಯಕ್ಷರ ಜುನಾವಣೆ ನಡೆಯುವರಲ್ಲಿ ಪೊಡಲಿನ ಅಧ್ಯಕ್ಷರಾಗಿದ್ದ ಮೆ. ಕಾಸ್ಗ್ರೇವ್ ರವರೇ ಜಯಶೀಲರಾದರು. ರಿಪಬ್ಲಿಕನ್ ಪಾರ್ಟಿಯ ಮುಂದಾಳಾದ ಮೆ. ಡಿವೇಲರವರು ಸೋಲಿಕ್ಕುಬ್ಬರು.

ಸ್ವೀಡನ್ ದೇಶದ ಮಹಾರಾಜ್ಞಿಯವರು ಇದೇ ತಾ. 4ರಲ್ಲಿ ರೋಮ್ ಪಟ್ಟಣದಲ್ಲಿ ಸ್ವರ್ಗಸ್ಥರಾದರೆಂದು ತಿಳಿಯ ಬರುತ್ತೇದೆ. ಆವರಿಗೆ 68 ವರ್ಷ ವಾಗಿತ್ತು. ಅವರ ಅರ್ಧಾಂಗಿಯವರು ಅವರು ಹುಟ್ಟಿದ ದೆಸೆಯಿಂದ ಅವರು ಇಟಲಿ ದೇಶದವರಾಗಿದ್ದರು.

ಅಲೆಯಂಜೆಸು ಮೂಲಕ ತೈಲವನ್ನೂ, ರೂಪಾಯನ್ನೂ ಸಾಗಿಸುವ ಮೆಲ್ಲಿ ಒಂಗಿನೆಯೊಂದ ಇನ್ನೊಂದೆಡೆಗೆ ತಳಹಿಸುವ ವಿಷಯವು ಇಂಗ್ಲೆಂಡಿನಲ್ಲಿ ನ್ಯಾಯಾಧಿವಾಲಿಯ ಪರಿಶೀಲನೆಯಲ್ಲಿ ಇರುವ ಸಂಗತಿಗಳು. ಸ್ಪಷ್ಟವಾಗಿ ಕೇಳಿ ತ್ಯವೆ. ಕಡಿಮೆ ವೆಚ್ಚದಲ್ಲಿ ರೂಪಾಯನ್ನು ಸ್ಪಷ್ಟವಾಗಿ ಕಾಣುತ್ತಿದೆ.

For Sale.

A house with seven rooms and a large compound with half an acre Coffee situated in a decent ... is for sale for Rs. 5000, or near offer.

Three hundred battles of wetlands with 40 acres of jungle with valuable timber for Coffee, Pepper and Orange cultivation situated near Santhoppa by road side with 30 heads of cattle and a large tiled house is for sale for Rs. 10,000 o. nearest offer.

Please apply for particulars to —

'J.'

C/o. The Manager,

4—1 "Kodagu," Mercara.

ಸೊನ್ನೆಪೇಟೆನಾಡು ಮತ್ತು ಶ್ರೀ ಮಂಗಲನಾಡು ಜಮ್ಮ ಓಟರುಗಳಲ್ಲಿ ಜೆಪ್ಪುಡಿರ ಪೂವೈಯ್ಯನ ವಿನಂತಿ.

ದೇಶಾಭಿಮಾನಿಯೂ,

ಈಗ ಬರುವ "ಕೌನ್ಸಿಲು" ಮೆಂಬರುತನಕ್ಕೆ ನನ್ನ ಮೈ ಕೈಗೆಟ್ಟುನಾಡಿನ ಜಮ್ಮಡ ಪರವಾಗಿ ನಾನು ನಿಲ್ಲುವ ಉಮೇದ್ವಾರನಾಗಿ ನಿಂತಿರುತ್ತೇನೆ. ಮೆಂಬರರ ಜುನಾವಣೆಯು ಇದೇ ವಿಶ್ವಿಲ್ ತಾ. 25ರಲ್ಲಿ ನಿ ಮ್ಮೆಲ್ಲರ ಓಟು ಮಾಲಿಕ ನಡೆಯುವುದು ಸದರಿ ಜುನಾವಣೆ ತಾರಾದಲ್ಲಿ ತಮ್ಮ ಸ್ವಾತಂತ್ರ್ಯ ಹಕ್ಕನ್ನು ಗಿರವಿ ಒಟ್ಟಿಗಳಿಂದ ಬಂದು ಓಟನ್ನು ಸ್ವೆಚ್ಛೆಯಿಂದ ಕೊಟ್ಟು ತಕ್ಕವರಿಂದ ಸನ್ಮಾನ ಪಡೆಯಲು ಮನವಿ ಕೊಳ್ಳುತ್ತೇನೆ.

ವಿನಯದಿಂದ ಕೇಳಿಕೊಳ್ಳುವುದೇನೆಂದರೆ ಮೆಲ್ಲಿಯರ ಓಟಿನಿಂದ ಕೆಳಿಕೆಗೆನ್ನುತ್ತೇನೆ ಕಮ್ಮಿಲ್ಲರ ಓಟಿಂತಿಂದ ನಾನು ನನ್ನ ಹಿರಿಯರಂತೆ ಸದಾ ದೇಶ ಸೇವೆಯನ್ನು ಆರಿಂಗ ಕೈಕೆ.

ಪೊನ್ನಂಪೇಟೆ ಸದಾ ಕೃಪಾಭಿಲಾಷಿ,

3—2. ಸಿ. ಯುಸ್. ಪೊನ್ನಯ್ಯ.

WANTED.

A head clerk on Rs 50—2½—75. Candidates should at least have passed the S. S. L. C. the intermediate examination will be preferred. Apply to the undersigned with testimonials not later than 1—5—1930.

P. C. Uthaiya,
Head Master,
3—2 Govt. High School.

ಪತ್ರವ್ಯವಹಾರ.

ಬಾತ್ಮಿದಾರರು ಪಡುವ ಅಧಿವಾಸ್ಯ ಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ.]

ಅಬ್ಬಿ ಮಠ.

ಕೊಡಗು ಪತ್ರಿಕೆಯ 9ನೇ ಸಂಪುಟದ 27ನೇ ಸಂಚಿಕೆಯಲ್ಲು ಅಬ್ಬಿಮಠದ ವಿಷಯ ಬರೆದ ಬಾತ್ಮಿಯನ್ನು ಓದಿ ನೋಡಲಾಯಿತು. ಬಾತ್ಮಿದಾರರು ಪಡುವ ಅಧಿವಾಸ್ಯವು ನ್ಯಾಯವಾದದ್ದಾಗಿದೆ.

ಕೊಡಗಿನ ಪೂರ್ವದ ವೀರಶೈವ ರಾಜರು ಈ ದೇಶದ ವೀರಶೈವ ಭಕ್ತ ಮಹೇಶ್ವರರ ಶ್ರೇಯೋಭಿವೃದ್ಧಿಗಾಗಿ ಸ್ಥಾಪಿಸಿದ ಮಠವನ್ನು ಯಾರೊಬ್ಬರೂ ತಮ್ಮ ಸ್ವಂತ ಹಕ್ಕಿನ ಆಸ್ತಿಯೆಂದು ಭಾವಿಸಬಾರದು. ರಾಜರು ದೇಶಿಯರಿಗೇನೇ ಹಕ್ಕಾಗಿ ಎಂದೆ ಸ್ಥಾಪಿಸಿದ ಮಠವಾದದ್ದರಿಂದ ದೇಶಿಯರಿಗೇನೇ ಇಂ ಆ ಮಠಗಳನ್ನು ನ್ಯಾಯರೀತಿಯಿಂದ ನಡಿಸುವ ಹಕ್ಕು ಇರುವ ಾಗಿದೆ. ಇಂಥಾ ನ್ಯಾಯವು ಮಠಾಧೀಶರಿಗೆ ತಿಳಿದೂ ಡಾ ಅವರು ಇಂಥಾ ಮಕ್ಕಳನ್ನು ಪರಭಾರೆ ಮಾಡಲಿ ್ಯಾಗಲೀ ಕೊಡುಕೊಳ್ಳಲಿಕ್ಕಾಗಲೀ, ವಿವಾಹಾದಿ ಮಾಡಿದ ಆದು ಮಂಜೂರಾಗಲಿಕ್ಕಿಲ್ಲ. ಯಾತಕಂದರೆ—ಕೊಡಗಿನ ೀರಶೈವ ಮಠಗಳು ದೇಶಿಯರ ಹಕ್ಕಾಗಿರುವದಾಗಿದೆ. ಸ ಆ ಮಠದಲ್ಲು ಕಾರ್ಯನಿರ್ವಹಿಸಲಿಕ್ಕೆ ದೇಶಿಯ ವೀರಶೈವರು ೀಮಿಸಿದಂಥ ಒಬ್ಬರು ತಮ್ಮನ್ನು ಕಾರ್ಯನಡಿಸಲಿಕ್ಕೆ ಬಿಟ್ಟು ೊಟ್ಟ ಮತ್ತಿಕ್ಕೆ ಪರಭಾರೆ ಮಾಡುವ ಹಕ್ಕು ಆವರಿಗಿಲ್ಲ ೆಂದು ನಾನು ಒತ್ತಿ ಹೇಳುವವನಾಗಿದ್ದೇನೆ. ಹಾಗಿದ್ದರೆ ರಾ ಸರ ಆಳ್ವಿಕೆಯು ತಪ್ಪಿದ ಈ ವರೆಗೆ ಕೊಡಗಿನ ಅನೇಕ ಮಠ ಗಳನ್ನು ದೇಶಿಯರ ಕೈತಪ್ಪಿಸಿ ಬಿಡುತ್ತಿದ್ದರು.

ಈಗ ಅಬ್ಬಿಮಠಕ್ಕೆ ಪಿತ್ಯಸಡೆದ ಚಿಕ್ಕ ವಯಸ್ಸಿನ ಸನ್ಯಾ ಿಗಳೂ, ಇವರ ಅಣ್ಣಾಂದಿಯರೂ ಸಹ ಅಬ್ಬಿಮಠವನ್ನು ಸ ಾತಂತ್ರೀಕರಿಸಿಯೆ ವಿವಾಹಾದಿಗಳಲ್ಲಿ ರುವದು ನಿಜವಾದರೆ ಅಂಥಾ ವರನ್ನು ಕೊಡಗಿನ ವೀರಶೈವ ಭಕ್ತ ಮಹೇಶ್ವರರು ಮತ್ತು ದೇಶಿಯರು ಸಹ ಸೇರಿ ಮಠದ ಅಧಿಕಾರದಿಂದ ನಿವೃತ್ತಿಗೊಳಿ ಸಿ ಬೇರೊಬ್ಬರಿಗೆ ಮಠದ ಅಧಿಕಾರ ಕಾರ್ಯನಿರ್ವಾಹಕತ್ವವನ್ನು ಯಾತಕ್ಕೆ ವಹಿಸಿಕೊಡಬಾರದು ಎಂಬ ವಿಷಯಕ್ಕೆ ತಕ್ಕ ಜವಾ ಒನ್ನು ಅಶಿಸುವವನಾಗಿದ್ದೇನೆ.

'ಕೊಡಗು ಮಠಾಧಿನೂನಿ.

ವೀರಾಜಪೇಟೆಯಲ್ಲಿ ಫ್ರೀ ರೀಡಿಂಗ್ ರೂಮ್.

ಮಹಾಶಯರೇ,

ಕೊಡಗು ದೇಶದ ಈಗಿನ ಸ್ಥಿತಿಯು ಬಹಳ ವಿಷಾದ ಕರವಾಗಿದೆಯೆಂಬದನ್ನು ಪದೇ ಪದೇ ಹೇಳುವ ಅವಶ್ಯವಿಲ್ಲ ವಾದರೂ ಪಂಗಡಭೇದಗಳಿಂದಲೂ, ಜಾತಿ ಮೂತ್ಸರ್ಯದಿಂ ದಲೂ, ಜನರ ಸ್ವಾರ್ಥತೆಯಿಂದಲೂ, ಕೋಮುವಾರು ಸ ಭೆಗಳಿಂದಲೂ ನಮ್ಮ ಈ ಪುಟ್ಟ ದೇಶದಲ್ಲಿ ಒಗ್ಗಟ್ಟು ಮುರಿದು ಹೋಗಿ ಒಡಕು ನೆಲೆಗೊಂಡಿದೆ. ಇಂಡಿಯಾ ದೇಶದ ಎ ಲ್ಲಾ ಇಷ್ಟೆಗಳಲ್ಲಿಯೂ ಜನರು ಪ್ರತಿಯೊಬ್ಬರನ್ನೂ ವಾತ್ಸಲ್ಯ ಪ್ರೇಮದಿಂದ ಕಾಣುತ್ತ ಸ್ವರಾಜ್ಯ ಸ್ಥಾಪನೆಗಾಗಿ ಹೋರಾ ಡುತ್ತಿರುವ ಸಮಯದಲ್ಲಿ ನಾವೆಲ್ಲರೂ ಬೀದಿ ನಾಯಿಗಳಂತೆ ನಮ್ಮ ನಮ್ಮ ಸ್ವಂತ ವಿಳಿಗೆಗಾಗಿ ಕಚ್ಚಾಡುತ್ತಿದ್ದೇವೆ. ಹೊ ರಗಣ ಅವಸ್ಥೆಗಳಲ್ಲಂತೂ ನಾವು ಮೂಕರಾಗಿದ್ದೇವೆ. ಈ ಸ್ಥಿತಿಯಲ್ಲಿ ಹುಳಿತು ಹೋಗಿರುವ ನಮಗೆ ಅಲ್ಲಲ್ಲಿ ಸಂಘಗಳೂ, ಮಂಡಲಿಗಳೂ, ವಾಚಕ ಶಾಲೆಗಳೂ, ಫ್ರೀ ರೀಡಿಂಗ್ ರೂಮುಗಳೂ ಇದ್ದರೆ ನಮ್ಮ ಅಜ್ಞಾನಾಂಧಕಾರವು ತೊಲಗಿ ನಮಗೆ ಜ್ಞಾನೋದಯವಾಗುವದರಲ್ಲಿ ಲೇಶ ಮಾತ್ರವೂ ಸಂ ಶಯವಿಲ್ಲ. ಇದರಿಂದ ಪರಸ್ಪರ ಸ್ನೇಹವು ಹುಟ್ಟಿ, ಎಲ್ಲರ ಲ್ಲಿಯೂ ಸಮಸಂಭಾವವು ಹೆಚ್ಚಿ, ಪಂಗಡಭೇದಗಳೂ, ಜಾತಿ ವೈಷಮ್ಯಗಳೂ ಮೂಲೆಗೊತ್ತಲ್ಪಟ್ಟು ದೇಶದಲ್ಲಿ ಶಾಂ ತತೆಯು ತುಂಬಿ ತುಳುಕುವುದು. ಆದರಿಂದ ಮಡಿಕೇರಿಯಲ್ಲಿ ರುವಂತೆ ವೀರಾಜಪೇಟೆಯಲ್ಲಿಯೂ ಸಹ ತತ್ಕಾಲಕ್ಕೆ ಕನಿಷ್ಟ ತರದಲ್ಲಿ ಒಂದು ಫ್ರೀ ರೀಡಿಂಗ್ ರೂಮ್ ಅವಶ್ಯವೆದೆಯೆಂದು ನಮ್ಮಲ್ಲಿ ಕೆಲವು ಯುವರ ಅಭಿವಾಸ್ಯವಾಗಿದೆ.

ಈ ಅಭಿವಾಸ್ಯವು ತ್ವರಿತವಾದರೂ ಇವನ್ನು ಕಾರ್ಯ ಕ್ಕೆ ತರುವುದು ಸುಲಭವಲ್ಲ. ವೀರಾಜಪೇಟೆಯಲ್ಲಿ ಒಂದು ಫ್ರೀ ರೀಡಿಂಗ್ ರೂಮನ್ನು ಸ್ಥಾಪಿಸಬೇಕಾದರೆ ಎರಡು ತರ ದ ಅಡಚಣೆಗಳಿವೆ. ಮೊದಲನೆಯದು ಹಣದ ಅಡಚಣೆಯೂ ಗಿದೆ. ಎರಡನೇಯದು ಫ್ರೀ ರೀಡಿಂಗ್ ರೂಮನ್ನು ಸ್ಥಾಪಿಸಿ ದರೂ ಸಹ ಅದು ಯೋಗ್ಯವಾದ ರೀತಿಯಲ್ಲಿ ಉಪಯೋಗಿ ಗಿಸಲ್ಪಡುವುದೇ? ಅಥವಾ ಗಣಪತಿ ವಾಚನಾಲಯ ದುರಂತೆ ಐಂ ದೆರಡು ವರ್ಷಗಳಲ್ಲಿಯೇ ಮುಚ್ಚಿ ಹೋಗುವುದೇ?

ಹಣದ ಅಡಚಣೆಯು ಇಂದಿನ ಎತ್ತುವದರಿಂದ ನಿವಾರ ಣೆ ಕ್ಕಾಗಬಹುದು. ಫ್ರೀ ರೀಡಿಂಗ್ ರೂಮಿಗೆ ಬೇಕಾದ ಪತ್ರಿಕೆಗಳನ್ನು ಕೊಡಗಿನ ವರ್ತ ಮಾನ ಪತ್ರಿಕೆಗಳನ್ನು ಕಡಿಮೆ ಬೆಲೆಗೆ ಕೊಡುವ ಏರ್ಪಾಡು ಮಾಡಿದರೆ ಸಾಲ್ಕ ತರದ ಕೋಮಿನ ಚಾತಿಗೆಯನ್ನೂ ಸಹ ಇಂದಾ ವೇ ಸ್ಥಾಪಿಸಬೇಕಾಗಿರುವದರಿಂದ ಶಾಶ್ವತ ಹುದುಗರಿಗಿ ಯೇ ಸ್ಥಾಪಿಸಬೇಕಾಗಿರುವದರಿಂದ ಶಾಶ್ವತ ಹುದುಗರಿಗಿ ಲೆಯಂತೆಯೂ ಚಂದ ವಿಧಿಸಬೇಕೆಂದು ಕೆಲವರ ಸೂಚನೆಯೂ ಗಿದೆ. ಈ ಸಂದರ್ಭದಲ್ಲಿ ಜವಾನ್ದಾರರ ಸಂಘದವರು ಕೆಲ ವು ವರ್ಷಗಳಿಗೆ ಹಿಂದೆ ಗಣಪತಿ ಪುಸ್ತಕಾಲಯಕ್ಕೊಸ್ಕರ ರವಾ ಗಿ ಉಪಯೋಗಿಸುತ್ತಿದ್ದ ವೀರಾಜಪೇಟೆಯಖಾದಿ ಭಂಡಾರ ದ ಮಹಡಿಯನ್ನು ತಮ್ಮ ಉದಾರ ಮನಸ್ಸಿನಿಂದ ಫ್ರೀ ರೀಡಿ ಂಗ್ ರೂಮ್ ಮಾಡಲು ದಯಪಾಲಿಸಿದರೆ ಆವರು ದೇಶಕ್ಕೆ ಒಂದು ದೊಡ್ಡ ಸೇವೆಯನ್ನು ಮಾಡಿದಂತಾಗುವುದು.

ಆದರೆ ಸದರಿ ಪುಸ್ತಕಾಲಯದಂತೆ ನಾವು ಈಗ ಸ್ಥಾಪಿ ಸಬೇಕೆಂದು ಹೇಳುವ ಫ್ರೀ ರೀಡಿಂಗ್ ರೂಮ್ ಸಹ ತತ್ಕಾಂ ತಿ ಉಪಯೋಗಿಸಲ್ಪಡದೆ ತೀರ್ಪುದಲ್ಲಿಯೇ ಅದೃಶ್ಯವಾಗಬಹು ದೆಂಬುದೇ ಪ್ರಬಲವಾದ ಸಂಶಯ. ಇದರ ವಿಷಯದಲ್ಲಿ ವಾ ಚನಾಲಯಕ್ಕೂ, ಪುಸ್ತಕಾಲಯಕ್ಕೂ ಇರುವ ವ್ಯತ್ಯಾಸ ವನ್ನು ತಿಳಿದುಕೊಂಡರೆ ನಾವು ಹೆಚ್ಚು ಭಯಪಡಬೇಕಾದ ಅವಶ್ಯವಿಲ್ಲ. ವರ್ತಮಾನ ಪತ್ರಿಕೆಗಳನ್ನೋದುವಷ್ಟು ಅಭ ರುಚಿಯು ಕೆಲವರಿಗೆ ಪುಸ್ತಕಗಳನ್ನೋದುವುದರಲ್ಲಿ ಇರ ಅರದು. ದೇಶದಲ್ಲಿ ನಡೆಯುವ ಅನಸ್ಥೆಗಳನ್ನು ತಿಳಿದು ಕೊಳ್ಳಬೇಕೆಂಬ ಅಭಿಲಾಷೆಯು ಎಲ್ಲರಿಗೂ ಇರುವುದರಿಂದ ವರ್ತಮಾನ ಪತ್ರಿಕೆಗಳು ಉಪ್ಪು, ಮೆಣಸ್ಸಿನಂತೆ ಜೀವನದ ಒಂದು ಭಾಗವಾಗಿದೆ. ಅದೂ ಅಲ್ಲದೆ ಕಳೆದ ಕೆಲವು ವರ್ಷ ಗಳಿಂದ ಇಂಡಿಯೂ ದೇಶದ ರಾಜಕೀಯ ಚಳವಳಿಯ ಹೆಜ್ಜು ತೀವ್ರ ರೂಪಕ್ಕೆ ಬರುತ್ತಿರುವುದರಿಂದಲೂ, ವೀರಾಜಪೇಟೆ ಸೆಂತ್ರುಮುಕ್ಕಲಿನ ಪ್ರದೇಶಗಳಲ್ಲಿ ಕಾಲೇಜು ಮತ್ತು ಶಾಲಾ ವಿದ್ಯಾರ್ಥಿಗಳ ಸಂಖೆಯು ದಿನೇ ದಿನೇ ಹೆಚ್ಚುತ್ತಿರುವುದರಿಂದ ಲೂ, ವೀರಾಜಪೇಟೆಯಲ್ಲಿ ಈಗಿರುವ ವಿಕ್ಟೋರಿಯ ಕ್ಲಬ್ಬಿಗೆ ವಿದ್ಯಾರ್ಥಿಗಳೂ, ಮತ್ತು ಇತರ ಬಡ ಜನರೂ ಮೆಂಬರಾಗ ುವ ತಕ್ಕರಲ್ಲದ್ದರಿಂದಲೂ, ಸರ್ವರೂ ಒಂದು ಫ್ರೀ ರೀಡಿಂಗ್ ರೂಮಿಗೆ ಹೂಬಲಿಸುತ್ತಿದ್ದಾರೆ. ಆದ್ದರಿಂದ ವೀರಾಜಪೇಟೆ ಯಲ್ಲಿ ಫ್ರೀ ರೀಡಿಂಗ್ ರೂಮ್ ತೆರೆಯಲ್ಪಟ್ಟರೆ ಅದಕ್ಕೆ ಏನೊಂದು ಕುಂದುಕೊರತೆಯು ಬರಲಿಕ್ಕಿಲ್ಲವೆಂದು ದೃಢವಾ ಗಿ ಹೇಳಬಹುದು.

ಈ ಎಲ್ಲಾ ಸೂಚನೆಗಳನ್ನು ಚರ್ಚಿಸಲು ಈ ವರ್ಷ ವೀ ರಾಜಪೇಟೆಯಲ್ಲಿ ನಡೆಯುವ ಜವಾನ್ದಾರರ ಸಂಘದ ವಾ ರ್ಷಿಕ ವಿಷಯಿಂಗಿನ ದಿವಸದೇ ಅನುಕೂಲವಾದ ದಿವಸವೆಂದು ಕೆಲವರೂ ಅಭಿಪ್ರಾಯ ಪಟ್ಟಿರುವುದರಿಂದ ಫ್ರೀ ರೀಡಿಂಗ್ ರೂಮನ್ನು ಸ್ಥಾಪಿಸಬೇಕೆಂದು ಇಚ್ಛಿಸುವ ಮಹನೀಯರೂ, ಎ ಲ್ಲಾ ಕಾಲೇಜು ಮತ್ತು ಶಾಲಾ ವಿದ್ಯಾರ್ಥಿಗಳೂ ವೀರಾಜ ಪೇಟೆಯಲ್ಲಿ ಸದರಿ ದಿವಸ ತಪ್ಪದೆ ಹಾಜರಾಗಬೇಕೆಂದು ಹಾ ರೈಸಲಾಗಿದೆ

ಕೆ. ಯಂ. ಯನ್.

ದೇಶದ ಅಭಿವೃದ್ಧಿ.

ಕೋಮುವಾರು ಸಭೆಗಳ ಸ್ಥಾಪಕರಲ್ಲಿ ವಿಜ್ಞಾಪನೆ.

ಯಾವ ಸಭೆಯೇ ಆಗಲಿ ಭೂತದಯೆ ಸರ್ವತ್ರಾತ್ಮಪಲ್ಲ ದೆ, ಕೀರ್ತಿಯ ಅಪೇಕ್ಷೆಯಿಂದಾಗಲಿ, ಉದ್ಯೋಗದ ಆಸೆ ಯಿಂದಲಾಗಲಿ ಅಧವ ಹಣ ಸಂಪಾದನೆಯ ದೃಷ್ಟಿಯಿಂದಾ ಗಲಿ ಸ್ಥಾಪಿಸಲ್ಪಡುತ್ತೋ ಅಂಥಾ ಸಭೆಯಿಂದ ಜನತಾಗ ಕ್ಕೂ ದೇಶಕ್ಕೂ ತುಂಬಾ ಹಾನಿಯು ತಟ್ಟದೆ ಇರಲಾರದು ಎಂಬದು ಖಂಡಿತ. ಅಲ್ಲದೆ ಇಂಥಾ ಸಭೆಯನ್ನು ಸರಕಾರ ದವರ ಮಂಜೂರಾತಿಗೆ ಒಳಪಡಿಸಿ ಉದ್ಯೋಗಸ್ಥರು ಮೆಂಬ ರುಗಳಾಗಿ ಸೇರುವಂತಾಗಲಿ, ಇಂಥಾ ಸಭೆಯ ಮೆಂಬರುಗಳಿ ಗೆ ಸರಕಾರಿ ಉದ್ಯೋಗ ಕೊಡುವಂತಾಗಲಿ ಅವಕಾಶವಿದ್ದ ಲ್ಲಿ ಇಂಥಾ ಸಭೆಯಿಂದ ಜನರ ಆಚಾರ ವಿಚಾರಗಳು ಸೇರಿ ವಾಗುತ್ತೆಂಬದು ನಿಜವಲ್ಲ. ಜನರು ನೆಮ್ಮದಿಗೆ ಬರುವಂತೆ ಮಾಡುವದಕ್ಕಿಂತ ಹೆಚ್ಚಾಗಿ ಅಮ ಹಾನಿಯನ್ನು ಉಂಟುಮಾ ಡಿಯೇ ಮಾಡುತ್ತೆ. ಇಂಥಾ ಸಭೆಗಳಿಗೆ ಸೇರಲು ಇಷ್ಟವಿಲ್ಲ ದವರನ್ನು ಸೇರುವಂತೆ ಮಾಡುವ ಒಂದು ತರದ ಬಲತ್ಕಾರ ಇಲ್ಲವೆಂತ ಬೇಳಲಿಕ್ಕಾಗುವದಿಲ್ಲ. ಮತ್ತು ಸಭೆಯ ಮೆಂಬ ರುಗಳಿಗೂ, ಮೆಂಬರರು ಅಲ್ಲದವರಿಗೂ ಅಂಥಾಗಬಹುದಾ ದ ವ್ಯವಹಾರಗಳಲ್ಲಿ, ಮೆಂಬರರು ಅಲ್ಲದವರಲ್ಲಿ ನ್ಯಾಯ ವಿದ್ದರೂ ನ್ಯಾಯವಿರುದ್ಧವಾಗಿಅವರೆಂತ ಯಾರಿಗೂ ಬಾವಿಸಿ ಕೊಡದು. ಇಂಥಾ ಸಭೆಗಳಲ್ಲಿ ನ್ಯಾಯವೂ, ಧರ್ಮವೂ ಹೆ ಚ್ಚುವದರ ಬದಲು, ಉದ್ಯೋಗಸ್ಥರು, ಐಶ್ವರ್ಯವಂತರು ಮೆ ತ್ತು ವಿದ್ಯಾವಂತರು ಇಚ್ಛೆಗೇ ಬಿಟ್ಟಾಗಿ ನಡಿಸಲ್ಪಡುವಂಥ ಅದ್ವೈತ ಶಕ್ತಿಯು ಆವಕ್ಕೆ ಇದ್ದೇ ಇರ್ತು. ಸಭೆಗಳ ಮೂಲಕ ಸ್ವಾರ್ಥಸಿದ್ಧಿಯನ್ನು ಸಾಧಿಸಿಕೊಳ್ಳುವಷ್ಟು ಪಾಪವು ಪ್ರಪಂಚದಲ್ಲಿ ಬೇರೆ ಯಾವದೂ ಇರಲಾರದು. ಅನೇಕರ ಕೆಲಸ ಕೈಕೊಡಿದ ನಂತರ ಇಲ್ಲವೆ ಅವರಲ್ಲಿ ಅಡಕವಾಗಿ ರಬಹುದಾದ ಶುಕಂತ್ರಗಳು ತಿಳಿಯಬಾದಾಗ ಅಂಥಾ ಸಭೆಗ ಳು ಚಿರಕಾಲ ಬಾಳಲು ಸಾಧ್ಯವಿರಲಾರದು.

ಕೋಮುವಾರು ಸಭೆಗಳಲ್ಲಿ ರಾಜಕೀಯವಿದ್ದರೆ ದೇಶ ಕ್ಕೆ ಎಷ್ಟು ಕೇಡಾಗುತ್ತಿದೆ ಎಂಬುದು ಸರ್ವರಿಗೂ ತಿಳಿದ ವಿಷ ಯವಾಗಿದೆ. ಕೋಮುವಾರು ಸಭೆಗಳವರ ಬಿನ್ನಹ ಪತ್ರಗಳಿ ಗೆ ನೈಸರಾಯ ಪ್ರಭುಗಳವರು ನ್ಯಾಯವಾದ ಜವಾಬು ಕೊ ಟ್ಟಿರುತ್ತಾರೆಂಬದನ್ನು ಸರ್ವರೂ ತಿಳಿದುಕೊಳ್ಳಬೇಕಾಗಿದೆ. ಇ ಲ್ಲವಾಗಿದ್ದರೆ, ಕೊಡಗಿನವರು ಯಾ ಇಮ್ಮಡಿಗಾರರು ಹೆಚ್ಚಿನವ ರೆಂಬರಾಗಿ, ಭಕ್ತರಿಂತಾಗಲಿ ಭಾವಿಸಿದ್ದಿದ್ದರೆ, ಅವರು ಗ ಯವಹಾಸಿದ ಜ್ಞಾನಾರ್ಥವಾಗಿಯಾದರೂ, ಹುದಿಸಲಾ ಯೇ ಇಲ್ಲವೆ. ಈಗಿನ ರೀತಿಯ ಜಮ್ಮಡಿ ಕಂದಾಯವನ್ನು ನಿರ ಚು ವಿಡಬಹುದಿತ್ತು. ಗೌಡ ಯ ಸಾಗಿನವರ ಕೋರಿಕೆಯಂ ತೆ, ಅವರಿಗೆ ಉದ್ಯೋಗವನ್ನು ಕಾದಿಡಬಹುದಿತ್ತು. ಹೀಗೆಲ್ಲ ಮಾಡುವದರಿಂದ ಅಂದರೆ ಪ್ರತ್ಯೇಕ ಪ್ರತ್ಯೇಕ ಜನರ ಕೋರಿ ಕೆಗಳನ್ನು ನೆರವೇರಿಸುವದರಿಂದ ಸರಕಾರಕ್ಕೆ ನಷ್ಟವಾಗಲಿ, ಇ ಲ್ಲವೆ, ಜನತಾಗ ಸಾಮಾನ್ಯಕ್ಕೆ ಅನ್ಯಾಯವಾಗಲಿ ಮಾಡಿದಂ ತಾಗುತ್ತದೆ, ಎಂಬ ದಯೆದೃಷ್ಟಿಯಿಂದ ಎಲ್ಲರಿಗೂ ಸರ್ವ ಸಮ್ಮತವಾದ ಜವಾಬನ್ನು ಕೊಟ್ಟವರಲ್ಲಿ ತುಂಬಾ ನ್ಯಾಯ ವಿದೆ. ದೇಶದ ಪರ ಒಂದು ಬಿನ್ನಹ ಪತ್ರ ಒಪ್ಪಿಸಿದ್ದಿದ್ದರೆ, ಜನರ ಬಗ್ಗೆಟ್ಟಿಗೂ, ದೇಶದ ಗೌರವಕ್ಕೂ ಎಷ್ಟೊ ಮರ್ಯಾ ದೆ ಉಂಟಾಗುತ್ತಿರಲಿಲ್ಲವೇ?

ತಾ 21—3—30ರ ಸಂಚಿಕೆಯಲ್ಲು ಕೆ. ಯಂ. ಪೂಮೈ ಯ್ಯನವರು 'ದೇಶಸೇವೆಯ ತಾಪ' ಎಂಬ ತಿರೋನಾಮೆಯ ಲೇ ಖನದಲ್ಲಿ ತುಂಬಾ ವಿಚಾರಪರದಿಂದ ದೇಶದ ಒಗ್ಗಟ್ಟಿನ್ನು ಸಾ ಧಿಸಲಿಕ್ಕಾಗಿ ಬರೆದ ಬಾತ್ಮಿಗೆ ತುಂಬಾ ವಂದನೆಗಳಿವೆ. ಆವ ರಿ ಅದರಲ್ಲಿ ಗೌಡ ಜನರು ರಾಜಕೀಯ ಸುಧಾರಣೆಗಳಿಗೆ ಅ ಡ್ಡವಾದ ವಿಷಯ ಕುರಿತು ಟೀಕಿಸಿದರಲ್ಲಿ ಸ್ವಲ್ಪ ಯೋಚಿಸ ಬೇಕಾಗಿದೆ ಗೌಡ ಜನತಾಗದವರು, ಮುಂದಾಗಿ ತಮಗೆ ಉಂಟಾಗುತ್ತಿರುವ ಕುಂದು ಕೊರತೆಗಳನ್ನು ದೇಶಿಯರ ಮುಂ ದಿಟ್ಟು ಆನಂತರ ಅವರು ಸರಕಾರದವರ ಮುಂದಿಡಬಹುದಿತ್ತು. ಏಕಾ ಏಕಿ ವ್ಯೆಕ್ತಿಗಳಿಂದಲೋ ಯಾ ಅಲ್ಪ ಸಂಖೆಯವರಿಂ ದಲೋ ತಮಗೆ ಕೆಡಕ್ಕುಂಟುವಾಗಬಹುದೆಂತಲೋ ಯಾ ಅ ಸೂಯೆಯಿಂದಲೋ, ದೇಶಕ್ಕೇನೇ ಕೊಡಕ ತರುವಂತೆ ಅಷ್ಟ ಆಾದದ್ದುದರಲ್ಲಿ ನ್ಯಾಯವಿದೆ ಎಂತ ಹೇಳಲಿಕ್ಕಾಗುವದಿಲ್ಲ. ಕೋಮುವಾರು ಸಭೆಗಳಿಂದ ಆಯಾಯ ಜನತಾಗಕ್ಕೂ ಮು ತ್ತು ದೇಶಕ್ಕೂ ಹಾನಿತಟ್ಟುತ್ತಾ ಇದೆ ಎಂಬದು ಸರ್ವರು ತಿ ಳಿದುಕೊಳ್ಳುವಂತಾಗಿದೆ.

ಪ್ರತಿ ಒಂದು ಕೋಮಿನವರಿಗೂ, ಆಚಾರ ವಿಚಾರದ ವಿಷಯವಾಗಿಯೂಆಗಿಯೂ, ವಿದ್ಯೆಯನ್ನು ಮುಂದರಿಸುವ ವಿ ಷಯದಾಗಿಯೂ ತಮ್ಮ ತಮ್ಮ ಜನತಾಗವು ಯಾವ ದಾರಿ ತ್ಪು ದರಿದ್ರಾವಸ್ಥೆಯಲ್ಲು ಇದ್ದಾರೆಂಬದನ್ನು ಕಂಡುಹಿಡಿದು ಅದರಿಂ ದ ಪಾರುಮಾಡಿ ತಮ್ಮ ಜನತಾಗದ, ಸೌಕರ್ಯಗಳನ್ನು ಹೆಚ್ಚಿ ಸಲು ಬಂಡತವಾಗಿಯೂ ಸಭೆಗಳು ಬೇಕಾಗಿವೆ. ಆದಂತೆ ಯೇ ಎಲ್ಲ ಕೋಮಿನವರು ಒಟ್ಟುಗೂಡಿ ದೇಶದ ಸೌಕರ್ಯ ವನ್ನು ಜಯಸಬೇಕಾದದ್ದು ನ್ಯಾಯವಾದರೆಲ್ಲವೆಂತ ಯಾ ರೂ ತಿಳಿದುಕೊಳ್ಳಬಾರದು. ಆದುದರಿಂದ ಒಬ್ಬರ ಮೇ ಲೊಬ್ಬರು ಹೊಟ್ಟೆಕಿಚ್ಚು ಪಟ್ಟುಕೊಂಡೊ ಯಾ ಸಿಟ್ಟಿನಿಂದ ಲೋ ಮನೆಗೆ ಬೆಂಕಿ ಹಾಕಿ ಭಸ್ಮ ಮಾಡಿದಂತೆ ಜವಾನ್ದಾರರ ಸಂಘವನ್ನು ನಾಶಪಡಿಸಬೇಕೆಂತಾಗಲಿ, ತಮ್ಮ ಸ್ವಾಧೀನಪ ಡಿಸಿಕೊಳ್ಳಬೇಕೆಂತಾಗಲಿ ಇಟ್ಟುಕೊಂಡಿರುವ ಕಿಂಚಿತ್ ಮ ನಸನ್ನು ಬಿಟ್ಟು ನಿರಾಳವಾದ ಒಮ್ಮನಸಿನಿಂದ ಎಲ್ಲ ಕೋಮಿ ನವರ ಪ್ರತಿ ಒಬ್ಬ ಜವಾನುದಾರನು ಸಂಘಕ್ಕೆ ಮೆಂಬರ ನಾಗುವಂತೆ ಮಾಡಿ ದೇಶದ ಅಭ್ಯುದಯವನ್ನು ಬಯಸಿ ತ ನ್ಮೂಲಕ ದೇಶಿಯರಿಗೆ ಉಂಟಾಗಿರುವ ಕುಂದುಕೊರತೆಗಳನ್ನು ಪೋಗಲಾಡಿಸುವಂತೆ ಮಾಡಬೇಕಾಗಿ ದೇಶಿಯ ಎಲ್ಲ ಮು ಖಂಡರುಲ್ಲು ಆಶಿಕೆ ಮಾಡಿಕೊಳ್ಳುತ್ತೇನೆ.

ಕೌನ್ಸಿಲಿನಲ್ಲು ಪ್ರತ್ಯೇಕ ಪ್ರತಿನಿಧಿತ್ವ ಇರುವದರಿಂದ ಲೂ, ಜನಸಾಮಾನ್ಯರಲ್ಲಿ ಅಸಮಾಯೆಗಳು ಹೆಚ್ಚಿ ದಿನೇ ದಿನೇ ಜ ಡಕೆಗೆ ಅಪ್ಪನವುಂಟಾಗುತ್ತಾ, ಕೋಮುವಾರು ವೈಕಮ್ಯಗಳು ಹೆಚ್ಚಾಗಿರುವದರಿಂದಲೂ, ಈಗ ಇರುವ ಕೌನ್ಸಿಲಿನಲ್ಲು ಜೆಚ್ಚಿನ ಜವಾಬ್ದಾರಿಕೆಯು ಪ್ರತಿನಿದಿಗಳ ಬಹುಮತದವರ ಇಂದಿಗೆ ಬಳಪಟ್ಟು ಇಲ್ಲದ್ದರಿಂದಲೂ, ಮುಂದೆ ಯಾವ ತರದ ಸುಧಾರಣೆ ಕೊಡುತ್ತಾರೆಂಬುದು ತಿಳಿಯದ್ದರಿಂದಲೂ, ಇಲ್ಲಿ ನ ರಿಗೆ ಕೌನ್ಸಿಲಿನ ಮುಖಾಂತರ ದೇಶಕ್ಕೆ ಆಗ ಬೇಕಾದಷ್ಟು ಪ್ರಯೋಜನಗಳು ಆಗಿದೆಯೋ ಇಲ್ಲವೋ ಎಂಬದು ತಿಳಿಯುಂ ದಿರುವದಿಲ್ಲವಾದ್ದರಿಂದಲೂ ನಮ್ಮ ವೈಕ್ತಿಕನಾವೇ ಯಾವ ಯಾವ ಭಾಗದಲ್ಲಿ ನಮ್ಮ ನೆ ಧಾರಣೆಗಳನ್ನು ಮಾಡಿಕೊಳ್ಳಬೇಕೆಂಬ ದನ್ನು ಕೋಮುವಾರು ಸಭೆಗಳ ಮುಖಾಂತರವಾಗಲಿ, ಜ ಸಂಘದ ಮುಖಾಂತರವಾಗಲಿ ಒಗ್ಗಟ್ಟಿನಿಂದ ಸಾಧಿಸಿಕೊಳ್ಳು ಬೇಕಾಗಿದೆ. ಆಯಿಯ ಕೋಮಿನವರು ಅವರವರ ಕೆಲಸಗಳ ನ್ನು ಮಾಡುತ್ತ ಜ. ಸಂಘಕ್ಕೆ ಬತ್ತಾಸೆ ಕೊಟ್ಟರೆ, ದೇಶವು ಬಡ ತನ ದರಿದ್ರಾವಸ್ಥೆಯಿಂದ ಪಾರಾಗಬಹುದೆಂತ ನಂಬುತ್ತೇನೆ. ಎಲ್ಲರೂ ಸೇರಿದನಂತರ ಮಾಡುತ್ತೇನೆಂತ ಹೇಳುವ ಮನಸಿ ನಲ್ಲಿ ಅರ್ಥವಿರಲಾರದು. ಈ ವರೆಗೆ ಕೋಮುವಾರು ಸಭೆಗ ಳಾಗಲಿ, ಜ ಸಂಘವಾಗಲಿ ಮಾಡಬೇಕಾದಷ್ಟು ಕೆಲಸ ವನ್ನು ಮಾಡಿದ್ದರಿಂದಲೂ, ನಿಷ್ಠಾಸೇವನೆಯು ಅದಾಯವು ಭೂಳಾದಾಯವ ನ್ನು ವಿೂರಿಸಿ ನಮ್ಮನ್ನು ಅಧೋಗತಿಗೂ, ಅನೀತಿಗೂ ಇಳಿಸು ತ್ತಾ ಇದೆ. ಪ್ರಮುಖ ಮುಂದಾಳುಗಳ ಮತ್ತು ಐಶ್ವರ್ಯ ವಂತರುಗಳಿಂದ ನಡಿಸಲ್ಪಡುವ ತುಛ ಅಭಿಪ್ರ ಚಾರಗಳಲ್ಲಿ ಆವರವರಿಗೆ ತಕ್ಕಂತೆ ಪಾರ್ಟೀತಿ ಮತ್ತು ಸ್ವದೇತಿ ಸಾಧಾರಣ ಳ ಪೈಪೋಟಿ ಆಗುತ್ತಾ ಇದೆ. ಕೊಡವರು ಹೆಚ್ಚಿಗೆ ಸಂಖ್ಯೆ ಯವರಲ್ಲ. ಇಲ್ಲವ

ಳಂದಾಯವನ್ನು ವಿಂಗಡಿಸಿದ್ದು' ಇವೆಷ್ಟು ಸೈನಿಕರವಾದದಂ ಬದನ್ನು ವಾಚಕರು ಮತ್ತು ಕೋಮುವಾರು ಸಭೆಯ ಮು ಖಂಡರು ತಿಳಿದು ಇನ್ನಾದರೂ ತಮ್ಮ ತಮ್ಮ ಕೋಮಿನ ಜ ನಾಂಗದವರಲ್ಲಿ ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ಈ ನೀಚವಾದ ನಿವಾಸೇವನೆಯನ್ನು ಬಿಡುವಂತೆ ಮಾಡಿ ಸಾ ರ್ವಜನಿಕರೂಪಡೆಯಲಿಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

"ಆಲೋಚನಾಪರ"

ಸುಣ್ಣ ಹುಡುಗರ ಸಲುವಾಗಿ

ಡೋಂಗರ

ಇವರ

ಬಾಲಾಮೃತ.

ವನ್ನು

ಕೊಡುವುದರಿಂದ

ಸಶಕ್ತರೂ, ಪುಷ್ಟರೂ ಮತ್ತು

ಸಂತೋಷ ಚಿತ್ತರೂ ಆಗುವರು.

ಕೆ. ಟಿ. ಡೋಂಗರೆ ಕಂಪೆನಿ,

52–22 ನಿಶಿಗಾಂತ, ಮುಂಬಯಿ.

High Bonus! Cheap Premium!! Reliable Payment!!!

THE

GREAT EASTERN LIEE ASSURANCE CO IPANY LTD.

(Incorporated in Straits Settlement)

LONDON OFFICE
27, Old Jewing, London E C

REGISTERED HEAD OFFICE
Winchister House Singapur S-y

BRANCH OFFICE
Dady House, 50–52, Churchgate Street, Fort Bombay

Authorised Capital
$ 2s0 000

Paid up Capital
$ 142.010

Funds Exceed
Rs 1 40 00 000

Amount Assured Exceeds
Rs 5 00 00 000

Claims Paid Exceed
Rs 70 00.000.

Bonus given last time is as high as Rs 30 to 36 per 1600 per year.
Required able and energetic young men or retired officials to take up ou agency in every village and town all over Coorg on handsome pay or libera commission

ಕೊಡಗಿನ ಎಲ್ಲಾ ಗ್ರಾಮಗಳಲ್ಲಿಯೂ, ಪಟ್ಟಣಗಳಲ್ಲಿಯೂ ಸಮ್ಮ ವಿಶ್ವಾಸಾರ್ಹ ಗೌರವಸ್ಥ ಯುವಕರು ಇವರ ಏಜೆನ್ಸಿಯನ್ನು ಬಹಳ ಉದ್ಯೋಗದೆಸೆಯಿಂದ ಪ್ರಾರಂಭಿಸಲಿಕ್ಕಾಗಿ ಬೇಕಾಗಿದ್ದಾರೆ ಒಳ್ಳೇ ಸಂಬಳ ಮತ್ತು ಪಟ್ಟಿಯ ಕಮಿಷನ್ ಕೊಡಲಾಗುವುದು. ಹೆಚ್ಚಿನ ವಿವರಕ್ಕಾಗಿ ಕೆಳಗಿನವರನ್ನು ಸಂಪರ್ಕ ಬೆಸೆಯಿರಿ

Apply for further particulars at the above or to —

Messers. A. R. Wallia & Co.,
Chief Agents, G. E. L. A. & Co., Ltd.
G. E. P. C. & Co Ltd office
MERCARA,



ಕಾರ್ಡ್ ಬಿಡದೆ ಅಗ್ಗ
ಕ್ಕೆ ಬಿಲಾಗಿ ಮಷಿನರಿ
ಕೆಲಸಮಾಡಿಕೊಡಲ್ಪಡುವುದು.

ಕೋವಿಗಳು, ಕತ್ತಿಗಳು, ಬರ್ಚಿಗಳು, ಕೋವಿಕೊಳವೆಗಳು, ಕೇಪ್ಸುಗಳು, ಗನ್ ಮತ್ತು ಪಿಸ್ತೂಲು ಬೇಕಾದ ಸಾಮಾನುಗಳು ಬಹು ಕಡಿಮೆ ಧರದಲ್ಲಿ ದೊರೆಯುವವು.

GOOLAMHUSAIN ALLIBHOY & SONS,
Largest Importers of Firearms and Ammunition
Cheapest priced firm in India,
24–8 210 Abdul Rehman Street, BOMBAY.

ಎಂ. ಎಸ್. ಶಿವಪ್ಪನವರ ಅಂಡ್ ಬ್ರದರ್ಸ್.

ಹಾ ಪೈನಿಯಂ ವ್ಯಾಪಾರಿಗಳು, ಮೈಸೂರು.

14 ಕ್ಯಾರೆಟ್ ಭೆಂಗಾರದ ತಿಬ್ಬು ಹಾಕಿದ ಹಾತ್ರಿಯಂತ ಬಂಡೋಬಸ್ತಿನ ಆದ ಪೌಂಟನ್‌ಪೆನ್‌ಗಳು.

ವರ್ಲ್ಡ್ ಮಾಡರ್ ಪೌಂಟನ್‌ಪೆನ್	1ಕ್ಕೆ	ರೂ 3 0 0
" " ಬಿಗ್ ಬ್ಯಾರೆಲ್ ಪೆನ್	1ಕ್ಕೆ	3 3 0
" " ಸ್ಕ್ರ್ಯೂ ಕ್ಯಾಪ್ ಪೆನ್	1ಕ್ಕೆ	3 8 0
" " ಬಿಗ್ ಬಬ್ಬರೆಲ್ ಸ್ಕ್ರ್ಯೂ ಕ್ಯಾಪ್ ಮಾಡರ್ ಕಲರ್ ಪೌಂಟನ್‌ಪೆನ್	1ಕ್ಕೆ	3 14 0
" " ಪಾಕೆಟ್ ಸ್ಕ್ರ್ಯೂ ಕ್ಯಾಪ್ ಪೌಂಟನ್‌ಪೆನ್	1ಕ್ಕೆ	4 2 0
" " ಸೆಲ್ಫ್ ಫಿಲ್ಲಿಂಗ್ ವರ್ಲ್ಡ್ ಅಧಿಕ ಬ್ರೂವನ್ ಕಲರ್ ಪೌಂಟನ್‌ಪೆನ್	1ಕ್ಕೆ	5 8 0
ಬಿಗ್ ಸೈಜಿನ ಪೌಂಟನ್‌ಪೆನ್	1ಕ್ಕೆ	10 8 0
ಪಾರ್ಕರ್ ಪೆನ್	1ಕ್ಕೆ	14 6 0, & 20 10 0
ಬ್ಲ್ಯಾಕ್‌ಬರ್ಡ್ ಪೌಂಟನ್‌ಪೆನ್	1ಕ್ಕೆ	3 4 0, & 3 12 0
ಸೈಫನ್ ಪೌಂಟನ್ ಪೆನ್	1ಕ್ಕೆ	6 4 0, & 6 12 0
ವಾಟರ್‌ಮನ್ ಪೌಂಟನ್ ಪೆನ್	1ಕ್ಕೆ	8 2 0, & 8 10 0

ಪೈಂಟಿಂಗ್‌ಗಳು.

ಸ್ಯಾಂಡಲ್ ಇರುವ ಸೆಣ ಪೈಂಟಿಂಗ್	1ಕ್ಕೆ	3 6 0
ಆಪೇಕ್ಷ ಪೈಂಟಿಂಗ್	1ಕ್ಕೆ	2 2 0
ಲಿಥಿಯೆಡ್ ಆಯಿಲ್ ಪೈಂಟಿಂಗ್	1ಕ್ಕೆ	6 9 0, & 6 15 0
ಲಿಥಿಯೆಡ್ ಪೈಂಟಿಂಗ್ ಆಯಿಲ್ ಪೈಂಟಿಂಗ್	1ಕ್ಕೆ	7 2 0,
ಲಿಥಿಯೆಡ್ ಎಣ್ಣೆಯು ಸಣ್ಣ ಪೈಂಟಿಂಗ್ ಡೇಡಿಯು ಪೈಂಟಿಂಗ್	1ಕ್ಕೆ	8 10 0
ಬಿಗ್‌ಪೆನ್ ಆಯಿಲ್ ಪೈಂಟಿಂಗ್	1ಕ್ಕೆ	9 6 0
ಬಿಗ್‌ಪೆನ್ ಎಣ್ಣೆಯು ಇಂಡಿಯಾ ಇಂಕ್ ಯಂತ್ರ ಪೈಂಟಿಂಗ್	1ಕ್ಕೆ	13 4 0
ಪಾತ್ರಿಯೂ ಬಂಡೋಬಸ್ತಿನ ಆದ ಪಾಕೆಟ್ ಪಾಚ್	1ಕ್ಕೆ	5 10 0
ಪಾಕೆಟ್ ಪಾಚ್	1ಕ್ಕೆ	13 4 0
ಸೈಕ್ಲಲ್ ಲೇಸ್ ಸಿಲೆಂಡರ್ ಮುಮೊಂಟ್ ಸಾಲಾಧರಣ ತರಹ		
ರಿಸ್ಟ್ ವಾಚ್	1ಕ್ಕೆ	5 4 0, 7 8 0, 10 0 0 & 12 8 0

ಹಾತ್ರಿಯಂತ ವ್ಯಾಪಾರಿಗಳು.

ಪಾತ್ರಿಯೂ, ಬಾಂಡೋಬಸ್ತಿನ ಸೆಸ್ಸರ್ಸ್ ಇಂಡಿಯಾ ಅಪೇಕ್ಷ ಪಾಲಿನ ಮಿಕ್ಕಿ ಬಾಡಿಕೆ ಬಾಡಿಕೆಗಳು ಆದ 'ಆಪ್ಟ್ ಪತ್ರಿಕೆ ಪಾಡಿದ ಮೀಸಲು ಸಿಗದ ಬಂಡ್ಯ ಹಾಗಾದ ಪಾಕ್ಯೂಸಿಯಂ 1ಕ್ಕೆ ರೂ 50 0 0. ಕಕ್ಕುಂತರ ಪ್ರೊಟ್ಟು ಸಿಗದ ಬಾಡಿಕೆ ಪಾಂತ ಪಾಗಿ ಪ್ರೊಟ್ಟಿಯಂ 1ಕ್ಕೆ ರೂ 41 0 0. ಸಮ್ಮಲ್ಲಿ 21/-ರೂ ಕೃಯಿದ ಅಗಾತಿಯಂ 500/-ರೂ. ಗಳ ವರೆಗೆ ಅಕ್ಷಕ ಸಮೂಹಿಸಿ ಹಾತ್ರಿಯಂತಿಯಂಗಳು ಪೆಕ್ಟ್ರಿಗಾ ಕ್ಷಾತ್ರಿಯಂತ್ರಕ್ಕೆ ಅಪೇಕ್ಷಿಸುವಾಗಿ ಅಮಲು ಇಪ್ಪವರ್ಷ ಪಾರಿಯಲ್ಲಿ ಉತ್ಕೃಷ್ಟವಾಗಿಪ್ಪನ್ನು ಪ್ರಾಣಾಯಿಸಿ ಧರಿಸಿಕೊಳ್ಳಲು ಅಡ್ಡಾ ತೊಡುವರೆಯು 5/—ರೂ. ಅಷ್ಟಾನ್ನು ಪ ವಾನಿಸೇಕಾದ್ದು ಅವಶ್ಯಕ

ಏಜೆಲಿಗಳು 5/—ರೂ ಪಾಗಾಯಿಂ

ಈ ಪಟ್ಟಿಗೆ ಸಾಲಿಕೆಯೆ ಫೈಲಿಂಗ್ ಸಮ್ಮುಂಧಿಸಿ ಪದಂಧರ್ಗಳೂ ಮೆಚ್ಚು ಸಾಲಿಕೆಯಿಸಿದೆ ಎಂದಾಗ್ಗೆ,

(ಮುನಿಯಂಡರ್ ಕವಾಲಿಸುವ ವಿಳಾಸ,—ಎಂ. ಎಸ್ ಸಿದ್ಧಪ್ಪ ಅಂಡ್ ಬ್ರದರ್ಸ್, ಮೈಸೂರು ಸಮು)

ಹಾತ್ರಿಯಂತ ವ್ಯಾಪಾರಿಗಳು, ಮೈಸೂರ

52–47

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್ ಅಂಡ್ ಬಜಪೆಯಿಂದ ಮ್ಯಾನೆಜಿಂಗ್
ಆಫ್ ಪ್ರಕಾರ ರಿಜಿಸ್ಟರಾಗಿನೆ:

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಲಗು	—	21,310
ಜಮೂಟುದ ರೇವಣಾತಿ	—	2,16,271

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಅಗತ್ಯವಾದ ಹೆಚ್ಚಾಗಿ ಸಾಲಾಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ರೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಶೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೆಲಸ ಪರೀಕ್ಷೆವ್ ರಿಜಿಸ್ಟ್ರಾರವರು ಲೆಕ್ಕ ಆಚಮೂಯಿಸಿತೆ ಮಾಡುತ್ತಾರೆ.

ಪೈಸಿಡೆಂಟರು, ಡೈರೆಕ್ಟರ್
ಕೋದಂಡ ಅಪ್ಪಯ್ಯನವರು, ಮನೆಯಪ್ಪಂಡ ಬೆಳ್ಯಪ್ಪ
ರಾವ್ ಬಹದ್ದೂರ್. ನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್,
ಕಾರ್ಯಕ್ರಮ 1-2-1930.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಜವಾಬ್ದಾರಿಯ ವರ್ಷಕ್ಕಾಗಿದ್ದಲು ಒಪ್ಪಿಕೊಂಡಿದ್ದರಿಂದ, ಅವರನ್ನು ವಿಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ವಿಜೆಂಟರುಗಳಿಗೆ ವಿಜೆಂಟ್ ಜಂಗಂಡ ಕುಟ್ಟಪ್ಪನವರ ಒವಾಜ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಜಂದಾ ವಾರಸ್ದಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಜಂದಾವನ್ನು ವಾಮತಿ ಮೂಡಿ ರಶೀತಿ ಪಡೆಯಬೇಕಾಗಿ ಕೋರಿಕೆ. ವಿಜಂಟರುಗಳು.

ಕೊಡಗಿನ ಎಲ್ಲಾ ಭಾಗಕ್ಕೂ—ಮೆ. ಜಂಗಂಡ ಕುಟ್ಟಪ್ಪನವರು.
ಮರೆನಾಡು—ಮೆ. ಕೀಕಿರ ಅಯ್ಯಯ್ಯನವರು.

ನಬ್ ವಿಜೆಂಟರುಗಳು.

ವೀರರಾಜಪೇಟೆ—ಮೆ. ನಂಡೇಪಂಡ ನೋಮೆಯ್ಯನವರು,
(ಖಾದಿಭಂಡಾರ.)
ನಾಪೋಕ್ಲು—ಎಮ್. ಆರ್. ವೆಂಕಪ್ಪಯ್ಯನವರು.
ಶ್ರೀಮಂಗಲನಾಡು—ಮೆ. ಅಜ್ಜಮೂಡ ಮಾದಪ್ಪನವರು.
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುದ್ದಮ್ಮೆಯ್ಯನವರು,
ಮತ್ತು, ಅರಮಣಮೂಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮೊದಮ್ಮೆಯ್ಯನವರು,
ಸುಂಟಿಕೊಪ್ಪ—ಮೆ ಅಪ್ಪಹಟ್ಟೀಳಂಡ ಮಾಚೆಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾ ರೂ ಜಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪದಸ್ಥರ ಸಹಾಯಕ ನಿಯಮಗಳ ಉಪಪತ್ತಿಗಳೂ, ದಾವ ಬರೆದು ರಿಜಿಸ್ಟ್ರಾರ್ರವರ ಆಜ್ಞೆಗಳಿಗೆ ಕಳುಹಿಸಿದಾಗ ಆದು ಸರಿಯೊಗಿ ಬರೆಯಲ್ಪಡಲಿಲ್ಲ ನೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸುಗಳನುಸಾರವಾಗಿ ಕರೋಪರಿಸಲ್ಪಟ್ಟದಾವಾ ಫಾರಮುಗಳೂ, ಸಾಳ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಡ್ಡರ್ ಸ್ಟೋರಿ ಪಲ್ಲಿಯೂ ಮಾರಾಟಕ್ಕಿವೆ. ಮೇನೇಜರ್,
"ಕೊಡಗು" ಮಡಿಕೇರಿ.

ಶೇಷ್ಠ ರಕಾರವು ಸಿಗುವದು.
Victor Cartridges Rs 10/- Per 100
Mahonedally-Noorbhoy.
ARMS & AMMUNITION MART,
221 Abdul Rehman Street.
BOMBAY. 2.

ಭರತಖಂಡದ ಜೀವವಿಮೆ ಕಂಪೆನಿಗಳಲ್ಲಿ ಅತ್ಯಂತ ದೊಡ್ಡದಾದ

ಓರಿಯಂಟಲ್ ಜೀವವಿಮೆ ಕಂಪೆನಿಯ

ಇಂದಿನ ಸ್ಥಿತಿಯು, ಅಭಿವೃದ್ಧಿಯು ಜನಪ್ರೀತಿಯನ್ನು ಸೂಚಿಸುತ್ತದೆ
ಎಂಬದನ್ನು ಸ್ಪಷ್ಟವಾಗಿ ಉದಾಹರಿಸುತ್ತದೆ
ಇಂಡಿಯದಲ್ಲಿ ಯೋಜಿಸಲ್ಪಟ್ಟದ್ದು 1874ರಲ್ಲಿ

ಅಭಿವೃದ್ಧಿ.

ಹೊಸ ವಿಮೆಗಳು.			ಪ್ರೀಮಿಯಂ ಆದಾಯ.		
1925.	296	ಲಕ್ಷ ರೂಪಾಯಿ.	1925.	93	ಲಕ್ಷ ರೂಪಾಯಿ
1926.	391	,, ,,	1926.	106	,, ,,
1927.	468	,, ,,	1927.	122	,,
1928.	585	,, ,,	1928.	140	,,

ಜನಪ್ರೀತಿಯು ಹೆಚ್ಚೆಚ್ಚು ಲಾಭವನ್ನು ಕೊಡುತ್ತದೆ.

ಜೀವಾಂತ್ಯದ ವಿಮೆಗಳ ಮೇಲೆ ಕೊಟ್ಟ ಬೋನಸುಗಳು.

1921ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 10 ರೂ. — 1927ರಲ್ಲಿ 1000 ರೂಪಾಯಿಗಳಿಗೆ ವರ್ಷಕ್ಕೆ 25 ರೂ
1924ರಲ್ಲಿ ,, ,, ,, 22½ ,,

ಆದಕಾರಣದಿಂದ ನೀವು ಮೊದಲನೆಯ ಸಾರಿ ವಿಮೆ ಕಂಪೆನಿಗಳನ್ನು ಆರಿಸುವಾಗ ಆಗಲೀ, ಅಥವಾ ಹೆಚ್ಚಿನ ಪಾಲಿಸಿಗಳನ್ನು ತೆಗೆದುಕೊಳ್ಳುವಾಗ ಆಗಲೀ ನೀವು ಜನಪ್ರೀತಿಯುಳ್ಳ ಮತ್ತು ಅಭಿವೃದ್ಧಿ ಹೊಂದುತ್ತಿರುವ ಈ ಕಂಪೆನಿಗೆ ಬಂದರೆ ನಿಮಗೆ ಅದರಿಂದ ಅತಿಶ ಉಂಟಾಗುವುದು. ಹೆಚ್ಚಿನ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.—

ಓರಿಯಂಟಲ್ ಬಿಲ್ಡಿಂಗ್ಸ್, ಯಂ. ವಿ. ಮುತ್ತುಕೃಷ್ಣ ನಾಯೆಡು,
ಸೌತ್ ಪೇರೇಡ್, ಬೆಂಗಳೂರು. 52—14 ಆಕ್ಟಿಂಗ್ ಬ್ರಾಂಚ್ ಸೆಕ್ರೆಟರಿ.

ಮಕ್ಕಳನ್ನು ಪಡೆಯಬೇಕು, ಮತ್ತು ಮಕ್ಕಳು ಆರೋಗ್ಯದಿಂದಿರಬೇಕು, ಎಂಬುವ ಇಚ್ಛೆಯನ್ನು ಸಾಧಿಸಿಕೊಳ್ಳಲು ಬಾಲಗ್ರಹ ದೋಷನಿವಾರಣೆಯೆಂಬ ಮಂತ್ರ ಯಂತ್ರದ ತಾಯಿತ.

ಅನೇಕ ಸ್ತ್ರೀಯರಿಗೆ ಪೂರ್ವಜನ್ಮದ ದುಷ್ಕರ್ಮದಿಂದಲೂ, ಬಾಲಗ್ರಹ ದೋಷದಿಂದಲೂ ಗರ್ಭ ನಷ್ಟವಾಗುವಿಕೆ, ಮಕ್ಕಳು ಹುಟ್ಟಿ ಹುಟ್ಟಿ ಸಾಯುವಿಕೆ, ಪ್ರತಿ ತಿಂಗಳೂಲು ಸರಿಯಾಗಿ ಮುಟ್ಟಾಗದಿರುವಿಕೆ, ಮುಟ್ಟಾಗುವ ಸಮಯದಲ್ಲಿ ಕೈಕಾಲು ಹಿಡಿಯುವಿಕೆ, ಮಸ್ತಪ್ತ ಬೇಳುವಿಕೆ, ಮೆಟ್ಟಿ ಕೂಡಿ, ಬಿಳುಪು—ಕೆಂಪು ಹೋಗಿ ಗರ್ಭ ಪತನವಾಗುವಿಕೆ, ನಾಂತಿ, ಸರ್ಪಕಾಡ, ಪಿತಾಶಬಾಧೆಯಿಂದ ನರಳುವಿಕೆ, ದಿನ ತುಂಬದೆ ಹಡಿತೋಜಿವ ವರೆಗೆ ಪರಿಪೂರ್ಣಮುವಿಕೆ, ಇವೇ ಮೊದಲಾದವುಗಳು ಸಂತಾನ ಭಂಗಕ್ಕೆ ಕಾರಣಗಳು. ಚಿಕ್ಕ ಮಕ್ಕಳಿಗೆ ೧೫ ವರ್ಷದ ವರೆಗೆ ಬಾಲಾರಿಷ್ಟ ದೋಷದಿಂದ ಅಕಸ್ಮಾತ್ ಸಂದುರೋಗ, ಮುಟ್ಟುದೋಷ, ಕಾಮಿಲೆ, ಗೃಹಪೀಡೆ, ದೃಷ್ಟಿದೋಷ, ಮುಟಿಕೆಬ್ಯಾಧಿ, ವಿಷೇಷ ಅಳೋಣ ಹೊಟ್ಟೆಯೊಳಗಿಂದ ಏಳೋಣ, ಭಯದಿಂದ ಬೆದರಿಪೆಡ್ಡಿ, ಕ್ಷೀಣ ಹೊಂದುವಿಕೆ ಮೊದಲಾದವುಗಳಿಂದ ಕಾದುತ್ತಿರುವದು, ಗರ್ಭರಕ್ಷಾಕರ ವಿಧಿಯಲ್ಲಿ ಸೂರ್ಯ ರಕ್ಷಾಕರ ವಿಧಿಯಲ್ಲಿ ಇನ್ನೂ ಅನೇಕ ಗ್ರಂಥಗಳಲ್ಲಿ, ಹೇಳಿದ ಪ್ರಕಾರ ಪಂಡಿತರೊಡನೆ ಪರಿಶೋಧಿಸಿ ಗೃಹಜ ಕಾಲದಲ್ಲಿ ಸಾಧು ಸತ್ಪುರುಷರ ಸಹಾಯದಿಂದ ಮಂತ್ರಿದ ಯಂತ್ರವನ್ನು ತಯಾರಿಸಿ ಬೆಳ್ಳಿಯ ತಾಯಿತದಲ್ಲಿ ಹಾಕಿ ಧರ್ತ್ರಪಡಿಸಿರುತ್ತದೆ. ಇದನ್ನು ತರಿಸಿ ಧರಿಸಿದರೆ ಹೆಣ್ಣು ಮಕ್ಕಳಾಗುವ ಸಂತಾನ ಭಂಗವೂ, ಚಿಕ್ಕಮಕ್ಕಳಿಗೆ ಬರುವ ಬಾಲಗ್ರಹವೂ ಯಾವತ್ತೂ ಪರಿಹಾರವಾಗುತ್ತದೆ. ಹೆಣ್ಣು ಮಕ್ಕಳಿಗೆ ಸಂತಾನ ದೆಸೆಯಿಂದ ಕ್ಷ ರಕ್ಷಾಕಾಯ. ಚಿಕ್ಕಮಕ್ಕಳಿಗೆ ೧೪ ವರ್ಷಗಳ ವರೆಗೆ ೨-೮-೦ ಪೋ. ಖ ಬೆಲೆ. ಶ್ರೇಷ್ಠ ವಾ ಜಾಗ್ರತೆ ಗುರು ಕೊಡುವ ತಾಯಿತಕ್ಕೆ ಪೋ. ಖ ಸೇರಿ ೫ ರೂ. ಆಗತಕ್ಕ ವಿ ಕಾರಗಳನ್ನು ಸ್ಪಷ್ಟ ಬರೆಯಿರಿ. ಈತಾಯಿತ ಧರಿಸಿತಂಡು ಗುಣವಿಲ್ಲೆಂದವರಿಗೆ 100 ರೂ. ಬಹುಮಾನ ಒಂದು ಸಲ ತರಿಸಿ ಅನುಭವ ತಕ್ಕೆಳ್ಳಿರಿ

ಸ್ಥಳ ಸಂಕೋಚ ಮೂಲಕ ಮೂದರಿಗಾಗಿ ಬಹುಮೂಸ ಪತ್ರಿಕೆ ಒಂದೇ ಕೊಟ್ಟಿದೆ.

ನನ್ನ ಹೆಂಡತಿಯ ಪ್ರಕೃತಿಯನ್ನು ಪಾತಾಂಕಿತ ವೈದ್ಯ ಡಾಕ್ಟರರಿಗೂ ತೋರಿಸಲು ಗುಣಮೊಂದಿದಿಲ್ಲ ತಮ್ಮ ಆಶ್ಚರ್ಯಕರವಾದ ತಾಯಿತವನ್ನು ನನ್ನ ಹೆಂಡತಿಯು ಈವಾಗ್ಗೆ ೨ ವಾರಗಳ ವರೆಗೆ ಧರಿಸಿದ ಮಾತ್ರದೆ ಮೈ ವಿಳಿಗಿನ ಯಾವತ್ತೂ ತಾಯಿಲೆಗಳು ಸಂಪೂರ್ಣವಾಗಿ ಪೂರ್ಣ ಆರೋಗ್ಯ ಸ್ಥಿತಿಯಲ್ಲಿರುತ್ತಾಳೆಂಬುವುದನ್ನು ತಿಳಿಸಲು ಅತಿ ಸಂತೋಷವನಿಸುತ್ತ. ತಮ್ಮ ಸಿ. ಕೆ. ರಾಮಸಾಹೇಬು, ಸುದಾಮ ಬಿ'ಸ್,
ಪ್ರಲ್ಹಾದ ವ್ಯೂವೇಟ್, ಮುಂಬೈ.

ತಾಯಿತ ಸಿಗುವ ವಿಳಾಸ:—ಸಿದ್ಧಾಂತಿ ಬಿ. ಸಿ. ಪಂಚಗಟ್ಟಿ,
52—38 ಮು. ಪೋ. ಆಳಗಿ, ಜಿ. ಬೆಳಗಾಂವ.

೫೩-ನರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿ ಸಲ್ಪಟ್ಟ ಔಷಧಗಳು.

೧. ಧಾತುಪುಷ್ಟಿ ಲೇಹ.

ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತ ಪಿತ್ತ, ಒಳ ಜ್ವರ, ಮಲ ಬದ್ಧತೆ, ಕೈಕಾಲು ಬಚ್ಚುವುದು ಮೊದಲಾದುವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು:—ಕ್ಯಯ ಡಬ್ಬಿ 1ಕ್ಕೆ 2—8—0 ಮೂರು ಡಬ್ಬಿಗಳಿಗೆ ರೂ. 7—0—0.

೨. ಅಶೋಕಾರಿಷ್ಟ ಮತ್ತು ಮೂತ್ರ.

ಹೆಂಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೆಚ್ಚೆನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸಳೆತ ಮೆಳ್ಳು ಗರ್ಭಾಶಯದ ಎಲ್ಲಾ ರೋಗಗಳನ್ನೂ ಆತಿ ಶೀಘ್ರದಲ್ಲಿಯೇ ಗುಣ ಪಡಿಸುವುದು. ಅಶೋಕಾರಿಷ್ಟ ಮತ್ತು ಮೂತ್ರಗಳು ಸಾವಿರಾರು ಹೆಂಗಸರಿಗೆ ಅಂತರಿಕ ಆರೋಗ್ಯವನ್ನು ಒದಗಿಸಿ, ಮನೋಭೀಷ್ಟವನ್ನು ಪೂರಯಿಸಿರುವುವು.
ಕ್ಷಯ 1 ಬಾಟ್ಲಿ ಔಷಧ, 1 ಡಬ್ಬಿ ಮೂತ್ರೆ ರೂ. 2 ಅ. 4,
3 ಬಾಟ್ಲಿ ಮತ್ತು ಡಬ್ಬಿಗಳಿಗೆ ರೂ. 6 ಅ. 4.

೩. ಮಲೇರಿಯಾ ನಿವಾರಣೆ.

ದಿನ ಬಿಟ್ಟು ಬರುವ ಜ್ವರ, ಮಲೆ ಜ್ವರ, 2 ಯಾ 3 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಒರುವ ಜ್ವರವನ್ನು ನಿಲ್ಲಿಸಿ ಜ್ವರ ಗಡ್ಡೆಯನ್ನು ಕರಗಿಸಿ ಶಕ್ತಿಪಡಿನ್ನು ಉಂಟು ಮಾಡುತ್ತದೆ. ಬಾಟ್ಲಿ 1ಕ್ಕೆ 1—8—0, 3 ಬಾಟ್ಲಿಗಳಿಗೆ 4—2—0.

೪. ಮೇಹ ಕುಠಾರ. ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯುಂತೆ ಹೋಗತಕ್ಕೆ ಕೀವನ್ನೂ ಪೃಣವನ್ನೂ ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7.

೫. ಇಛ್ಛಾ ಭೇದಿ ಗುಟಿಕೆ. ಆಯಸ್ಸನ್ನು ಉಂಟುಮಾಡುವ ಸುಖ ವಿರೇಚಕ ಬಾಟ್ಲಿ 1ಕ್ಕೆ 0—12—0 ಆಣೆ 3 ಬಾಟ್ಲಿಗಳಿಗೆ 2—2—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಟಲಾಗು ತರಿಸಿ ನೋಡಿರಿ.

ಯೆಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್,
12—13 ರಥಬೀದಿ, ಮಂಗಳೂರು, ಜಿ. ಕನ್ನಡ.

ಭಂಗಾರದ ಉಂಗುರಗಳು.

ಕ್ರಯ 12 ಆಣೆ ಮಾತ್ರ.



ಈ ಉಂಗುರಗಳನ್ನು "ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್‌ಗೋಲ್ಡ್ ಭಂಗಾವದಿಂದ ಕಟ್ಟಲಾಗಿದೆ. ಇದರ ಬಣ್ಣವು ಕೆಡದಂತೆ 'ಎಲಕ್ಟ್ರಿಕ್' ಪವರಿನಿಂದ ಸವರಿನ ಭಂಗಾದ ಒನ್ನು ಕೊಟ್ಟಿದೆ. ಶವು ಸಾಚಾ ವಜ್ರದ ಉಂಗುರಗಳಿಗೆ ಸರಿಸವೂನವಾಗಿವೆ. 1ಕ್ಕೆ 12 ಆಣೆ, 3 ಉಂಗುರಗಳಿಗೆ ಒಂದು ಟೇಬಲ್ ವ್ಯೆಂಥ್ಸನ್ನೂ, 6 ಉಂಗುರಗಳಿಗೆ ಒಂದು ಭಂಗಾವದ ವಾಚ್ಕಿಟ್ ವಾಚನ್ನೂ, 12 ಉಂಗುರಗಳಿಗೆ ಒಂದು ಬಂಗಾವದ ಕೈಯಲ್ಲಿ ಕಟ್ಟುವ ರಿಸ್ಟ್ ವಾಚನ್ನೂ ಇನಾವಾಗಿ ಕೊಡುತ್ತೇವೆ.

ವಿಳಾಸ:—ಸಿಟಿ ಮಾರ್ಟ್,
52—38 108 ಬ್ಯೆವಾಜಜಾರ್, ಮದ್ರಾಸ್.

Printed & published by P. J. Bellianpa, at "Kodagu" Press, Mercara for "Kodagu" Ltd.

"KUBARA" OFFICE MERCARA.
If not delivered please return to

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾ ನೀತಿ ಪ್ರಯುಕ್ತಶಾಃ। ಏಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂತತಿಃ॥

ವರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಏ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪುಟ ೯ | ಮಡಿಕೇರಿ, ಸನ್ ೧೯೨೦ನೇ ಇಸವಿ ಏಪ್ರಿಲ್ ತಾರೀಕು ೧೦ ನೇ ಶುಕ್ರವಾರ. | ಸಂಚಿಕೆ ೪೪

Telephone — 3145

By Appointment to H E The Governor of Madras.

Telegrams — 'PRECIOUS'.

Guarantee of Satisfaction throughout in every order large or small.

PROMPTEST EXECUTION — CAREFUL ATTENTION — HIGH CLASS WORKMANSHIP

Brooch.

GEMSET JEWELLER

POST BOX — 423 TRIPLICANE MADRAS

Excellent Quality Chaste Designs Moderate Prices.

Ice Tumbler.

"Green Hills"
VIRARAJENDRAPET
7th Decr., 26

Sir,

....I am glad to note that the Jewels have a good finish .

(Sd.) Mrs. A. B. CHENGAPPA.

SUNTICOPPA,
Nellore Estate.
7th April, 28

Dear Sir

I received the parcel and I am very glad to see the workmanship I must say it is excellent. I appreciate your workmanship and skilful handling They were praised by one and all of my friends.

(Sd) Miss K. SUBBIAH.

MERCARA,
20th May, 27.

Dear Sir,

I am quite satisfied with the Jewels you sent on the 15th instant

(Sd) Mrs. K. S. CARIAPPA.

52—30

Illustrated Catalogue Free on Application.

ಚಿಲಿಯನ್ ನೈಟ್ರೇಟ್ ಆಫ್ ಸೋಡಾ

"ಜೋರಾಗಿ ಹುಳದ ಬೆಸೆಯಿಂದ ಕಿತ್ತುತೆಗೆದ ಕಾಶ್ಮಿನಿಡಗಳ ಸಂಪೈಯು ಘಾಕುಗುಣದ (Mineral) ಗೊಬ್ಬರಯಾಕಿದ ಸ್ವಳಗಳಿಗಿಂತಲೂ ಸಾರಾಜನಕ (Nitrogenous) ಗೊಬ್ಬರಯಾಕಿದ ಸ್ವಳಗಳಲ್ಲಿ ಕಡಿಮೆಯೆಂದು ಸಿದ್ಧಾಪ್ತರ ಪರೀಕ್ಷೆ ಕ್ಷೇತ್ರ (Experiment station) ದಲ್ಲಿ ಕಂಡು ಬಂದಿದೆ ಆದುದರಿಂದ ರೈತಾ—ಜೋಳ ಬೇರೆಯಾಗಿ ಸಾರಜನಕ ಗೊಬ್ಬರವು ಪ್ರಯೋಜನಕರವಾಗುವೆಯೆಂದು ತೀರ್ಮಾನಿಸಿದೆ" (ಡಿ ಜಿ ಮಿನ್ಸ್ಟ್ರೀಸ್ ಜರ್ನಲ್, ಕಮರ್ಷಿಯಲ್ ಆಫೀಸರ್ ಯುನಾಸ್ ಕಮಂ ಟಪಿಕಾ ಇಂಡಸ್ಟ್ರೀಸ್ ಮೆಂಟ್)

ಹೆಚ್ಚಿನ ಮಾಹಿತಿ, ಎವಿಧ ಬೆಳೆಗಳ ವಿಷಯ ಧರ್ಮಾರ್ಥವಾಗಿ ಹಾಯುತ ಪತ್ರಿಕೆಗಳು ಮಗ್ಗೆರೆಗಳಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಬಹುದು.

(1) ಚಿಲಿಯನ್ ನೈಟ್ರೇಟ್ ಕಮಿಟಿ,
ಇಂಡಿಯನ್ ಸೆಲಿಗೇಶನ್,
ಮದರಾಸು.

(2) ಎಸ್ಟರ್ ಜಿ.ಎ. ಯು ಜೆಲ್ಲೆರ್,
ಚಿಲಿಯನ್ ನೈಟ್ರೇಟ್ ಕಮಿಟಿ,
ಮದರಾಸು.

24—23 ಫೋ. ಬಾ. ನಂ 469, ಕಲ್ಕತ್ತಾ.

ಬಾಲಾರ್ಕಮದು.

ನಿಮ್ಮ ಮಕ್ಕಳ ಸಾಂದ್ರು—ವನ್ನು ಸೊಡಿಸಿಕಾದರೆ ಆಯುತ ಗುಣವುಳ್ಳ ಬಾಲಾರ್ಕಮದುವನ್ನು ಕೊಡಿ ಮಕ್ಕಳು ರೋಗ



ಗಳಿಂದ ಎಷ್ಟೇ ಕ್ಷೀಣವಾಗಿದ್ದರೂ ಇದುವರೆಗು ಮೇಲೆ ಫಲಿಸಿಲ್ಲ ಯಾ ಬಂದಿಲ್ಲ ಬಾರದವರು ದಿನಕ್ಕೆ ೩ ಬಾರಿ ೨ ಹೊತ್ತು ಬಿಡದೆ ೪೮ ದಿವಸ ಇದು ಉಪಯೋಗಿಸಿದರೆ ಚಿಕ್ಕ ವಯಸ್ಸಿಗೆ ಆನಂದವಾಗಿ ಸಂಪಡುತ್ತಾರೆ ಬೆಲೆ ೧ ಕ್ಕೆ ೧೨ ಆಣೆ. ೪ ಬಿ ೨ ಆಣೆ

52-21 ಯು. ವಿ. ಪ್ರಸಾದಿಕ,
ಔಷಧಾಲಯ,
ಶಿವಮೊಗ್ಗಾ,
(ಸೌತ್ ಇಂಡಿಯಾ)

ಕಟ್ಟುಕತೆಯಾಯಿ ಮಲೆಜ್ವರಕ್ಕೆ—ಇದು ಆಯುರ್ವೇದ ಮತ್ತು ಕ್ಷೀಣವನು ಸೇವಿಸಿದರೂ ಗುಣವಾಗದಿರುವ ಮಲೆ ಜ್ವರ, ವಿಷಮ ಜ್ವರ, ೩—೫ ದಿವಸಕ್ಕೊಂದು ಸಾರಿ ಬರುವ ಜ್ವರ ನಡುಗಿ ಬರುವ ಜ್ವರ ಮತ್ತು ಜ್ವರಗಡ್ಡೆ ಜೋರಾಗಿರುವ ಬರುವ ಜ್ವರಗಳಿಗೆ ಖಾ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ 1—8—0, ೨ಕ್ಕೆ ರೂ 4—0—0, ೬ಕ್ಕೆ ರೂ 7—8—0 ೧೨ಕ್ಕೆ ರೂ 11



ಚಂದನಾಸವ:—ಇದು ಪ್ರಮೇಹದ ಮೇಲೆ ಕೈಕೆ ಮುಖ್ಯ ಹನಿಯಂದಿನಿ ಹೋಗುವುದು ಮೂತ್ರಕೃಚ್ಛ್ರದ ಉರಿ, ಮೂತ್ರ ಹಿಂಪಸಿಗೆ ಉರಿ, ಮೂತ್ರಾಶಯದಲ್ಲಿ ಹುಣ . ಮೂತ್ರ ಹೊಯ್ಯುವಾಗ ಉರಿಯುವುದು ಮೂತ್ರ ನಾಳದಿಂದ ಕೀವು ಬರುವುದು, ಮೂತ್ರದ್ವಾರ ಬಿಗಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ಕಷ್ಟವಾಗಿ ಸಾಮರ್ಥ್ಯವಿಲ್ಲದಿರುವುದು ಮೂತ್ರದಲ್ಲಿ ಉರಿ, ಜಾಲಾರಿಕೆ, ಸ್ವಪ್ನಾವಸ್ಥೆ, ಮೂತ್ರ ನಾಳದಲ್ಲಿ ಬಿಳುಪಾದ ನೋವು ಇವುಗಳಿಗೆ ಇದು ಒಳ್ಳೆ ಔಷಧಿ ಬಾಟ್ಲಿ 1, 3 ಕ್ಕೆ ರೂ 1—1—0 3—8—0, 6—12—0

ರೋಗನಾಶನಿಸಿ:—ಈ ಮುತಿಯನ್ನು ಕಿರಿದಲ್ಲಿ ಕಲಸಿ ಮೈಯಲ್ಲಿ ಕೋವುಪಡುವ ಭಾಗಕ್ಕೆ, ಹುಣ್ಣು ಕೋವುತ್ತಿ ಉಮುರಿ ಏಳುವುದು ಹಲ್ಲಿ ೨ಕ್ಕೆ ೬ ಆಣೆ, ೪ಕ್ಕೆ ೧೨ ಆಣೆಗಳಿಗೆ ರೂ 1 1 ಡಜನಿಗೆ ೨—೮—೦

ಪುನರ್ನವಾದ್ಯಾಪಿನಿ ಕೈಲಾಸ—ಕಿವಿಹುಣ್ಣು, ಕಲಿಪುಗುಡುವುದು, ಕರಪಿನಿ, ಕಮ್ಮಿರಿ, ಕಿವಿಯಂದ ಕೀವು ಸೋರುವುದು ಕೆಲವು ಸಲ ಕಣ್ಣು ಸೋಡಿ ಅವಸ್ಕಾರ ಕಿವಿ ಜಾಸರಿಯುವುದು, ನೆನವು ಶಕ್ತಿ ಕುಂದಿಹೋಗುವುದು ಇವುಗಳಲ್ಲಿ ಎಂದಿಗು ಗುಣವಾಗುವುದೆ ಉ ಗುವ ಕೊಡಿಲನ್ನು ನಿಲ್ಲಿಸಿ ನಿಶ್ಚಿತವಾಗಿಯು ಕೊಡಲಿಸ್ಸು ಬೇಕೆಂಬ ಕೊಡಲಿಗೆ ಸಾಂದರ್ಯವನ್ನು ಹೊಳಪನ್ನೂ ಕೊಟ್ಟು ಅಂಜಲ್ಲಿ ಹಣ್ಣಾಗು ಕೊಡಲನ್ನು ತಿಂದು ಕೊಡಾಬು ಇದ್ದರೆ ಸ್ಥಳದಲ್ಲಿ, ಹೊಸ ಕೊಡಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—೦ ಕೊಡಲನ್ನು ತಿಂದು ಕೊಡಾಬು ಇದ್ದರೆ ಸ್ಥಳದಲ್ಲಿ, ಹೊಸ ಕೊಡಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—೦
ಮಿ ಮೊಡ್ಡ ಸೀಸೆಗೆ ರೂ 2, 3 ಸೀಸೆಗೆ 5—8—0

ವಿಳಾಸ—ಮನೋಲ್ಲಾಸಿನಿ ಕಂಪನಿ,
೧. ಮಂಗಳೂರು.

ನಮ್ಮ ಕಛೇರಿಗೆ ಕರಿನಿ ನೋಡಿರಿ.

52—೬

ಕೊಡಗು.

ಸಂ ೧೯೨೦ನೇ ಇಸವಿ

ಏಪ್ರಿಲ್ ತಾ. ೧೫ನೇ ಶುಕ್ರವಾರ.

ಹಿಂದುಸ್ಥಾನದ ಬಿಕ್ಕಟ್ಟಿನ ಸ್ಥಿತಿ.

ಹಿಂದುಸ್ಥಾನದ ರಾಜಕೀಯ ಹೋರಾಟವು ಕುಣಿತರದ ಬಿಕ್ಕಟ್ಟಿನ ಸ್ಥಿತಿಗೆ ಒಂದಿದೆ. ರಾಷ್ಟ್ರ ಭಕ್ತರು ಶಂತವಾಗಿ ಸೇರಿ ಖಾನೂನಿಗೆ ವಿರೋಧವಾಗಿ ಉಪ್ಪು ಮಾಡುತ್ತಲೂ, ಮೂರುಕ್ಕಲೂ ಇದ್ದಾರೆ. ಬೊಂಬಾಯಿಯ ಸಮುದ್ರದ ದಡದಲ್ಲಿ ಐದು ಲಕ್ಷ ಜನರ ಗುಂಪು ಸೇರಿ ಉಪ್ಪಿನ ಕಾನೂನು ಭಂಗದ ಉತ್ಸಾಹದಲ್ಲಿ ಭಾಗಿಗಳಾದರು. ನಮ್ಮ ನೆರೆ ಜಿಲ್ಲೆಗಳಾದ ಮಂಗಳೂರು, ಮಲಬಾರಿನಲ್ಲಿ ಸಹ ಉಪ್ಪಿನ ಖಾನೂನನ್ನು ವಿರೋಧಿಸಿ ಉಪ್ಪು ತಯಾರಿಸುತ್ತಿದ್ದಾರೆ. ಸರಕಾರವು ಮಹಾತ್ಮ ಗಾಂಧಿಯವರೊಬ್ಬರನ್ನು ಬಿಟ್ಟು ಕಾಂಗ್ರೆಸ್ಸಿನ ಪ್ರೆಸಿಡೆಂಟರಾದ ಪಂಡಿತ ಜವಾಹರ್ ಲಾಲರೇ ಮೊದಲಾದ ಅನೇಕ ಮುಖಂಡರನ್ನು ಸೆರೆ ಹಿಡಿದು ಬರೇ ಒಲುಮೆಗೆ ತಿಳ್ಳಿಯಿಂದ ೭½ ವರ್ಷ ಕಠಿಣ ಸಜೆಯ ವರೆಗೂ ವಿಧಿಸುತ್ತಲಿದ್ದಾರೆ.

ಅಖಿಲ ಹಿಂದುಸ್ಥಾನದ ಮಹಾ ಸಭೆ (ಕಾಂಗ್ರೆಸ್)ಯ ಅಧ್ಯಕ್ಷರಿಗೆ ಆರು ತಿಂಗಳು ಸಜೆಯನ್ನು ವಿಧಿಸಿ ಸರಕಾರವು ಹಿಂದೀಯರ ಸಹ್ಯ ಸೀಕ್ಷೆಗೆ ಹೊಂಬಿದೆ. ಆದರೆ ಪತ್ರಿಕೆಗಳಲ್ಲಿ ಈ ವರಗೆ ಬಂದ ವರ್ತಮಾನದಿಂದ ಜಳವಳವು ಹೆಚ್ಚೆಚ್ಚಾಗಿಯೇ ಮುಂದರಿಯುತ್ತಲಿದೆಯೆಂತ ತಿಳಿದು ಬರುತ್ತಿದೆ. ಮಹಾರಾಷ್ಟ್ರರ ಮುಂದಾಳಾಗಿರುವ ಶ್ರೀಯುತ ಯನ್. ಸಿ. ಕೆಳ್ಕರರವರು ಸತ್ಯಾಗ್ರಹವನ್ನು ನಿರ್ವಾಹಿಸಲು ತಯಾರಾಗಿರುವರು. ಜೊಂಬಾಯಿ ಕೌನ್ಸಿಲ್ ಮೆಂಬರಾದ ಶ್ರೀಯುತ ಮುಸ್ಸಿ ಎಂಬವರೂ, ಈ ವರಗೆ ಗಾಂಧಿ ಜಳವಳಕ್ಕೆ ವಿರೋಧಿಯಿದ್ದವರು ಈಗ ತಾವು ಗಾಂಧಿಯವರು ಕೆಡಿಯವ ಕೆಲಸವನ್ನು ಕೈಕೊಳ್ಳಲು ತಯಾರಿದ್ದೇನೆಂತ ತಿಳಿಸಿರುವರು.

ಮಹಾತ್ಮ ಗಾಂಧಿಯವರ ಅಪೇಕ್ಷೆ ಮೇರೆ ಅನೇಕ ಮಹಿಳೆಯರು ಗಾರಾಯಿ ಅಂಗಡಿಗಳ ಮುಂದೆ ವಾರ ಕೂತಿದ್ದು, ಕುಡಿಯಲು ಹೋಗುವವರಿಗೆ ಕುಡಿಯಬಾರದೆಂತ ಬೋಧಿಸಲು ಗುಜರಾತ್ ವಗ್ರಾತ್ಯದಲ್ಲಿ ಪ್ರಕಾರಂಭಿಸಿರುತ್ತಾರೆ. ಶ್ರೀಮತಿ ಸರೋಜಿನಿಯವರೇ ಮುಂತಾದ ಅನೇಕ ಮಹಿಳೆಯರು ಉಪ್ಪಿನ ಖಾನೂನು ಭಂಗ ಸಹ ಮಾಡುತ್ತಲಿದ್ದಾರೆ ಈ ರೀತಿ ಮೋತೀಲೇಟ್ ವಾರ್ಟಿಗೆ ಸೇರಿದವರೂ, ಮಹಿಳೆಯರೂ ಸಹ ಸತ್ಯಾಗ್ರಹ ಸಂಗಾಮಕ್ಕೆ ಸೇರಿದ್ದರಿಂದ ಈ ಧರ್ಮಯುದ್ಧದ ರಭಸವೂ, ಒಲವೂ ಹೆಚ್ಚಾಗಿದೆ ಕಂಡಿತ ಮದನ ಮೋಹನ ಮಾಲವೀಯರು ಸೆಪೂರು ಆರ್ಥ ಶತಮಾನದಿಂದ ಸರಕಾರದೊಂದಿಗೆ ಸಹಕರಿಸಿಕ್ಕಿದ್ದವರು ಈಗ ಮಹಾತ್ಮ ಗಾಂಧಿಯವರಿಗೆ ಬೆಕ್ಕಾಸ ಕೊಡಬೇಆಂತಲೂ, ಪರದೇಶೀ ಬಟ್ಟೆಗಿ ಸಂಪೂರ್ಣವಾಗಿ ಬಹಿಷ್ಕಾರ ಹಾಕಬೇಕೆಂತಲೂ ಬೋಧಿಸಿತ್ತಾ ದೇಶಾಟನೆ ಮಾಡುತ್ತಲಿದ್ದಾರೆ. ಹಿಂದುಸ್ಥಾನದಲ್ಲೆಲ್ಲಾ ಮುಖ್ಯವಾಗಿರುವ ಕಲ್ಕತ್ತಾ ಪಟ್ಟಣದ ಕಾರ್ಪೊರೇಶನಿನ ಜುನಾಯಿತ ಮೇಯರಾದ ಅಂದರೆ ಆಧ್ಯಕ್ಷರಾದ ಶ್ರೀಯುತ ಸೆನ್ ಗುಪ್ತರು. ಸರಕಾರದವರು ಪ್ರಕಟಿಸಕೂಡದೆಂತ ಹುಕುಂ ಮಾಡಿದ ಪುಸ್ತಕಗಳನ್ನು ಪಬ್ಲಿಕ್ ವಿಟಿಂಗಿನಲ್ಲಿ ಓದಿ ಅವಶಿಂಗಳ ಕಠಿಣ ಸಜೆಗೆ ಗುರಿಯಾದರು. ಇದರಿಂದಲಿಷ್ಟಾ ಈಗಿನ ಜಳವಳವು ಉಪ್ಪಿನ ಖಾನೂನು ಭಂಗ ಮಾತ್ರವಲ್ಲದೆ ಬೇರೆ ಬೇರೆ ರೂಪವನ್ನೂ ಧರಿಸುತ್ತಲಿದೆಯೆಂತ ಗೊತ್ತಾಗುತ್ತದೆ.

ಮಹಾತ್ಮ ಗಾಂಧಿಯವರು ವಾರಂಭಿಸಿದ ಈ ಸ್ವಾತಂತ್ರ್ಯದ ಧರ್ಮ ಯುದ್ಧಕ್ಕೆ ಬರೇ ಹಿಂದೀಯರ ಸಹಾನುಭೂತಿ ದೊರೆಯಿಕ್ಕಿರುವುದು ಮಾತ್ರವಲ್ಲದೆ ಅಮೇರಿಕಾ ಮತ್ತು ಸ್ವೈಸ್ ದೇಶಗಳಿಂದ ಈ ಜಳವಳಕ್ಕೆ ಶ್ರೀಯಸ್ಸಾಗಲೆಂತ ಪ್ರಾರ್ಥನೆಗಳೂ ಒಂದಿವೆ ಈ ವಾರದಲ್ಲಿ ವಾರ್ಸಿಗೆ ಎಟಿನಲ್ಲಿ ಮೆಂಬರುಗಳಾದ ಲೇಬರ್ ಅಂದರೆ ಕೂಲಿಕಾರರ ಪಾರ್ಟಿಗೆ ಸೇರಿದ 14 ಜನರು ಮಹಾತ್ಮರಿಗೆ ಜಯವಾಗಲಿ ಎಂತ ಪತ್ರ ಬರಕೊಂಡಿದ್ದಾರೆ ಇದೇ ಪಾರ್ಟಿಯ ಮೆಂಬರಲ್ಲಿ ಒಬ್ಬರಾದ ಮೇಜರ್ ಗ್ರಹಾಮ್ ಪೋಲ್ ಎಂಬವರು ಹಿಂದುಸ್ಥಾನವನ್ನು ಬ್ರಿಟಿಷ್ ಸಾಮ್ರಾಜ್ಯದೊಳಗೆ ಸರಿಸಮಾನ ಸ್ವತಂತ್ರವುಳ್ಳ ಸಾಮಂತ ರಾಜ್ಯವನ್ನಾಗಿ ಮಾಡಿಕೊಳ್ಳಲಿದೆ ಏರಲ್ಯಾಂಡನ್ನು ಕಳಕೊಂಡಿಂತೆ ಕಳಕೊಳ್ಳಬೇಕಾಗಬಹುದೆಂತ ಕಾರಣಕೊಟ್ಟು ಒದಿರುತ್ತಾರೆ ಮದಲ್ಯಸಿನ ಸಮಿಷ ಒಬ್ಬ ಕಲೆಕ್ಟರು ಒಂದು ವಿಟಿಂಗಿನಲ್ಲಿ ಅಧ್ಯಕ್ಷರಾಗಿ ಸರಿಯ ಖಾಯಿದೆ ಭಂಗಕ್ಕೆ ಒತ್ತಾಸೆ ಕೊಡಬಾರದೆಂತ ಬೋಧಿಸುವಾಗ ಬ್ರಿಟಿಷ್ ಸಾಮ್ರಾಜ್ಯದಿಂದ ಹಿಂದುಸ್ಥಾನಕ್ಕೆ ಆದದ್ದೆಂತ ಹೇಳಿದ್ದೂ ಅಲ್ಲದೆ ಮಹಾತ್ಮಗಾಂಧಿಯವರು ಸತ್ಪುರುಷರು, ಜ್ಞಾನಿಗಳು, ಒಳ್ಳೇ ತಿಲವುಳ್ಳವರು ಎಂತ ಒಪ್ಪಿ ಅವರು ಈಗಿನ ಜಳವಳ ಮಾತ್ರ ಹುಚ್ಚುತನವೆಂತ ಹೇಳಿರುತ್ತಾರೆ ಎಲ್ಲಾ ಕದಿ ರಾಷ್ಟ್ರೀಯ ಜಳವಳವನ್ನಾದರೂ ತುಚ್ಛೀಕರಿಸುವ ಸ್ವಬಾವದವರಾದ ಜಿಲ್ಲಾ ಅಧಿಕಾರಿಗಳಾದ ಕಲೆಕ್ಟರುಗಳು ಈ ರೀತಿ ಮಹಾತ್ಮಗಾಂಧಿಯವರ ಮಹಿಮೆಯನ್ನು ಕೊಂಡಾಡಬೇಆಗಿ ಒದಿರುವಾಗ ಮಹಾತ್ಮ ಗಾಂಧಿಯವರು ಒಸರ ಪ್ರೀತಿಯನ್ನು ಸಂಪೂರ್ಣವಾಗಿ ಸಂಪಾದಿಸಿದ್ದಾರೆಂತ ಕಲೆಕ್ಟರುಗಳೂ ಸಹ ತಿಳಿದಿರುವರೆಂತ ಸ್ಪಷ್ಟವಾಯಿತು ಸ್ವರಾಜ್ಯಕ್ಕೆ ಹಿಂದೀಯರು ಆಷ್ ರಾಗಬೇಕಾದರೆ ಅನೇಕ ವರ್ಷ ಕಾಯಬೇಕೆಂತ ಹೇಳುವ ನಿವಿಲಿಯನ್ ಗುಂಪಿಗೆ ಸೇರಿದ ಕಲೆಕ್ಟರೊಬ್ಬರು ಸರಕಾರವು ಸಾಮಂತ ಸ್ವರಾಜ್ಯವನ್ನು ಕೊಡಲು ಸಿದ್ಧವಿದೆಯೆಂತ ಜನರಿಗೆ ಬೋಧಿಸಬೇಕಾಗಿ ಒಂದೆದ್ದನ್ನು ಗೊಡವರೆ ಕಾಂಗ್ರೆಸಿನ ಈಗಿನ ಜಳವಳವು ಸೆಗುಬಾಯದೆ ಸರ್ವ ಜನರನ್ನೂ ವ್ಯಾಪಿಸಿದೆಯೆಂದು ಸರಕಾರವು ಅರಿತುಕೊಂಡಿದೆಯೆಂತ ತಿಳಿಯುತ್ತಿದೆ ಈ ಕಲೆಕ್ಟರು ಹೇಳಿದ ರೀತಿ ನಿಜವಾದ ಸಾಮಂತ ಸ್ವರಾಜ್ಯವನ್ನು ಕೊಟ್ಟರೆ ಒಸರು ತೃಪ್ತರಾಗುವದರಲ್ಲಿ ಸಂಶಯವಿಲ್ಲ. ಆದರೆ ಬ್ರಿಟಿಷ್ ಸರಕಾರವು ಆತಿದಂತೆ ನಡಿಸುವದಿಲ್ಲವೆಂಬ ಭಯದಿಂದಲೇ ಜಳವಳವು ವ್ಯಾಪಿಸಿರುವಂತಿದೆ.

ಈ ರೀತಿ ಒಟ್ಟು ಹಿಂದುಸ್ಥಾನದಲ್ಲಿ ಕಾಂಗ್ರೆಸ್ ಜಳವಳವು ಬೆಳೆಯುತ್ತಾ ಹೋಗುತ್ತಿರುವಾಗ್ಗೆ ನಮ್ಮ ದೇಶದವರು ರಾಷ್ಟ್ರೀಯ ಜಳವಳದಲ್ಲಿ ಎಷ್ಟರ ಮಟ್ಟಿಗೆ ಭಾಗ ತೆಗೆದುಕೊಳ್ಳುತ್ತಿದ್ದಾರೆಂತ ವಿಮರ್ಶಿಸುವದು ಅನಿಷ್ಟವಿದೆ ಒಬಿಷ್ಟಾರರ ಸಂಘದ ತೀರ್ಮಾನದ ಮೇರೆ ಕೆಲವು ಮಹಾನೀಯರು ಸಿಷಾ ನಿಷೇಧ ಮತ್ತು ಖಾದಿ ಪ್ರಚಾರದ ಕೆಲಸ ಮಾಡುತ್ತಿರುವರು. ಕಾಂಗ್ರೆಸ್ ಅಧ್ಯಕ್ಷರ ದಸ್ಕತಿಗಿಯೂದ ವರ್ತಮಾನ ತಿಳಿದಾಗ ಪೊನ್ನಂಪೇಟೆಯಲ್ಲಿ ಕೆಲವು ಮಹಾನೀಯರು. ಒಂದು ಮೀಟಿಂಗ್ ಮಾಡಿದರು ಆದರೆ ಎಲ್ಲಾ ಪೇಟೆಗಳಲ್ಲಿ ಹರತಾಳವೇನೂ ಆಗಲಿಲ್ಲವೆಂಬುದು ವಿಷಾಧಕರವಾಗಿದೆ. ಖಾನೂನ ಬಂಗಮಾಡುವುದನ್ನು ಒಲ್ಲಿಸಲಿಕ್ಕೆ ಇದುನ ಸುಲಭೋಪಾಯವಾಗಿದ್ದ ಸ್ವರಾಜ್ಯ ಸ್ಥಾಪನೆಯ ವ್ರತಾಗ್ನಿನ ಕೊಡುವದರ ಒದಲು ಮಲಬಂಡರನ್ನು ತಿಕ್ಕಿಸುವದು ಯಕ್ಕಸಲ್ಲವೆಂತ ಸನಂದಾಯಿಗರು ತೋರಿಸಲೇ ಬೇಕು.

ಇಪ್ಪರಿಂದಲೇ ತೃಪ್ತರಾಗದೆ ದೇಶಕ್ಕೆ ಹಾನಿಯನ್ನುಂಟುಮಾಡಿ ತಿರುವ ನೀಷಾ ಸೇವನೆಯನ್ನು, ಪರದೇಶಿ ಬಟ್ಟೆ ಉಪಯೋಗವನ್ನೂ ನಿಲ್ಲಿಸುವ ಪ್ರಯತ್ನವನ್ನು ತೀವ್ರವಾಗಿ ಧರದಿಂದ ನಡಿಸಲು ವಾರಂಭಿಸಬೇಕೆಂತ ಕೆಲಸದ ಯೋಜನೆ ಸಿರುತ್ತಾರೆ ಇವರ ಸದುದ್ದೇಶಕ್ಕೆ ದೇವರು ಸಹಾಯಕರಾಗಲಿ ಇದರಲ್ಲಿ ಖಾನೂನು ಭಂಗವೇನೂ ಇಲ್ಲ. ಸ್ವಂದಿ ಸಾರಾಯಿ ಅಂಗಡಿಗಳ ಮುಂದೆಯೂ, ಪರದೇಶೀ ಬಟ್ಟೆ ಅಂಗಡಿಗಳ ಮುಂದೆಯೂ ನಿಂತು ಅಂಥಾ ವ್ಯಾಪಾರ ನಡೆಯದಂಗೆ ಹೋಗುವವರನ್ನು ಅತಿ ವಿನಯದಿಂದ ಬೇಡಿಕೊಳ್ಳುವುದೇ ಈ ಕೆಲಸಗಾರರ ಕಾರ್ಯವಾಗಿದೆ ಇವರು ಕೆಲಸ ಕೈಕೊಳ್ಳುವದಾದರೆ ಈ ಅಂಗತಿಗಳನ್ನು ತೆರೆದಿರುವಷ್ಟು ಕಾಲವೆಲ್ಲಾ ತಿಂಗಳ ಮುಂದೆ ನಿಂತೇ ಇರಬೇಕು. ಈ ತರಹದ ಕಾರ್ಯದಿಂದ ದೇಶದಲ್ಲಿ ನೀಷಾ ನಿಷೇಧದ ಕಾರ್ಯಕ್ಕೆ ತುಂಬಾ ಚಾಗ್ರತಿಯೂಗಬಹುದೆಂಕ ನಂಬುತ್ತೇವೆ ಇಂಥಾ ಕೆಲಸಕ್ಕೆ ಸ್ವಯಂ ಸೇವಕರು ತುಂಬಾ ಮುಂದೆ ಬಂದೂ, ಇಂಥಾ ಸ್ವಯಂ ಸೇವಕರ ತ್ಯಾಗದ ಕಾರ್ಯಕ್ಕೆ ಧನ ಸಹಾಯ ಮಾಡಿಯೂ ಮತ್ತು ಕುಡುಕತನವನ್ನು ಬಿಟ್ಟೂ ನಮ್ಮ ದೇಶೀಯರು ಒಟ್ಟು ಹಿಂದೂಸ್ಥಾನದ ಹೋರಾಟದಲ್ಲಿ ಭಾಗಿಗಳಾಗಲಿ ಬೇಕಂತ ಅಪೇಕ್ಷಿಸುತ್ತೇವೆ

ಜನಿವಾರ್ದಾರರ ಸಂಘದ ಪ್ರಚಾರ ಕೆಲಸ.

ಜನಿವಾರ್ದಾರರ ಸಂಘದ ಜನರಲ್ ಸೆಕ್ರೆಟರಿಯವರ ಕೋರಿಕೆ ಮೇರೆ ಈ ತಾ 12ನೇ ಶನಿವಾರ ಸುಧಾಹ್ನದ ೧೧ಟಿ 2 ಗಂಟೆಗೆ ನಾಪೋಕ್ಲು ರಥದಲ್ಲಿ ನಾಪೋಕ್ಲು ನಾರ್ಡಿನಲ್ಲಿ ಒಂದು ಪಬ್ಲಿಕ್ ವಿಟಿಂಗು ನಡೆಯಿತು. ಸುಮಾರು 10 ಜನರು ನೆರೆದಿದ್ದರು. ಮೆ. ನಾಪಂಡವಂಡ ಮೊಣ್ಣಪ್ಪನವರು ಅಧ್ಯಕ್ಷರಾಗಿದ್ದರು

ಸಂಘದ ಜನರಲ್ ಸೆಕ್ರೆಟರಿಯೊದ ಮೆ. ಪಿ ಎ ಬೆಳ್ಯಪ್ಪನವರು ಹಿಂದೂಸ್ಥಾನದ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ, ಪರದೇಶೀ ಬಟ್ಟೆಯನ್ನು ಸಂಪೂರ್ಣ ಬಹಿಷ್ಕರಿಸಿ ಕೈಮಗ್ಗ ಬಟ್ಟೆ ಕೈನೂಲಿನಿಂದ ತಯಾರಾಗುವ ಖಾದಿ ಬಟ್ಟೆಯನ್ನೇ ಯಾಕೆ ಧರಿಸಬೇಕೆಂಬದಕ್ಕೆ ಸಕಾರಣಗಳನ್ನು ಕೊಟ್ಟು ವಿಷಾತಾಪ ಪಡಿದ್ದೆಲ್ಲದೆ, ಕುಡಿತನದಿಂದ ದೇಶದವರಲ್ಲಿ ಉಂಟಾಗುತ್ತಿರುವ ಧನ ಮಾನ ಮತ್ತು ಪ್ರಾಣಹಾನಿಯನ್ನು ವರ್ಣಿಸಿ, ನೀಷಾ ನಿಷೇಧವನ್ನು ಸಾಧಿಸುವ ವಿಧಾನಗಳನ್ನು ಕುರಿತು ಭಾಷಣ ಮಾಡಿದರು ಮೆ ಗಳಾದ ಕೆ. ಪಿ. ಚಿಣ್ಣಪ್ಪನವರು, ಅಬ್ದುಲ್ ರಹಮಾನ್ ಖೈಶ್ಕಿಯವರು, ನಾಯಕಂಡ ಮುದ್ದಯ್ಯನವರ, ಚೆಪ್ಪುಡೀಯಂಡ ಸುಬ್ಬಯ್ಯನವರು ಮತ್ತು ಕಿಡಿ ಮಾಡ ನಂಜಪ್ಪನವರು ಮೇಲಿನ ವಿಷಯಗಳಿಗೆ ಒತ್ತಾಸೆಯೊಗಿ ಮಾತಾಡಿದರು. ಆದರೆ ಮೆ ಚೀಯಕಪೂವಂಡ ದೇವ್ಯಯ್ಯನವರು (ಸೇಂದಿ ಕಂಟ್ರಾಕ್ಟರು) ವಿರೋಧವಾಗಿ ಮಾತಾಡಿ ಸಭೆಯ ನೆಗೆಗೇಡಿಗೆ ಈಡಾದರು ಅಧ್ಯಕ್ಷರೂ ಒತ್ತಾಸೆಯಾಗಿ ಮಾತಾಡಿದರು ನಂತರ ನಾಪೋಕ್ಲು ನಾಡಿನ ನಾಲ್ಕೂ ಮೂಲೆಗಳಲ್ಲಿ ಸುತ್ತಿ ವಿಟಿಂಗು ಮಾಡಿ ನಿಷಾ ನಿಷೇಧವನ್ನು ನಾಧಿಸಲು ಗ್ರಾಮಸ ಕಮಿಟಿಗಳನ್ನು ನೇಮಿಸಲು ಈ ಕೆಳಗಿನ ಮಹನೀಯರು ಒಪ್ಪಿಕೊಂಡರು. ಮೆ. ಗಳಾದ (1) ಪಾಯಕಂಡ ಮುದ್ದಯ್ಯನವರು, (2) ಕುಲ್ಲಟ್ಟಿರ ಬಿದ್ದಯ್ಯನವರು, (3) ಬದ್ಯಾಟಂಡ ದೇವ್ಯಯ್ಯನವರು, (4) ಜೊಟ್ಟೇಯಂಡ ಸುಬ್ಬಯ್ಯನವರು, (5) ಆರೆಯಡ ವಿಯ್ಯಮ್ಮನವರ್, (6) ಬೆಟ್ಟೋಳಂಡ ಮೊಣಯ್ಯನವರು, (7) ಯಂ ಆರ್ ಪಿಂ ಕಸ್ಯೆಯ್ಯನವರು ಮತ್ತು (8) ಕೇಲಟ್ಟಿರ ಮುದ್ದಯ್ಯನವರ.

ಪಿ. ಐ. ಬೆಳ್ಯಪ್ಪ.
(ಜ ಸೆಕ್ರೆಟರಿ).

ಜನಿವಾರ್ದಾರರ ಸಂಘದ ಕಮಿಟಿ ವಿಟಿಂಗು.

ಈ ಕಮಿಟಿ ವಿಟಿಂಗು ತಾ 16ರಲ್ಲಿ ಮಡಿಕೇರಿಯಲ್ಲಿ ಸಂಘದ ಆಫೀಸಿನಲ್ಲಿ ನಡೆಯಿತು ಹಾಜರಿದ್ದ ಮೆಂಬರುಗಳು- ಮೆ. ಪಿ ಯನ್ ವೆಂಕಪ್ಪಯ್ಯನವರು, (ಆಧ್ಯಕ್ಷರು) (2) ಮೆ. ಗಳಾದ ಯಂ ಯಂ. ಚಿಣ್ಣಪ್ಪನವರು, (3) ಕೊಳ್ಳಿಮಾಡ ಕರುಂಬಯ್ಯನವರು, (4) ಚಂಗೀರ ಅಪ್ಪಯ್ಯನವರು (5) ಯಂ. ಅಬ್ದುಲ್‌ರಹೂರ್‌ಖಾನ್ ಖೈಶ್ಕಿಯವರು, (6) ಕೋಟೆರ ಚಿಣ್ಣಪ್ಪನವರ, (7) ಯಂ ಯಂ. ಸಿದ್ದೀಕ್‌ರವರು ಮತ್ತು (8) ಪಂಡ್ಯಂಡ ಬೆಳ್ಯಪ್ಪನವರು

1 ತಾ. 26—3—1930ರ ಕಮಿಟಿ ವಿಟಿಂಗಿನ ಪ್ರೊಸಿಡಿಂಗ್ಸನ್ನು ಓದಿ ಒಪ್ಪಲಾಯಿತು.

2 ಮೂರ್ಜಿ ತಿಂಗಳ ಜಮೆ ಮತ್ತು ಬರ್ಚಿನ ಲೆಕ್ಕ ಓದಿ ಮಂಜೂರು ಮಾಡಲಾಯಿತು

3. 1921—1930ನೇ ವರ್ಷದ ಲೆಕ್ಕವನ್ನು ಮೆ ಪಿ. ಕೆ. ಮಣ್ಣನವರಿಂದ ಆಡಿಟ್ ಮಾಡಿಸಬೇಕೆಂತಲೂ ಮತ್ತು ಅವರಿಗೆ ಈ ಉದ್ದಿಶ್ಯ ರೂ 15 ಫೀಸು ಕೂಡಬೇಕೆಂತಲೂ ತೀರ್ಮಾನವಾಯಿತು

4. ಸಂಘದ 1929ನೇ ಸಂವತ್ಸರದ ಲೆಕ್ಕವನ್ನು ರೂಲ್ 17ರ ಮೇರೆ ಜೆಕ್ಕು ಮಾಡಲು ಮೆ ಎಂಡಂ ಕಾರ್ಯಪ್ಪನವರನ್ನು ಮತ್ತು ಮೆ. ಎ ಆರ್. ಆದಿಮೂಲ ನಾಯಡ ರವರನ್ನು ಸೇಮಿಸಬಹದೆಂತ ತೀರ್ಮಾನಿಸಲಾಯಿತು.

5 ಅಧ್ಯಾಸನ ಕೌನ್ಸಿಲ್ ಮೆಂಬರಾದ ಮತ್ತು ಸ್ವರಾಜ್ಯ ಪಾರ್ಟಿ ಯ ಪ್ರಂದಾಳಾಗಿದ್ದ ಸಾಮಿ ವೆಂಕಟಾಚಲಂ ಪಟ್ಟಿಯವರನ್ನು ಈ ವರ್ಷದ ಜನರಲ್ ವಿಟಿಂಗಿನ ಅಧ್ಯಕ್ಷರನ್ನಾಗಿ ಕರೆಸಿಕೊಳ್ಳಲು ತೀರ್ಮಾನವಾಯಿತು

6 ಈ ವರ್ಷದ ಜನರಲ್ ವಿಟಿಂಗಿನ ಅಧ್ಯಕ್ಷರಾಗಲು ಒಪ್ಪಿದ ಶ್ರೀಯುತ ಸಾಮಿ ವೆಂಕಟಾಚಲಂ ಪೆಟ್ಟಿಯವರು ಮೇ ತಿಂಗಳ 3 ಮತ್ತು ೪ರಲ್ಲಿ ವಿಟಿಂಗಿಗೆ ಬರಲು ಒಪ್ಪಿರುವುದರಿಂದಲೂ, ರೂಲ್ ಮೇರೆ ನೋಟೀಸ್ ಕೊಡಲು ಕಾಲ ವಿರಿದಿಯೂ ಅಧ್ಯಕ್ಷರ ಅನುಕೂಲಕ್ಕಾಗಿಯೂ ಆದಕ್ಕಿಂತ ಮುಂದೆ ವಿಟಿಂಗನ್ನು ಮುಂದರಿಸದರೆ ಬಹಳ ಕಡವಾಗುತ್ತೆಯದ್ದರಿಂದಲೂ ಮೇ ತಾ. 3 ಮತ್ತು ೪ರಲ್ಲಿ ವಿಟಿಂಗನ್ನು ನಡಿಸಲು ನಿಶ್ಚಯಿಸಲಾಯಿತು ಪಿ. ಎನ್. ವೆಂಕಪ್ಪಯ್ಯ,
(ಅಧ್ಯಕ್ಷರು)

ದೇಶೀಯರಲ್ಲಿ ವಿನಂತಿ.

